# ನೇಸರು

## ಮೈಸೂರು ಅಸೋಸಿಯೇಷನ್ ಮುಂಬೈ

₹ 5/-

Nesaru Tingalole Vol XXXII - 10 October 2014

PAGES 16



ವಿದಾಯ ಹೇಳಿದ ಶ್ರೀ ವಿ. ರಾಮಭದ್ರ ಅವರಿಗೆ ಹೊಸ ಅಧ್ಯಕ್ಷರಾದ ಶ್ರೀಮತಿ ಕೆ. ಕಮಲಾ ಅವರಿಂದ ಸನ್ಮಾನ

**The Mysore Association, Bombay**
393, Bhau Daji Road, Matunga, Mumbai - 400 019.
Tel.: 2402 4647, 2403 7065 • Fax : 2401 0574
Email : mysoreassociation.mumbai@gmail.com

# ಶ್ರೀ ವಿ. ರಾಮಭದ್ರ ಅವರಿಗೆ ತುಂಬು ಹೃದಯದ ಬೀಳ್ಕೊಡುಗೆ



ಅಸೋಸಿಯೇಶನ್ನಿನ ಕಾರ್ಯಕಾರಿ ಸಮಿತಿಯ ಮುಂಚೂಣಿಯಲ್ಲಿ ಅಧ್ಯಕ್ಷರಾಗಿ ನಿಂತು ಆರು ವರ್ಷಗಳ ಕಾಲ ಅದರ ಎಲ್ಲ ವಹಿವಾಟನ್ನು ತುಂಬು ಉತ್ಸಾಹದಿಂದ ನಡೆಸಿಕೊಂಡು ಬಂದು ಇದೀಗ ತಮ್ಮ ಇತರ ಕಾರ್ಯಬಾಹುಳ್ಯದಿಂದಾಗಿ ಅಸೋಸಿಯೇಶನ್ನಿನ ಅಧ್ಯಕ್ಷತೆಯನ್ನು ಹೊಸಬರಿಗೆ ವಹಿಸಿಕೊಟ್ಟು ಶ್ರೀ. ವಿ. ರಾಮಭದ್ರ ಅವರು ನಿವೃತ್ತರಾಗಿರುತ್ತಾರೆ.

ಶ್ರೀ. ರಾಮಭದ್ರ ಅವರು ಹೆಸರಾಂತ ಮನೆತನಕ್ಕೆ ಸೇರಿದವರು. ಅವರು 'ಕನ್ನಡದ ಆಸ್ತಿ' ಆದ ಮಾಸ್ತಿ ವೆಂಕಟೇಶ ಅಯ್ಯಂಗಾರರ ಮೊಮ್ಮಗ. ಅಜ್ಜನ ಸಾನಿಧ್ಯದಲ್ಲೇ ಬಾಲ್ಯವನ್ನು ಕಳೆದ ರಾಮಭದ್ರ ಅವರಿಗೆ ಚಿಕ್ಕಂದಿನಿಂದಲೇ ಸಂಗೀತ ಸಾಹಿತ್ಯಗಳಲ್ಲಿ ಆಸಕ್ತಿ ಬೆಳೆದು ಬಂದಿತ್ತು. ಹೀಗಾಗಿ ಅಸೋಸಿಯೇಶನ್ನಿನ ಅಧ್ಯಕ್ಷರಾಗುವ ಅವಕಾಶ ಒದಗಿ ಬಂದಾಗ ಕನ್ನಡದ ಸೇವೆ ಮಾಡುವ ಅವಕಾಶವೆಂದು ಸಂತೋಷಪಟ್ಟರು.

ವೃತ್ತಿಯಲ್ಲಿ ಸಿವಿಲ್ ಇಂಜಿನಿಯರ್ ಆಗಿರುವ ಶ್ರೀ. ರಾಮಭದ್ರ ಅವರು 1960 ರಲ್ಲಿ ಮುಂಬಯಿಯಲ್ಲಿ ಹಿಂದುಸ್ತಾನ ಕನ್‌ಸ್ಟ್ರಕ್ಷನ್ ಕಂಪನಿ ಸೇರಿ ಅದರ ಆಪರೇಶನ್ಸ್ ವಿಭಾಗದ ಉಪಾಧ್ಯಕ್ಷರಾಗಿ ನಿವೃತ್ತರಾದರು. ತಮ್ಮ ಕಾರ್ಯಾವಧಿಯಲ್ಲಿ ಅನೇಕ ಹೊರದೇಶಗಳ ಪ್ರಾಜೆಕ್ಟ್ಸ್ ಅನ್ನು ಕೂಡ ನಿರ್ವಹಿಸಿರುತ್ತಾರೆ. ಅವರು MMRDA, MSRDL, ICT, World, ASIAN Development Bank, Panorama Universal ಮುಂತಾದ ಸಂಸ್ಥೆಗಳಿಗೆ ಸಲಹೆಗಾರರಾಗಿರುತ್ತಾರೆ. ಸಿವಿಲ್ ಇಂಜಿನಿಯರಿಂಗ್ ಕ್ಷೇತ್ರದಲ್ಲಿ ಇವರ ಕೊಡುಗೆಯನ್ನು ಗಮನಿಸಿ ಇವರನ್ನು 'ಭಾರತ ಜ್ಯೋತಿ' ಎಂಬ ಗೌರವದಿಂದ ಸನ್ಮಾನಿಸಿರುತ್ತಾರೆ.

ಇವರ ಕಾಲದಲ್ಲಿ ಅಸೋಸಿಯೇಶನ್ ಅನೇಕ ಉತ್ತಮ ಕಲಾಕಾರರನ್ನು ಕರೆಸಿ ಕಾರ್ಯಕ್ರಮಗಳನ್ನು ನಡೆಸಿದೆ. ಎಷ್ಟೋ ಕಲಾವಿದರು ರಾಮಭದ್ರ ಅವರ ಸ್ನೇಹಕ್ಕೆ ಕಟ್ಟು ಬಿದ್ದು ಸಂತೋಷದಿಂದ ಮುಂಬಯಿಯವರೆಗೆ ಬಂದು ಅಸೋಸಿಯೇಶನ್ನಿನಲ್ಲಿ ಕಾರ್ಯಕ್ರಮವನ್ನು ಕೊಟ್ಟಿರುತ್ತಾರೆ. ಶ್ರೀ. ರಾಮಭದ್ರ ಮತ್ತು ಶ್ರೀಮತಿ ಲಲಿತಾ ಅವರು ಅಸೋಸಿಯೇಶನ್‌ನ ಎಲ್ಲ ಕಾರ್ಯಕ್ರಮಗಳಲ್ಲೂ ಬಹಳ ಆಸಕ್ತಿಯಿಂದ ಭಾಗವಹಿಸಿರುತ್ತಾರೆ. ಅವರೇ ಅನೇಕ ಕಲಾವಿದರ, ಕಾರ್ಯಕ್ರಮಗಳ ಪ್ರಾಯೋಜಕತ್ವವನ್ನು 'ಮಾಸ್ತಿ ಜೀವನ ಕಾರ್ಯಾಲಯ' ಮತ್ತು 'ಮಾಸ್ತಿ ಫೌಂಡೇಶನ್' ಪರವಾಗಿ ನಿರ್ವಹಿಸಿದ್ದಾರೆ. ಇನ್ನು ಮುಂದೆಯೂ 'ಮಾಸ್ತಿ ಫೌಂಡೇಶನ್' ಮುಖಾಂತರ ಅನೇಕ ಕಾರ್ಯಕ್ರಮಗಳನ್ನು ನಡೆಸುವ ಆಶಯವನ್ನು ವ್ಯಕ್ತಪಡಿಸಿರುತ್ತಾರೆ.

ಶ್ರೀ. ರಾಮಭದ್ರ ಅವರ ಕಾಲದಲ್ಲಿ ಬಹಳ ದಿನಗಳಿಂದ ಆಲೋಚಿಸಿದ್ದ ಒಂದು ಬಹು ದೊಡ್ಡ ಕಾರ್ಯ ಪರಿಪೂರ್ಣಗೊಂಡಿದೆ. ಅಸೋಸಿಯೇಶನ್‌ನ ಮುಂದಿನ ಆವರಣಕ್ಕೊಂದು ಹೊಸ ರೂಪ ಬಂದುದಲ್ಲದೆ, ಮೊದಲ ಮಹಡಿಯಲ್ಲಿ ಸಕಲ ಅನುಕೂಲಗಳನ್ನೊಳಗೊಂಡ ಕಿರು ಸಭಾಗೃಹವೊಂದು ಸಿದ್ಧವಾಗಿದೆ. ಮೊದಲಿದ್ದ ಸಭಾಗೃಹವೂ ಹೊಸ ವ್ಯವಸ್ಥೆಗಳನ್ನೊಳಗೊಂಡಿದೆ.

ಅವರ ಈ ಎಲ್ಲ ಕೊಡುಗೆಗಳಿಗೆ ಅಸೋಸಿಯೇಶನ್ ಶ್ರೀ ರಾಮಭದ್ರ ಅವರಿಗೆ ಚಿರಋಣಿಯಾಗಿರುತ್ತದೆ. ದೇವರು ಅವರಿಗೂ ಅವರ ಕುಟುಂಬಕ್ಕೂ ಆಯುರಾರೋಗ್ಯ ಭಾಗ್ಯವನ್ನು ಕೊಟ್ಟು ಇನ್ನಷ್ಟು ಮತ್ತಷ್ಟು ಕನ್ನಡದ ಕೆಲಸ ಅವರಿಂದ ನಡೆಯಲಿ ಎಂಬುದೇ ನಮ್ಮೆಲ್ಲರ ಹಾರೈಕೆ.

# ಹೊಸ ಅಧ್ಯಕ್ಷರ ಕಿರು ಪರಿಚಯ



*ಅವರದೇ ಮಾತಿನಲ್ಲಿ*

ಹುಟ್ಟಿದ್ದು ತುಮಕೂರು ಜಿಲ್ಲೆಯ ಮಧುಗಿರಿಯಲ್ಲಿ. ತಂದೆಯವರು ಕರ್ನಾಟಕ ಪೋಲೀಸ್‌ನಲ್ಲಿ ಸೇವೆ ಸಲ್ಲಿಸುತ್ತಿದ್ದ ಕಾರಣ ವರ್ಗಾವಣೆ ಸಾಮಾನ್ಯವಾಗಿದ್ದು ಪ್ರತಿ ಎರಡು ಮೂರು ವರ್ಷಗಳಿಗೊಮ್ಮೆ ಬೇರೆ ಬೇರೆ ಊರುಗಳನ್ನು ನೋಡುವ ಅವಕಾಶ ಒದಗಿ ಬಂತು. ಪ್ರಾಥಮಿಕ ಶಿಕ್ಷಣವನ್ನು ಹಾಗೂ ಮಾಧ್ಯಮಿಕ ಶಿಕ್ಷಣವನ್ನು ವಿವಿಧ ಸರ್ಕಾರಿ ಶಾಲೆಗಳಲ್ಲಿ ಕನ್ನಡ ಮಾಧ್ಯಮದಲ್ಲಿ ಪೂರ್ಣಗೊಳಿಸಿದೆನು. ಪ್ರೌಢ ಶಿಕ್ಷಣವನ್ನು ಆಂಗ್ಲ ಮಾಧ್ಯಮದಲ್ಲಿ ಮುಗಿಸಿ, ಹತ್ತನೇ ತರಗತಿ ವೇಳೆಗೆ ಬೆಂಗಳೂರನ್ನು ತಲುಪಿದೆನು. ಪ್ರೌಢ ಶಾಲೆಯಲ್ಲಿ ಹಿಂದಿಯನ್ನು ಪ್ರಥಮ ಭಾಷೆಯನ್ನಾಗಿ ಆಯ್ಕೆ ಮಾಡಿಕೊಂಡದ್ದು ನಂತರದ ದಿನಗಳಲ್ಲಿ ಬಹಳ ಪ್ರಯೋಜನಕ್ಕೆ ಬಂತು.

ವಿದ್ಯಾವರ್ಧಕ ಸಂಘದ ಕಾಲೇಜಿನಲ್ಲಿ ವಾಣಿಜ್ಯ ಶಾಸ್ತ್ರವನ್ನು ಆಯ್ಕೆ ಮಾಡಿಕೊಂಡು ಬೆಂಗಳೂರು ವಿಶ್ವವಿದ್ಯಾನಿಲಯದಿಂದ ಪದವಿಯನ್ನು ಪಡೆದು ನಂತರ ಚಾಟರ್ಡ್ ಅಕೌಂಟೆಂಟ್ ಆಗಿ ಶಿಕ್ಷಣವನ್ನು ಪೂರ್ಣಗೊಳಿಸಿದೆನು. ಸದ್ಯದಲ್ಲಿ ಇನ್ಸ್‌ಟಿಟ್ಯೂಟ್ ಫೆಲೋ ಸದಸ್ಯತ್ವವನ್ನು ಹೊಂದಿದ್ದೇನೆ.

CA ಆದ ನಂತರ ಕಳೆದ ಇಪ್ಪತ್ತೈದು ವರ್ಷಗಳಿಂದ ವಿತ್ತೀಯ ಕ್ಷೇತ್ರದಲ್ಲಿ ಸೇವೆ ಸಲ್ಲಿಸುತ್ತಾ ಬಂದಿದ್ದೇನೆ. ಪ್ರತಿಷ್ಠಿತ ಸಂಸ್ಥೆಗಳಾದ ಪವರ್ ಫೈನಾನ್ಸ್ ಕಾರ್ಪೋರೇಷನ್, ಇಂಡಿಯನ್ ಇನ್ಸಿಟಿಟ್ಯೂಟ್ ಆಫ್ ಮೆನೇಜ್‌ಮೆಂಟ್, ಬೆಂಗಳೂರು, ಬೆಂಗಳೂರು ಸ್ಟಾಕ್ ಎಕ್ಸ್‌ಚೇಂಜ್, ಬಿಜಿಎಸ್‌ಇ ಫೈನಾನ್ಶಿಯಲ್ಸ್, ಐಲ್‌ಫ್‌ಎಸ್, ಎನ್.ಎಸ್.ಇ ಮುಂತಾದ ಕಡೆ ಸೇವೆ ಸಲ್ಲಿಸುವ ಸೌಭಾಗ್ಯ ನನ್ನದಾಯಿತು. ಬೆಂಗಳೂರು ಸ್ಟಾಕ್ ಎಕ್ಸ್‌ಚೇಂಜ್‌ನ ಕಾರ್ಯಕಾರಿ ನಿರ್ದೇಶಕಿಯಾಗಿ ನೇಮಕ ಹೊಂದಿದಾಗ, ದೇಶದ ಎಕ್ಸ್‌ಚೇಂಜಿನ ಪ್ರಥಮ ಮಹಿಳಾ ನಿರ್ದೇಶಕಿ ಎಂಬ ಹೆಗ್ಗಳಿಕೆಯೂ ದೊರೆಯಿತು.

ಸದ್ಯದಲ್ಲಿ 'ಎನ್.ಎಸ್.ಇ'ಯ ನಿಯಮ ಪಾಲನಾ ವಿಭಾಗದ ಮುಖ್ಯಸ್ಥೆಯಾಗಿ ಕಾರ್ಯ ನಿರ್ವಹಿಸುತ್ತಿದ್ದೇನೆ. ವೈಯಕ್ತಿಕ ರೂಪದಲ್ಲಿ ವಿಶ್ವೇಶ್ವರಯ್ಯ ಇನ್ಸ್‌ಟ್ಯೂಟ್ ಆಫ್ ಮೆನೇಜ್‌ಮೆಂಟ್‌ನ ಕಾರ್ಯಕಾರಿ ಮಂಡಳಿಯ ಸದಸ್ಯೆಯಾಗಿದ್ದೇನೆ. ನಿಮ್ಮೆಲ್ಲರ ಹಾರೈಕೆ, ಆಶೀರ್ವಾದ ಹಾಗೂ ಸಹಯೋಗದ ಮೈಸೂರು ಅಸೋಸಿಯೇಷನ್ ಸಂಸ್ಥೆಯ ಬೆಳವಣಿಗೆಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವ ಅವಕಾಶ ಒದಗಿ ಬಂದಿದೆ. ಸಂಸ್ಥೆಯನ್ನು ಬೆಳೆಸುವುದಕ್ಕೆ ಬೇಕಾದ ಶಕ್ತಿಯನ್ನು ಭಗವಂತ ಕರುಣಿಸಲಿ ಎಂದು ಪ್ರಾರ್ಥಿಸುತ್ತೇನೆ.

**ಮೊತ್ತ ಮೊದಲ ಬಾರಿಗೆ
ಮೈಸೂರು ಅಸೋಸಿಯೇಶನ್‌ಗೆ
ಮಹಿಳಾ ಅಧ್ಯಕ್ಷೆಯಾಗಿ ಆಯ್ಕೆಗೊಂಡ
ಶ್ರೀಮತಿ ಕೆ. ಕಮಲಾ ಅವರಿಗೆ
ಹಾರ್ದಿಕ ಅಭಿನಂದನೆಗಳು.**



ನೇಸರು ಸಂಪಾದಕ ಮಂಡಳಿ

ಗೌ. ಸಂಪಾದಕರು :

**ಡಾ. ಜ್ಯೋತಿ ಸತೀಶ್**

❖ ❖❖

ಸಂಪಾದಕ ಮಂಡಳಿ:

**ಡಾ. ಮಂಜುನಾಥ್**

**ಕೆ. ಮಂಜುನಾಥಯ್ಯ**

**ನಾರಾಯಣ ನವಿಲೇಕರ್**

**ಗಣಪತಿ ಶಂಕರಲಿಂಗ**

**ನೀಲಕಂಠ ಮೇಡರ್**

❖ ❖❖

ಬೆಂಗಳೂರು ಪ್ರತಿನಿಧಿ :

**ಎಂ.ಎ.ಎನ್. ಪ್ರಸಾದ್**

❖ ❖❖

ನೇಸರುವಿನಲ್ಲಿ ಪ್ರಕಟವಾಗುವ ಬರಹಗಳಿಗೆ ಆಯಾ ಲೇಖಕರೇ ಜವಾಬ್ದಾರರು. ಅಲ್ಲಿ ಮೂಡಿ ಬಂದ ಅಭಿಪ್ರಾಯಗಳಿಗೆ ಸಂಸ್ಥೆಯು ಜವಾಬ್ದಾರಿಯಲ್ಲ. *- ಸಂ*

The views expressed by the contributors in this journal are theirs and not of the Association and the Association is not in anyway responsible for the same.

*- Ed.*

❖ ❖❖

ಸಂಪರ್ಕ ವಿಳಾಸ :

**ನೇಸರು**

ಮೈಸೂರು ಅಸೋಸಿಯೇಷನ್
393, ಭಾವು ದಾಜಿ ರಸ್ತೆ,
ಮಾಟುಂಗ,
ಮುಂಬಯಿ-400 019.
✆ 24024647 / 2403 7065
Fax : 2401 0574
Email :
mysoreassociation.mumbai@gmail.com
Website :
www.mysoreassociation.in

# ನೇಸರು

## ತಿಂಗಳೋಲೆ

**ಸಂಪುಟ 31** **ಅಕ್ಟೋಬರ್ 2014** **ಸಂಚಿಕೆ 10**

# ಅವಕಾಶಗಳು ಉದ್ಭವಿಸುದಿಲ್ಲ ನಾವೇ ಸೃಷಿಸಿಕೊಳ್ಳಬೇಕಾಗುತ್ತದೆ

"If opportunity doesn't knock, build a door" – Milton Berleಯ ಸಾಲುಗಳಿವು. ಅವಕಾಶಗಳು ಯಾವುದೇ ಮುನ್ಸೂಚನೆಯನ್ನು ನೀಡದೆ ನಮ್ಮ ಬಾಳಿನಲ್ಲಿ ಪ್ರವೇಶಿಸುವಂತವುಗಳು. ಇದನ್ನು ನಾವು ಸೂಕ್ತ ಸಮಯದಲ್ಲಿ ಗುರುತಿಸಿದ್ದೇ ಆದರೆ ನಮ್ಮ ಭಾಗ್ಯದ ಬಾಗಿಲು ತೆರೆದ ಹಾಗೆ. ನಮ್ಮ ಜೀವನದಲ್ಲಿ ಅವಕಾಶಗಳು ತನ್ನಿಂದ ತಾನೇ ಉದ್ಭವಾಗುವುದಿಲ್ಲ. ಅದನ್ನು ನಾವೇ ಸೃಷ್ಟಿಸಿಕೊಳ್ಳಬೇಕಾಗುತ್ತದೆ. ಮಹಾತ್ಮ ಗಾಂಧೀಜಿಯವರ ಒಂದು ಮಾತನ್ನು ಇಲ್ಲಿ ಉಲ್ಲೇಖಿಸಲೇಬೇಕು. "ನೀವು ನಾಳೆಯೇ ಸಾಯುವಿರಿ ಅನ್ನುವ ಹಾಗೆ ಬದುಕಿ, ಆದರೆ ಕಲಿಯುವಿಕೆ ಹೇಗಿರಬೇಕು ಎಂದರೆ ನೀವು ಶಾಶ್ವತವಾಗಿ ಬದುಕುತ್ತಿದ್ದೀರಿ ಅನ್ನುವ ಹಾಗೆ" ಎಷ್ಟೊಂದು ಮಾರ್ಮಿಕತೆ ಇದೆ ಈ ಮಾತಿನಲ್ಲಿ. ಇವತ್ತಿನ ಸಂದರ್ಭದಲ್ಲಿ ಜೀವನದಲ್ಲಿ ಸೋತವನು ಮತ್ತೆ ಮೇಲೇಳಲು ಪ್ರಯತ್ನಿಸುವುದಿಲ್ಲ. ಬದುಕಿಗೆ ಹಿಮ್ಮುಖರಾಗುತ್ತಾರೆ. ಇಂದು ನಾವು ಬಲ್ಬ್‌ನ್ನು ನೋಡಿದಾಕ್ಷಣ ನೆನಪಾಗುವ ಹೆಸರು ಥಾಮಸ್ ಎಡಿಸನ್. ಈತನನ್ನೂ ಸಮಸ್ಯೆಗಳು ಕಾಡದಿರಲಿಲ್ಲ. ಆರಂಭದಲ್ಲಿ ಎಡಿಸನ್ ಬಲ್ಬ್‌ನ ಬಗ್ಗೆ ಸಂಶೋಧಿಸುತ್ತಿರುವಾಗ ಎರಡು ಸಾವಿರದ ವಿವಿಧ ವಸ್ತುಗಳು ಲಭ್ಯವಾದವು. ಆದರೆ ಬಲ್ಬ್ ಕಂಡು ಹಿಡಿಯುವಲ್ಲಿ ವಿಫಲನಾಗುತ್ತಾನೆ. ಆಗ ಅವನ ಸಹಾಯಕ ದೂರುತ್ತಾನೆ. 'ನಾವು ಇಷ್ಟೆಲ್ಲ ಮಾಡಿದ್ದು ನೀರಿನಲ್ಲಿ ಹೋಮ ಮಾಡಿದ ಹಾಗೆ ಆಯಿತು' ಅಂತ. ಆಗ ಎಡಿಸನ್ ಅತ್ಯಂತ ಆತ್ಮವಿಶ್ವಾಸದಿಂದ ಹೇಳುತ್ತಾನೆ, "ಚಿಂತೆಯಿಲ್ಲ, ನಾವು ಈ ಸಂಶೋಧನೆಯ ಫಲವಾಗಿ ಬಹುದೂರ ಸಾಗಿ ಬಂದಿದ್ದೇವೆ. ಬಲ್ಬ್ ಮಾಡಲು ಬಳಸಲು ಸಾಧ್ಯವಾಗದ ಎರಡು ಸಾವಿರ ವಸ್ತುಗಳು ಇವೆ ಅಂತಾದರೂ ತಿಳಿಯಿತಲ್ಲ ನಮಗೆ" ಎನ್ನುತ್ತಾನೆ. ಆತ್ಮವಿಶ್ವಾಸವೆಂದರೆ ಇದು ನೋಡಿ. ಈ ಆತ್ಮವಿಶ್ವಾಸದಿಂದಲೇ ಮುಂದೆ ಎಡಿಸನ್‌ಗೆ ಬಲ್ಬ್ ಕಂಡು ಹಿಡಿಯಲು ಸಾಧ್ಯವಾಯಿತು. ಎಡಿಸನ್ ಒಂದು ರೀತಿಯಲ್ಲಿ ನಮಗೆಲ್ಲ ಮಾದರಿಯಾಗಿದ್ದಾನೆ.

ಒಮ್ಮೆ ಒಬ್ಬ ಮೇಷ್ಟ್ರು ಗೋಧಿ ಬೆಳೆದ ಗದ್ದೆಯಲ್ಲಿ ಹೀಗೆ ಅಡ್ಡಾಡುತ್ತಿರುವಾಗ ಅಲ್ಲಿಗೆ ಬಂದ ಅವರ ಶಿಷ್ಯ ಒಂದು ಪ್ರಶ್ನೆಯನ್ನು ಕೇಳುತ್ತಾನಂತೆ. ನನ್ನ ಬಾಳಿನಲ್ಲಿ ಸರಿಯಾದ ಮಾರ್ಗವನ್ನು ಆಯ್ದುಕೊಳ್ಳಲಿಕ್ಕೆ ನನಗೆ ಆಗುತ್ತಿಲ್ಲ. ಇದರ ರಹಸ್ಯವೇನು ಎಂದು ಕೇಳುತ್ತಾನೆ. ಅದಕ್ಕೆ ಅವನ ಮೇಷ್ಟ್ರು ಹೇಳುತ್ತಾರೆ. ನೀನು ಈ ಉಂಗುರವನ್ನು ಕೈ ಬೆರಳಿನಲ್ಲಿ ಹಾಕಿಕೊಂಡಿರುವೆ ಎಂದು ಕೇಳುತ್ತಾರೆ. ಅದಕ್ಕೆ ಶಿಷ್ಯ ಹೇಳುತ್ತಾನೆ, ನನ್ನ ತಂದೆ ಸಾಯುವ ಸಮಯದಲ್ಲಿ ನನಗೆ ಕೊಟ್ಟು ಹೋಗಿರುವುದು ಇದು. ಅದಕ್ಕೆ ಮೇಷ್ಟ್ರು ಹೇಳುತ್ತಾರೆ ಅದನ್ನು ನನಗೆ ಕೊಡು. ಶಿಷ್ಯ ಅದನ್ನು ಹಿಂದೆ ಮುಂದೆ ನೋಡದೆ ಗುರುವಿಗೆ ಆಜ್ಞೆಯನ್ನು ಪಾಲಿಸುತ್ತಾನೆ. ಮೇಷ್ಟ್ರು ಅದನ್ನು ಗೋಧಿಯ ಹೊಲದಲ್ಲಿ ಮಧ್ಯ ಎಸೆದು ಬಿಡುತ್ತಾರೆ. ಈಗೇನು ಮಾಡುವುದು ಎಂದು ಶಿಷ್ಯ ಗಾಬರಿಯಿಂದ ಕೇಳುತ್ತಾನೆ. ಅದಕ್ಕೆ ಮೇಷ್ಟ್ರು ಉತ್ತರಿಸುತ್ತಾರೆ. ನಾನೀಗ ನನ್ನ ಎಲ್ಲ ಕೆಲಸವನ್ನು ಬದಿಗೊತ್ತಿ ಈ ಉಂಗುರವನ್ನು ಹುಡುಕುತ್ತೇನೆ. ಈಗ ನನ್ನ ಮುಖ್ಯ ಕೆಲಸ ಉಂಗುರ ಹುಡುಕುವುದು. ಒಂದು ವೇಳೆ ನೀನು ಉಂಗುರವನ್ನು ಹುಡುಕಿದರೆ, ನೀನೇ ನಿನ್ನ ಪ್ರಶ್ನೆಗೆ ಉತ್ತರವನ್ನು ಕಂಡುಕೊಳ್ಳುವೆ. ಇದು ನಿನ್ನ ಜೀವನದ ಉಳಿದೆಲ್ಲಕ್ಕಿಂತ ಬಹಳ ಪ್ರಾಮುಖ್ಯವಾದ ಕೆಲಸ. ಇದರಲ್ಲಿ ನೀನು ವಿಜಯಿಯಾದರೆ, ಜೀವನದಲ್ಲಿ ಸರಿಯಾದ ಮಾರ್ಗವನ್ನು ಆಯ್ದುಕೊಂಡಿರುವೆ ಎಂದು ಅರ್ಥ. ಇದನ್ನು ಯಾವತ್ತೂ ಅವಶ್ಯವಾಗಿ ನೆನಪಿಡು ಎಂದು ಮೇಷ್ಟ್ರು ಮಾರ್ಗದರ್ಶನ ಮಾಡುತ್ತಾರೆ. ಸವಾಲುಗಳು ನಮ್ಮನ್ನು ಸದೃಢರನ್ನಾಗಿ ಮಾಡುವುದಲ್ಲದೆ ನಮ್ಮ ಜೀವನದ ಗತಿಯನ್ನೇ ಬದಲಾಯಿಸುತ್ತದೆ. ಜೀವನದಲ್ಲಿ ನಾವು ಮಾಡುವ ಸಂಘರ್ಷಗಳಿಂದ ನಮ್ಮಲ್ಲಿ ಸವಾಲುಗಳನ್ನು ಎದುರಿಸುವಂತಹ ಹೊಸ ರೀತಿಯ ಪ್ರಜ್ಞೆ ಬೆಳೆಯುತ್ತದೆ.

ಜೀವನವೆನ್ನುವುದು ವಿಶಾಲವಾಗಿ ಬೆಳೆದು ನಿಂತಿರುವ ಒಂದು ವೃಕ್ಷದ ಹಾಗೆ. ಅದರಲ್ಲಿ ಬೆಳೆದಿರುವ ಕಾಂಡಗಳು ನಾವು ಆಯ್ಕೆ ಮಾಡಿಕೊಳ್ಳಲಿರುವ ಮಾರ್ಗಗಳು. ಅದರ ಎಲ್ಲ ಕಾಂಡಗಳಲ್ಲಿ ಹಣ್ಣುಗಳು ಬಿಟ್ಟಿರುವುದಿಲ್ಲ. ನಮ್ಮ ಗುರಿ ಯಾವುದೋ ಒಂದು ಕಾಂಡದಲ್ಲಿ ಬೆಳೆದಿರುವ ಹಣ್ಣನ್ನು ಕೀಳುವುದು. ಅದು ಯಾವುದು ಅಂತ ಮೊದಲು ಹುಡುಕಿ, ನಂತರ ಆ ಕಾಂಡವನ್ನು ತಲುಪಿ ಹಣ್ಣನ್ನು ಪಡೆದುಕೊಳ್ಳುವುದು ನಮ್ಮ ಗುರಿಯಾಗಬೇಕು. ಅಂದರೆ ಒಟ್ಟಿನಲ್ಲಿ ಗುರಿ ಸೇರಲು ಸರಿಯಾದ ಮಾರ್ಗವನ್ನು ಆಯ್ಕೆಮಾಡಿಕೊಳ್ಳುವುದಕ್ಕೆ ಮೊದಲ ಆದ್ಯತೆ ನೀಡಬೇಕು.

ಡಾ. ಜ್ಯೋತಿ ಸತೀಶ್

# ಚಾತುರ್ಮಾಸ್ಯ ವ್ರತದ ಮಹತ್ವ

ಚಾತುರ್ಮಾಸ್ಯ ವ್ರತವು ಸರ್ವರೂ ಕಡ್ಡಾಯವಾಗಿ ಆಚರಿಸಲೇಬೇಕಾದ ವ್ರತ. ವರ್ಷಕಾಲದ ನಾಲ್ಕು ತಿಂಗಳ ಕಾಲ ಆಚರಿಸಬೇಕಾದ ವ್ರತ ಇದು. ಚುತುಃ ಅಂದರೆ ನಾಲ್ಕು, ಮಾಸ ಅಂದರೆ ತಿಂಗಳು. ಆದರೆ, ವೇದದಲ್ಲಿ ಹೇಳಿದ "ಪಕ್ಷಾ ವೈ ಮಾಸಾಃ" ಎಂಬಂತೆ ಒಂದು ಪಕ್ಷವನ್ನು ಒಂದು ಮಾಸವೆಂದು ತಿಳಿದು ಹಿಂದಿನಿಂದಲೂ ಚಾತುರ್ಮಾಸ್ಯವನ್ನು ನಾಲ್ಕು ಪಕ್ಷ ಅಂದರೆ 2 ತಿಂಗಳುಗಳಲ್ಲಿ ಆಚರಿಸಲಾಗುತ್ತಿದೆ. ಈ ವ್ರತವನ್ನು ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ, ವಿಧವೆ, ರಜಸ್ವಲೆ, ಬ್ರಹ್ಮಚಾರಿ, ಸನ್ಯಾಸಿ ಇತ್ಯಾದಿಯಾಗಿ ಎಲ್ಲರೂ ಮಾಡಲೇಬೇಕು. ನಾವೆಲ್ಲರೂ 4 ತಿಂಗಳ ಈ ಪರ್ವ ಕಾಲದಲ್ಲಿ ದೇವತಾರಾಧನೆ, ವ್ರತವನ್ನು ಆಚರಿಸಬೇಕು.

ವರ್ಷವಿಡೀ ತಿರುಗಾಡಿಕೊಂಡಿರುವ ಸನ್ಯಾಸಿಗಳು ಜನರ, ಭಕ್ತರ ಕಷ್ಟಗಳನ್ನು ಸಂಶಯಗಳನ್ನು ನಿವಾರಣೆ ಮಾಡುತ್ತಾ ಇರುವಾಗ ತಮ್ಮ ಜ್ಞಾನವನ್ನು ಇನ್ನಷ್ಟು ಹೆಚ್ಚಿಸಲು ಸಮಯ ಸಾಕಾಗದಿರುವ ಸಂದರ್ಭದಲ್ಲಿ ಈ ಚಾತುರ್ಮಾಸ್ಯ ಕಾಲ ಅದಕ್ಕಾಗಿಯೇ ಹುಟ್ಟಿಕೊಂಡಿದೆ ಎನ್ನಬಹುದು. ಇವರು ಒಂದೇ ಕಡೆಯಲ್ಲಿದ್ದುಕೊಂಡು ಜಪ, ತಪ, ಧ್ಯಾನಾದಿಗಳಿಂದ ತಮ್ಮನ್ನು ಇನ್ನೂ ಭಗವಂತನ ಸಮೀಪಕ್ಕೆ ಕರೆದೊಯ್ದು ತಮ್ಮ ಶಿಷ್ಯರನ್ನೂ, ಭಗವದ್ಭಕ್ತರನ್ನೂ ತಮ್ಮ ಪ್ರವಚನ, ಉಪದೇಶಗಳಿಂದ ಆಧ್ಯಾತ್ಮಿಕವಾಗಿ ಉನ್ನತ ಮಟ್ಟಕ್ಕೇರಿಸುತ್ತಾರೆ.

ವರ್ಷಕಾಲ ಪ್ರಾಣಿ, ಕ್ರಿಮಿಕೀಟಗಳ ವಂಶಾಭಿವೃದ್ಧಿಯ ಕಾಲ. ಜನರ ನಡಿಗೆಯಿಂದಾಗಿ ಈ ಸಣ್ಣ ಪ್ರಾಣಿಗಳಿಗೆ, ಕೀಟಗಳಿಗೆ, ಅವುಗಳ ಮೊಟ್ಟೆ ಮರಿಗಳಿಗೆ ಜೀವಕ್ಕೆ ಹಾನಿಯುಂಟಾಗಬಹುದೆಂಬ ಕಾರಣದಿಂದ ಈ ಕಾಲದಲ್ಲಿ ಹೆಚ್ಚಾಗಿ ತಿರುಗಾಡದೆ ಒಂದೇ ಕಡೆ ಇದ್ದುಕೊಂಡು ಜ್ಞಾನದ ಅರ್ಜನೆ ಮಾಡಿಕೊಳ್ಳುವುದು ಎಲ್ಲರಿಗೂ ಕ್ಷೇಮ.

ಆಷಾಢ ಶುಕ್ಲ ಏಕಾದಶಿಯಿಂದ ಹಿಡಿದು ಕಾರ್ತಿಕ ಶುಕ್ಲ ಏಕಾದಶಿಯ ಕಾಲವೇ ಚಾತುರ್ಮಾಸ್ಯ ವ್ರತ ಕೈಗೊಳ್ಳುವ ಪರ್ವಕಾಲ. ಈ ವ್ರತ ಮಾಡಿದರೆ ಮಹಾ ಪುಣ್ಯ, ಮಾಡದಿದ್ದರೆ ಮಹಾ ದೋಷ ಎಂದಿದ್ದಾರೆ ವಿದ್ವಾಂಸರು. ಚಾತುರ್ಮಾಸ್ಯ ಅವಧಿಯಲ್ಲಿರುವ ಶ್ರಾವಣ, ಭಾದ್ರಪದ, ಅಶ್ವಿಜ ಮತ್ತು ಕಾರ್ತಿಕ ಎಂಬ 4 ತಿಂಗಳುಗಳು ಬಹಳ ಮಹತ್ವಪೂರ್ಣವಾಗಿದೆ. ಇವುಗಳು ಭಗವಾನ್ ವಿಷ್ಣುವಿನ ಅತ್ಯಂತ ಪ್ರಿಯವಾದ ತಿಂಗಳುಗಳು. ಈ ಕಾಲದಲ್ಲಿ ಪರಮಾತ್ಮನು ಯೋಗನಿದ್ರೆಯನ್ನು ಪ್ರಕಟಿಸುವನು. ದೇವರು ಮಾನವರ ಹಾಗೆ ನಿದ್ರಿಸುವುದಿಲ್ಲ. ಯೋಗನಿದ್ರೆಯೂ ದೇವರ ಒಂದು ಲೀಲೆ ಭಗವಂತನು ಶಯನಾವಸ್ಥೆಯನ್ನು ತೋರುವುದರಿಂದ ಆ ಕಾಲದಲ್ಲಿ ಶುಭ ಕಾರ್ಯಕ್ರಮಗಳಾದ ವಿವಾಹ, ಉಪನಯನ, ಚೌಲ, ಗೃಹಪ್ರವೇಶ ಇತ್ಯಾದಿಗಳನ್ನು ಆಚರಿಸಬಾರದು. ಆದನೆ ನಾಮಕರಣ ಸಂಸ್ಕಾರ ಮಾಡಬಹುದು.

ಚಾತುರ್ಮಾಸ್ಯ ವ್ರತ ಹೇಗೆ, ಯಾವಾಗ ಪ್ರಾರಂಭವಾಯಿತು ಗೊತ್ತೇ? ನಮ್ಮ ಭೂಮಿಯ ಒಂದು ವರ್ಷ ದೇವತೆಗಳಿಗೆ ಒಂದು ದಿವಸ. ಪುಷ್ಯ ಮಾಸದಿಂದ ಜ್ಯೇಷ್ಠ ಮಾಸದವರೆಗೆ ದೇವತೆಗಳಿಗೆ 6 ತಿಂಗಳು ಹಗಲು ಮತ್ತು ಆಷಾಢ ಮಾಷದಿಂದ ಮಾರ್ಗಶಿರ ಮಾಸದವರೆಗೆ 6 ತಿಂಗಳು ಅವರಿಗೆ ರಾತ್ರಿ. ಒಮ್ಮೆ ವಿಷ್ಣು ವೈಕುಂಠದಲ್ಲಿದ್ದಾಗ ರಾತ್ರಿದೇವಿ ಅವರ ಬಳಿಗೆ ಬಂದು ತಾನು ಬಹಳ ದುಃಖಿತಳಾಗಿದ್ದೇನೆ. ರಾತ್ರಿ ಹೊತ್ತಿನಲ್ಲಿ ಯಾವುದೇ ಮಂಗಳ ಕಾರ್ಯಗಳು ನೆರವೇರುವುದಿಲ್ಲ. ಎಲ್ಲರೂ ಈ ಹೊತ್ತು ಅಮಂಗಳಕರ ಎನ್ನುತ್ತಾರೆ. ತಾನು ಜೀವವನ್ನೇ ತೊರೆಯುತ್ತೇನೆ. ಈ ರೀತಿಯಾಗಿ ಬದುಕಲು ತನಗೆ ಇಷ್ಟವಿಲ್ಲ, ಆಶೀರ್ವದಿಸು ಎನ್ನುತ್ತಾಳೆ. ಉಳಿದ ದೇವತೆಗಳೂ ಅದನ್ನು ಅನುಮೋದಿಸಿ ರಾತ್ರಿದೇವಿಯ ದುಃಖವನ್ನು ಪರಿಹರಿಸಿ ಅವಳಿಗೆ ಸಂತೋಷವನ್ನು ಅನುಗ್ರಹಿಸು ಎಂದು ಬಿನ್ನವಿಸುತ್ತಾರೆ. ಆಗ ವಿಷ್ಣು ರಾತ್ರಿಯಲ್ಲಿ ಇರುವ 6 ತಿಂಗಳುಗಳಲ್ಲಿ ಮೊದಲ 4 ತಿಂಗಳುಗಳು ಅತ್ಯಂತ ಶ್ರೇಷ್ಠವು, ಯಾವುದೇ ಪುಣ್ಯ ಕಾರ್ಯ, ಒಳ್ಳೆಯ ಕಾರ್ಯವನ್ನು ಈ 4 ತಿಂಗಳುಗಳಲ್ಲಿ ಮಾಡಿದರೆ ಆ ಕಾರ್ಯವು ವರ್ಷದ ಇತರ 4 ತಿಂಗಳುಗಳಲ್ಲಿ ಮಾಡಿದ ಯಾವುದೇ ಪುಣ್ಯ ಕಾರ್ಯಕ್ಕಿಂತ ಅನೇಕ ಪಟ್ಟು ಹೆಚ್ಚಿನ ಫಲವನ್ನು ಕೊಡುತ್ತದೆ. ಈ ಪುಣ್ಯದ ಫಲವು ಆಷಾಢ ಮಾಸದ ಮೊದಲ ದಿನದಿಂದಲೇ ಪ್ರಾರಂಭಿಸಿ ದಿನದಿಂದ ದಿನಕ್ಕೆ ವೃದ್ಧಿಸುತ್ತಾ ಹೋಗಿ ಒಂದು ತಿಂಗಳಿಂದ ಪ್ರತೀ ಮುಂದಿನ ತಿಂಗಳಿಗೂ ಹೆಚ್ಚುತ್ತಾ ಹೋಗಿ ಕಾರ್ತಿಕ ಮಾಸದಲ್ಲಿ ಅತೀ ಹೆಚ್ಚು ಪುಣ್ಯ ಸಂಚಯನವಾಗುತ್ತದೆ ಎಂದು ಹೇಳಿದರು. ರಾತ್ರಿದೇವಿಯು ಸಂತೋಷದಿಂದ ಹಿಂದಿರುಗಿದಳು. ಅಂದಿನಿಂದ ಈ ವ್ರತದ ಆಚರಣೆ ಪ್ರಾರಂಭವಾಯಿತು.

ಚಾತುರ್ಮಾಸ್ಯದ ಅವಧಿ ಎಲ್ಲರಿಗೂ ಪವಿತ್ರ ಹಾಗೂ ಪೂಜನೀಯವಾದುದು. ಈ ಸಮಯದಲ್ಲಿ ಯಾರು ಸ್ನಾನ, ದಾನ, ವ್ರತ, ಹೋಮ, ಜಪ ಮುಂತಾದವುಗಳನ್ನು ಮನಃಪೂರ್ವಕವಾಗಿ ಶ್ರದ್ಧಾಭಕ್ತಿಗಳಿಂದ ಮಾಡುತ್ತಾರೋ ಅವರಿಗೆ ಶ್ರೀಮನ್ನಾರಾಯಣನು ಮೋಕ್ಷವನ್ನು ಅನುಗ್ರಹಿಸುತ್ತಾನೆ. ವಿಷ್ಣು ಭಗವಂತನು ಯೋಗನಿದ್ರೆಯಲ್ಲಿರುವ ಸಮಯದಲ್ಲಿ ನಾವೆಲ್ಲರೂ ಸತ್ಸಂಗ, ದ್ವಿಜಭಕ್ತಿ, ಗುರುದೇವಾಗ್ನಿತರ್ಪಣ, ಗೋದಾನ, ವೇದಪಾಠ, ಸತ್ಕಾರ್ಯ, ಸತ್ಯಭಾಷಣ, ಗೋಭಕ್ತಿ, ದಾನ, ಭಕ್ತಿ ಸಂಕೀರ್ತನೆ, ಧರ್ಮಸಾಧನೆ ಇತ್ಯಾದಿಗಳನ್ನು ಮಾಡಿ ದೇವರನ್ನು ಒಲಿಸಿಕೊಳ್ಳುವ ಪ್ರಯತ್ನ ಮಾಡಬೇಕು. ಇವುಗಳು ನಮ್ಮ ಆಧ್ಯಾತ್ಮಿಕ ಪ್ರಗತಿಯನ್ನು ಸಾಧಿಸಲು ಸಹಾಯಕವಾಗುವವು.

ದಾನಗಳಲ್ಲೇ ಅತ್ಯಂತ ಶ್ರೇಷ್ಠವಾದುದು ಅನ್ನದಾನ. ಚಾತುರ್ಮಾಸ ಕಾಲದಲ್ಲಿ ಅನ್ನದಾನ ಮಾಡಿದರೆ ಹೆಚ್ಚಿನ ಪುಣ್ಯ ಲಭಿಸುವುದು. ಉಪವಾಸ ಮಾಡುವವರು ಬ್ರಹ್ಮಚರ್ಯವ್ರತ, ತ್ಯಾಗ, ನೆಲದಲ್ಲಿ ಮಲಗುವುದು ಮತ್ತು ವಿಷ್ಣುಪೂಜೆ ಮಾಡಬೇಕು. ಉಪವಾಸದಲ್ಲಿರುವಾಗ ನಮಗೆ ವಸ್ತುಗಳ ಬಯಕೆ ಕಡಿಮೆಯಾಗಿ ನಮ್ಮ ಮನಸ್ಸನ್ನು ದೈವತ್ವದೆಡೆಗೆ ಒಯ್ಯಲು ಮನಸ್ಸನ್ನು ಕೇಂದ್ರೀಕರಿಸಲು ಸಾಧ್ಯವಾಗುತ್ತದೆ. ಇದರಿಂದ ಆಧ್ಯಾತ್ಮಿಕ ಉನ್ನತಿಯಾಗುತ್ತದೆ. ವ್ರತಸ್ಥರು ಮದ್ಯ, ಮಾಂಸ, ಮಾದಕ ವಸ್ತುಗಳ ಸೇವನೆ ಇತರ ಯಾವುದೇ ದುಶ್ಚಟಗಳನ್ನು ತ್ಯಜಿಸಬೇಕು. 4 ತಿಂಗಳು ಆ ರೀತಿಯಲ್ಲಿದ್ದರೆ ಮುಂದೆ ಆ ಕೆಟ್ಟ ಚಾಳಿಗಳೂ ಅವರ ಬಳಿಗೆ ಸುಳಿಯಲಾರವು. ಅಧಿಕ ಲವಣಯುಕ್ತ ಆಹಾರ ಪದಾರ್ಥಗಳೂ ಒಳ್ಳೆಯದಲ್ಲ. ಹಿತಮಿತ ಆಹಾರದಿಂದ ಒಳ್ಳೆಯ ಮನಸ್ಸು, ಎಲ್ಲರಲ್ಲೂ ಅನುಕಂಪ, ಮಾನವೀಯತೆ, ಒಳ್ಳೆಯ ಸಂಸ್ಕಾರ ಬೆಳೆಯುತ್ತದೆ.

✍ ವಿದುಷಿ ವೀಣಾ ಶಾಸ್ತ್ರಿ, ಮುಂಬಯಿ

### ಚಾತುರ್ಮಾಸ್ಯದಲ್ಲಿ ವ್ರತ ನಿಯಮಗಳು

ಖಚಿತ ನಿಯಮಗಳಿಲ್ಲದಿದ್ದರೂ ಅನೇಕರು ಕಟ್ಟುನಿಟ್ಟಾಗಿ ಆಹಾರ ಸಂಹಿತೆಗಳನ್ನು ಪಾಲಿಸಿಕೊಂಡು ಬರುತ್ತಿದ್ದಾರೆ. ಚಾತುರ್ಮಾಸ್ಯದ 4 ತಿಂಗಳುಗಳಲ್ಲಿ ಪ್ರತಿಯೊಂದು ತಿಂಗಳಿಗೂ ಒಂದೊಂದು ರೀತಿಯ ವ್ರತ, ಉಪವಾಸ ಇದೆ. ಈ ಉಪವಾಸದಲ್ಲಿ ಪ್ರತಿ ತಿಂಗಳಿಗೂ ಕೆಲವು ಆಹಾರ ಪದಾರ್ಥಗಳ ಸೇವನೆಯನ್ನು ನಿಷೇಧಿಸಿದ್ದಾರೆ. ಈ ವ್ರತಗಳು ಕ್ರಮವಾಗಿ 1. ಶಾಕವ್ರತ, 2. ದಧಿವ್ರತ, 3. ಕ್ಷೀರವ್ರತ, 4. ದ್ವಿದಳ ಮತ್ತು ಬಹುಬೀಜವ್ರತ.

**1. ಶಾಕವ್ರತ :**

ಚಾತುರ್ಮಾಸ್ಯದ ಮೊದಲನೆ ತಿಂಗಳಾದ ಆಷಾಢ ಏಕಾದಶಿಯಿಂದ ಶ್ರಾವಣ ಏಕಾದಶಿಯವರೆಗೆ ಆಚರಿಸುವ ವ್ರತ ಇದು. ಈ ವ್ರತ ಆಚರಿಸುವವರು ಯಾವುದೇ ರೀತಿಯ ತರಕಾರಿ, ಹಣ್ಣುಹಂಪಲು, ಕಾಂಡ, ಬೇರು, ದಂಟು, ತೊಗಟೆ, ಎಲೆಸೊಪ್ಪುಗಳು, ಹಸಿಕೊಬ್ಬರಿ, ಒಣಕೊಬ್ಬರಿ, ಹಸಿಶುಂಠಿ ತಿನ್ನಬಾರದು. ಇವುಗಳನ್ನೆಲ್ಲಾ ದೇವರಿಗರ್ಪಿಸಬಹುದು. ಒಣಗಿದ ನೆಲ್ಲಿಕಾಯಿ, ಎಣ್ಣೆ, ಬೆಲ್ಲ,

ಮಾವಿನಬಾಳಕೆ, ಅಗಸೆಸೊಪ್ಪು, ಅಕ್ಕಿ, ಬೇಳೆಕಾಳುಗಳು, ಮೆಣಸು, ಜೀರಿಗೆ, ಹಾಲು, ಮೊಸರು, ಜೇನು, ತುಪ್ಪ, ತಾಂಬೂಲ, ಒಣಶುಂಠಿ ಮುಂತಾದವುಗಳನ್ನು ಸೇವಿಸಬಹುದು. ಶಾಕವ್ರತ ಕಾಲದಲ್ಲಿ ವಿಷ್ಣುದೇವರನ್ನು 'ಶ್ರೀಧರ' ಎಂದು ಕರೆಯುತ್ತಾರೆ.

**2. ದಧಿವ್ರತ :**

ಶ್ರಾವಣ ಶುಕ್ಲ ದ್ವಾದಶಿಯಿಂದ ಭಾದ್ರಪದ ಶುಕ್ಲ ಏಕಾದಶಿವರೆಗೆ ಈ ವ್ರತವನ್ನು ಆಚರಿಸತಕ್ಕದ್ದು. ಈ ವ್ರತಕಾಲದಲ್ಲಿ ಮೊಸರನ್ನು ಭಗವಂತನಿಗೆ ಅರ್ಪಿಸಬೇಕು. ಪಂಚಾಮೃತಕ್ಕೆ ಉಪಯೋಗಿಸಬಹುದು. ಭಕ್ಷಿಸುವುದು ಮಾತ್ರ ನಿಷಿದ್ಧ. ಉತ್ತರಾಯಣದಲ್ಲಿ ಮೊಸರನ್ನು ಬಳಸಿದರೆ ಅಧಿಕ ಉಷ್ಣದಿಂದಾಗಿ ಆರೋಗ್ಯವು ಕೆಡುತ್ತದೆ. ಶಾಸ್ತ್ರದ ಪ್ರಕಾರ ಭಗವಂತನ ಪ್ರೀತಿಗೋಸ್ಕರ ಮೊಸರನ್ನು ತ್ಯಜಿಸುವುದು. ಇತರ ದಿನಗಳಲ್ಲಿಯೂ ಮೊಸರು ಉಷ್ಣವರ್ಧಕವಾಗಿರುತ್ತದೆ. ಎಲ್ಲಾ ಕಾಲದಲ್ಲಿಯೂ ಮುಖ್ಯವಾಗಿ ರಾತ್ರಿಯಂತೂ ಮೊಸರು ತಿನ್ನಬಾರದು. ಇದರಿಂದ ಆಯುಸ್ಸು ಕ್ಷೀಣವಾಗುತ್ತದೆ. ದಧಿವ್ರತ ಕಾಲದಲ್ಲಿ ಮೊಸರು ತಿಂದರೆ ಗೋಮಾಂಸವನ್ನು ಭಕ್ಷಿಸಿದ ಪಾಪಕ್ಕೆ ಗುರಿಯಾಗುವರು. ಈ ಕಾಲದಲ್ಲಿ ಜಗತ್ತಿನ ಸಮಸ್ತ ಪಾಪಗಳೂ ಮೊಸರಿನಲ್ಲಿರುತ್ತವೆಯಂತೆ. ಹಾಗಾಗಿ ಮೊಸರು ತಿಂದವನು ಸಮಸ್ತ ಪಾಪಗಳನ್ನು ತಿಂದಂತೆ. 'ದಧಿವ್ರತ'ಕಾಲದಲ್ಲಿ ವಿಷ್ಣುವು 'ಹೃಷಿಕೇಶ' ನಾಮದಲ್ಲಿ ಪೂಜಿಸಲ್ಪಡುತ್ತಾನೆ.

**3. ಕ್ಷೀರವ್ರತ :**

ಭಾದ್ರಪದ ಶುಕ್ಲ ದ್ವಾದಶಿಯಿಂದ ಅಶ್ವಿಜ ಶುಕ್ಲ ಏಕಾದಶಿಯವರೆಗೆ ಈ ಕ್ಷೀರವ್ರತವನ್ನು ಆಚರಿಸಬೇಕು. ಈ ವ್ರತಕಾಲದಲ್ಲಿ ಭಗವಂತನಿಗೆ ಹಾಲನ್ನು ಅರ್ಪಿಸಬೇಕು. ನಾವು ಸೇವಿಸಬಾರದು. ಹಾಲಿನಲ್ಲಿ ಈ ತಿಂಗಳು ಪೂರ್ತಿ ಮನುಷ್ಯರ ಆರೋಗ್ಯವನ್ನು ಹಾಳು ಮಾಡುವ ವಸ್ತುವಿರುತ್ತದೆ. ಹಾಲನ್ನು ಸೇವಿಸಿದರೆ ಸುರೆಯನ್ನು ಪಾನ ಮಾಡಿದ ಪಾಪಕ್ಕೆ ಭಾಗಿಯಾಗುವೆವು. ಪಾಯಸಾದಿಗಳಿಗೆ ತೆಂಗಿನಕಾಯಿಯ ಹಾಲನ್ನು ಉಪಯೋಗಿಸಬಹುದು. ಕ್ಷೀರವ್ರತ ಕಾಲದಲ್ಲಿ ವಿಷ್ಣುವು 'ಪದ್ಮನಾಭ' ಎಂಬ ಹೆಸರಿನಿಂದ ಪೂಜಿಸಲ್ಪಡುತ್ತಾನೆ.

**4. ದ್ವಿದಳ ಮತ್ತು ಬಹುಬೀಜವ್ರತ :**

ಆಶ್ವಿಜ ಶುಕ್ಲ ದ್ವಾದಶಿಯಿಂದ ಕಾರ್ತಿಕ ಶುಕ್ಲ ಏಕಾದಶಿಯವರೆಗಿನ ಅವದಿಯಲ್ಲಿ ಈ ವ್ರತವನ್ನು ಆಚರಿಸಬೇಕು. ಯಾವ ಜಾತಿಯ ದ್ವಿದಳ ಧಾನ್ಯಗಳನ್ನೂ ಸೇವಿಸಬಾರದು. ಅಂಕುರವು ಬಂದಾಗ ಅಥವಾ ಬೀಜವನ್ನು ಹುರಿದಾಗ 2 ದಳಗಳು ಯಾವ ಧಾನ್ಯದಲ್ಲಿ ಕಾಣಿಸುವುದೋ ಅವು ದ್ವಿದಳ ಧಾನ್ಯಗಳು. ಬಹುಬೀಜಗಳು ಒಳಗಿದ್ದು ಹೊರಗೆ ಒಂದೇ ಸಿಪ್ಪೆ ಅಥವಾ ದಪ್ಪ ತೊಗಟೆಯಿಂದ ಆವೃತವಾಗಿರುವ ಹಣ್ಣುಗಳೂ ಈ ವ್ರತಕಾಲದಲ್ಲಿ ಸೇವನೆಗೆ ನಿಷಿದ್ಧ. ಉದಾ : ಸೌತೆ, ಪಡುವಲ, ಹಾಗಲ, ಸೀತಾಫಲ, ಹಲಸು, ಮೂಸಂಬಿ, ಉದ್ದು, ಹೆಸರು, ಕಡಲೆ, ಹುರುಳಿ, ತೊಗರಿ, ಗೋಡಂಬಿ, ಅಲಸಂಡೆ, ಯಾಲಕ್ಕಿ ಇವುಗಳೆಲ್ಲಾ ವರ್ಜ್ಯ. ಈ ಕಾಲದಲ್ಲಿ ಇವುಗಳನ್ನು ತಿಂದರೆ ಕ್ರಿಮಿಕೀಟಗಳನ್ನು ತಿಂದ ಪಾಪಕ್ಕೆ ಗುರಿಯಾಗುವರು.

ಇನ್ನೂ ಅನೇಕ ರೀತಿಯ ವ್ರತಗಳನ್ನು ಈ ಚಾತುರ್ಮಾಸ್ಯ ಕಾಲದಲ್ಲಿ ಭಕ್ತರು ಆಚರಿಸುತ್ತಾರೆ.

**ಧಾರಣ - ಪಾರಣ ವ್ರತ :**

ಈ ವ್ರತಸ್ಥನು ಒಂದು ದಿನ ಬಿಟ್ಟು ಮರುದಿನ ಭೋಜನ ಸ್ವೀಕರಿಸತಕ್ಕದ್ದು. ನಾಲ್ಕೂ ತಿಂಗಳೂ ಈ ರೀತಿ ಮಾಡಬೇಕು. ಕೊನೇ ಪಕ್ಷ ಕಡೇ ತಿಂಗಳಲ್ಲಾದರೂ ಈ ರೀತಿ ಮಾಡಬೇಕು. ಉಪವಾಸದ ದಿವಸ ಪುಣ್ಯಾಹವಾಚನ ಮಾಡಿ ಸಂಕಲ್ಪ ಮಾಡಿ ವ್ರತವನ್ನು ಪ್ರಾರಂಭಿಸಬೇಕು. ನಾರಾಯಣನಿಗೆ 108 ಬಾರಿ ಅರ್ಘ್ಯವನ್ನು ಬಿಟ್ಟು ನಂತರ ಭೋಜನ ಮಾಡಬೇಕು. ಉದ್ಯಾಪನೆ ಮಾಡುವಾಗ ಲಕ್ಷ್ಮೀನಾರಾಯಣನ ಪ್ರತಿಮೆಯನ್ನು ಪಂಚಾಮೃತದಿಂದ ಅಭಿಷೇಕ ಮಾಡಿ, ಅರ್ಚಿಸಿ, ಪುರಾಣಶ್ರವಣ ಮಾಡಿ, ಜಾಗರಣೆ ಮಾಡಿ ಮಾರನೆ ದಿನ ಬ್ರಾಹ್ಮಣ ಭೋಜನ ಮಾಡಿಸಬೇಕು. ಸುಗ್ರೀವನು ತನ್ನಣ್ಣ ವಾಲಿಯನ್ನು ಕೊಂದ ಪಾಪ ಪರಿಹಾರಕ್ಕಾಗಿ ಶ್ರೀರಾಮನ ಆಜ್ಞೆಯಂತೆ ಈ ವ್ರತವನ್ನು ಮಾಡಿದನು.

ನಾರದರು ತಮ್ಮ ಹಿಂದಿನ ಜನ್ಮದಲ್ಲಿ ಈ ವ್ರತವನ್ನು ಮಾಡಿದ್ದರಿಂದ ಅವರು ಜಿತೇಂದ್ರಿಯರಾದರು. ಮಹಾಭಾರತ ಯುದ್ಧದಲ್ಲಿ ತನ್ನ ಬಂಧು ಬಾಂಧವರನ್ನು ವಧಿಸಿ ದುಃಖಿತನಾಗಿದ್ದ ಧರ್ಮರಾಜನು ಈ ವ್ರತ ಮಾಡಿ ಸರ್ವ ಪಾಪದಿಂದ ಮುಕ್ತನಾದನು.

**ಪರಾಕವ್ರತ :**

ಸರ್ವಪಾಪ ಪ್ರಾಯಶ್ಚಿತ್ತರೂಪವಾದ ಈ ವ್ರತವನ್ನು ವರ್ಷಕ್ಕೆ 12 ದಿನಗಳ ಕಾಲ 3 ವರ್ಷ ಅಂದರೆ 36 ದಿನ ಉಪವಾಸ ಮಾಡಿದ್ದರಿಂದ ಬ್ರಹ್ಮಹತ್ಯಾದಿ ಸಮಸ್ತ ಪಾಪಗಳೂ ಪರಿಹಾರವಾಗುವವು.

**ಲಕ್ಷತುಳಸೀಪ್ರದಕ್ಷಿಣೆ :**

ಇದು ಚಾತುರ್ಮಾಸ್ಯದಲ್ಲಿ ತುಳಸೀದೇವಿಗೆ ಲಕ್ಷ ಪ್ರದಕ್ಷಿಣೆಯನ್ನು ಹಾಕುವ ವ್ರತ. ಈ ವ್ರತವನ್ನು ಆಚರಿಸಿದರೆ ಬೇಡಿದ ಇಷ್ಟಾರ್ಥಗಳು ಸಿದ್ಧಿಯಾಗುವವು. ತುಳಸಿಗೆ ಲಕ್ಷ ಪ್ರದಕ್ಷಿಣೆಯನ್ನು ಪ್ರಾತಃಕಾಲ, ಮಧ್ಯಾಹ್ನ ಹಾಗೂ ಸಾಯಂಕಾಲ ಮಾಡಬಹುದು.

**ಷಷ್ಟಕಾಲ ವ್ರತ :**

ಚಾತುರ್ಮಾಸ್ಯದಲ್ಲಿ 6 ಹೊತ್ತಿಗೊಮ್ಮೆ ಊಟ ಮಾಡುವ ವ್ರತವೇ ಷಷ್ಟ ಕಾಲವ್ರತ. ಈ ರೀತಿ ಚಾತುರ್ಮಾಸ್ಯ ಪೂರ್ತಿ ನಾಲ್ಕೂ ತಿಂಗಳೂ 5 ಹೊತ್ತು ಉಪವಾಸ ಮತ್ತು 6ನೇ ಹೊತ್ತು ಆಹಾರ ಸ್ವೀಕರಿಸಬೇಕು. ಈ ರೀತಿ ಮಾಡಲು ಸಾಧ್ಯವಿಲ್ಲದಿದ್ದರೆ ಕಾರ್ತಿಕಮಾಸದಲ್ಲಿಯಾದರೂ ಈ ವ್ರತವನ್ನು ಆಚರಿಸಬಹುದು.

ವ್ರತ ಕೈಗೊಂಡಿರುವವರು ಪ್ರತಿ ದಿವಸ ನಕ್ಷತ್ರ ಮಂಡಲ ದರ್ಶನದ ನಂತರ ಊಟ ಸೇವಿಸುವವನಾದರೆ ಅವನು ಧನಿಕನೂ ಶ್ರೀಮಂತನೂ ಆಗುತ್ತಾನೆ. ದಿನ ಬಿಟ್ಟು ದಿನ ಆಹಾರ ಸೇವಿಸುವವನು ಯಾವಾಗಲೂ ವೈಕುಂಠದಲ್ಲಿ ನೆಲೆಸುವವನಾಗುತ್ತಾನೆ ಅಂದರೆ ಮೋಕ್ಷ ಹೊಂದುತ್ತಾನೆ. 5 ದಿವಸ ಉಪವಾಸ ಮಾಡಿ 6ನೇ ದಿವಸ ಆಹಾರ ಸೇವಿಸುವವನು ಅಶ್ವಮೇಧ ಯಾಗ ಮತ್ತು ರಾಜಸೂಯಯಾಗ ಮಾಡಿದ ಫಲವನ್ನು ಪಡೆಯುತ್ತಾನೆ. ಈ ಉಪವಾಸ ವ್ರತಗಳ ಮುಖ್ಯವಾದ ಅಂಶವೆಂದರೆ ಇವು ನಮ್ಮ ಶರೀರವನ್ನು ಶುದ್ಧೀಕರಿಸುತ್ತವೆ. ಶರೀರದಲ್ಲಿರುವ 'ಟಾಕ್ಸಿನ್'ಗಳನ್ನು ಹೊರಹಾಕಿ ಆರೋಗ್ಯವನ್ನು, ಚೈತನ್ಯವನ್ನು ಮರುಪಡೆಯಲು ಸಹಕಾರಿಯಾಗಿವೆ.

ಚಾತುರ್ಮಾಸ್ಯ ಕಾಲದ ನಾಲ್ಕೂ ತಿಂಗಳುಗಳು ರೈತರ ಹಬ್ಬವಾಗಿದೆ ಮತ್ತು ಈ ತಿಂಗಳುಗಳು ಹೈನುಗಾರಿಕೆಯವರ ಹಬ್ಬವೂ ಆಗಿದೆ. ಯಾರು ಹಸುವಿನ ಉತ್ಪನ್ನಗಳಿಂದ ತಮ್ಮ ಜೀವನವನ್ನು ಸಾಗಿಸುತ್ತಾರೋ ಅವರು ಈ ಹಬ್ಬವನ್ನು, ವ್ರತವನ್ನು ಆಚರಿಸುತ್ತಾರೆ. ಹಿಂದುಗಳಿಗೆ ಗೋವು 33 ಕೋಟಿ ದೇವತೆಗಳನ್ನು ತನ್ನಲ್ಲಿರಿಸಿಕೊಂಡಿರುವ ದೇವತೆ-ಮಾತೆ. ಆದ್ದರಿಂದ ಈ ಕಾಲದಲ್ಲಿ ಆಚರಿಸುವ ವ್ರತವನ್ನು 'ಗೋಪದ್ಮ' ವ್ರತವೆಂದೂ ಕರೆಯುತ್ತಾರೆ. ಈ ಸಮಯದಲ್ಲಿ ವಿಷ್ಣುಪೂಜೆ, ಗೋಪೂಜೆಗಳೂ ನಡೆಯುತ್ತವೆ. ಶ್ರೀಲಕ್ಷ್ಮೀ ಶೋಭಾನೆ, ಪ್ರದಕ್ಷಿಣನಮಸ್ಕಾರಗಳು ಇನ್ನಿತರ ಅನೇಕ ದೇವತಾ ಕಾರ್ಯಕ್ರಮಗಳನ್ನು ನಡೆಸಿ ಜನರು ಪುನರ್ಜನ್ಮವೆಂಬ ಜೀವನಚಕ್ರದಿಂದ ಮುಕ್ತರಾಗಿ ಭಗವಾನ್ ಸಾಯುಜ್ಯ-ಮೋಕ್ಷವನ್ನು ಹೊಂದುತ್ತಾರೆ ಎಂದು ನಂಬಲಾಗಿದೆ.

■

# 'ಬೊಗಸಿ ತುಂಬಾ ಭಕ್ತೀ ಹಿಡಿದು' ಈ ಕೃತಿಯ ಒಂದು ಒಳನೋಟ

ಡಾ. ಜಿ.ಎನ್. ಉಪಾಧ್ಯ ಅವರು ಸಂಶೋಧಕರಾಗಿ, ವಿಮರ್ಶಕರಾಗಿ ಕನ್ನಡ ಸಾರಸ್ವತ ಲೋಕದಲ್ಲಿ ತಮ್ಮದೇ ಆದ ಛಾಪು ಮೂಡಿಸಿದ್ದಾರೆ. ಇವರು ಹಿರಿಯ - ಕಿರಿಯ ವಿದ್ವಾಂಸರುಗಳ, ಕವಿಗಳು, ಸಾಹಿತಿಗಳ, ಕಲಾಕಾರರ ಪರಿಚಯಾತ್ಮಕ ಲೇಖನ-ಪುಸ್ತಕಗಳನ್ನು ಬರೆದು ಪ್ರಕಟಿಸುತ್ತಿರುವುದು ಶ್ಲಾಘನೀಯವಾದುದು. ಹೊರನಾಡಾದ ಸೊಲ್ಲಾಪುರದಲ್ಲಿದ್ದುಕೊಂಡು ಸಾಹಿತ್ಯ ಕ್ಷೇತ್ರಕ್ಕೆ ವಿಶಿಷ್ಟವಾದ ಕೃತಿಗಳನ್ನು ನೀಡಿದ ಕುಸುಮಾಕರ ದೇವರಗೆಣ್ಣೂರ ಅವರ ಸಂಕ್ಷಿಪ್ತ ಪರಿಚಯವನ್ನು ಡಾ. ಜಿ.ಎನ್. ಉಪಾಧ್ಯ ಅವರು ತಮ್ಮ ಲೇಖನಗಳಲ್ಲಿ ಇಲ್ಲಿ ಸೆರೆಹಿಡಿದಿದ್ದಾರೆ. 'ಬೊಗಸಿ ತುಂಬಾ ಭಕ್ತೀ ಹಿಡಿದು' ಇದು ಕುಸುಮಾಕರ ದೇವರಗೆಣ್ಣೂರು ಅವರ ಸಾಹಿತ್ಯ ಕೃತಿಗಳ ಸಂಕ್ಷಿಪ್ತ ಸಮೀಕ್ಷೆ ಒಳಗೊಂಡ ಪುಟ್ಟ ಕೃತಿ. ಈ ಕೃತಿಯನ್ನು ಡಾ. ಉಪಾಧ್ಯ ಅವರು ಕನ್ನಡ ವಿಭಾಗದ ಮೂವತ್ತೆರಡನೆಯ ಪ್ರಕಟಣೆಯಾಗಿ ಹೊರ ತಂದಿದ್ದಾರೆ.

ಕುಸುಮಾಕರ ದೇವರಗೆಣ್ಣೂರ ಅವರು ಬೇಂದ್ರೆಯವರ ಆಪ್ತ ಶಿಷ್ಯರಲ್ಲಿ ಒಬ್ಬರು. ಇವರ ಕೃತಿಗಳಲ್ಲಿ ಬೇಂದ್ರೆಯವರ ಕವಿತೆಯ ಸಾಲು, ಅಂಥದೇ ಭಾವ ಅಲ್ಲಲ್ಲಿ ಬಂದು ಹೋಗುತ್ತವೆ. ಹೀಗಾಗಿ ಬೇಂದ್ರೆಯವರ ಕವಿತೆ 'ಬೊಗಸಿ ತುಂಬಾ ಭಕ್ತೀ ಹಿಡಿದು' ಈ ಒಂದು ಸಾಲನ್ನು ಕೃತಿಗೆ ಶೀರ್ಷಿಕೆಯಾಗಿ ಕೊಡಲಾಗಿದೆ ಎಂದೂ ಲೇಖಕರು ಹೇಳಿಕೊಂಡಿದ್ದಾರೆ. ಕುಸುಮಾಕರರು ಕವಿಯಾಗಿ, ಪ್ರಾಧ್ಯಾಪಕರಾಗಿ, ಕಾದಂಬರಿಕಾರರಾಗಿ, ಅನುವಾದಕರಾಗಿ ಸಾಹಿತ್ಯದಲ್ಲಿ ಕೃಷಿ ಮಾಡಿದ್ದಾರೆ. ಇವರು 1930ರಲ್ಲಿ ವಿಜಾಪುರ ಜಿಲ್ಲೆಯ ದೇವರಗೆಣ್ಣೂರಿನಲ್ಲಿ ಜನಿಸಿದರು. ಇವರ ಪೂರ್ಣ ಹೆಸರು ವಸಂತ ಅನಂತ ದಿವಾಣಜಿ. ಸಾಹಿತ್ಯ ಕ್ಷೇತ್ರದಲ್ಲಿ 'ಕುಸುಮಾಕರ ದೇವರಗೆಣ್ಣೂರು' ಎಂಬ ಕಾವ್ಯನಾಮದಿಂದಲೇ ಚಿರಪರಿಚಿತರು. ತಮ್ಮ ಹದಿನಾಲ್ಕನೆಯ ವಯಸ್ಸಿನಲ್ಲಿ ಸೊಲ್ಲಾಪುರಕ್ಕೆ ಬಂದ ಇವರು ಬೇಂದ್ರೆಯವರ ವಿದ್ಯಾರ್ಥಿಯಾಗಿ ಅವರ ಮಾರ್ಗದರ್ಶನದಲ್ಲಿ ಎಂ.ಎ. ಮುಗಿಸಿದರು. ಮುಂದೆ ಸೊಲ್ಲಾಪುರದ ದಯಾನಂದ ಕಾಲೇಜಿನಲ್ಲಿ ಕನ್ನಡ ಪ್ರಾಧ್ಯಾಪಕರಾಗಿ ಸೇರಿಕೊಂಡರು. ಇಲ್ಲಿಂದಲೇ ಅವರಿಗೆ ಸಾಹಿತ್ಯ ಅಧ್ಯಯನಕ್ಕೆ ಒಂದು ಯೋಗ್ಯ ದಿಶೆ ದೊರೆಯಿತು. ಇವರ ಮೇಲೆ ತತ್ವಜ್ಞಾನ, ಸಾಹಿತ್ಯ, ಸಾಮಾಜಿಕ ವಿಜ್ಞಾನ, ಹೋಮಿಯೋಪತಿ, ಮಾನವಶಾಸ್ತ್ರ, ಅರವಿಂದರು ಹಾಗೂ ಜಿ.ಕೆ. ಅವರ ವಿಚಾರಗಳು ಗಾಢವಾದ ಪ್ರಭಾವವನ್ನು ಬೀರಿವೆ. ಕೇವಲ ಒಂಭತ್ತು ಕೃತಿಗಳನ್ನು ರಚಿಸಿದ ಕುಸುಮಾಕರರು ಕೃತಿಗಳ ಸಂಖ್ಯೆಗೆ ಬೆಲೆ ಕೊಡದೆ ಗುಣಗ್ರಾಹ್ಯತೆಗೆ ಆದ್ಯತೆ ನೀಡಿದ್ದಾರೆ ಎಂಬುದಾಗಿ ಲೇಖಕರು ಅವರ ಕೃತಿಗಳ ಸಮೀಕ್ಷೆಯಿಂದ ಸಾಬೀತು ಮಾಡಿದ್ದಾರೆ.

ಕುಸುಮಾಕರರು ಎಂಭತ್ತು ವರ್ಷಗಳ ಜೀವನವನ್ನು ಅರ್ಥಪೂರ್ಣವಾಗಿ ಬದುಕಿದ್ದಾರೆ. ಅವರ ಜೊತೆಗೆ ಲೇಖಕರು ಸಾಹಿತ್ಯ ಬಗೆಗೆ ಮತ್ತು ವೈಯಕ್ತಿಕ ಜೀವನ ಕುರಿತು ಸಂದರ್ಶನವನ್ನು ನಡೆಸಿ ಅದನ್ನು ಇಲ್ಲಿ ದಾಖಲಿಸಿದ್ದಾರೆ. ಸಾಹಿತ್ಯ ವಿಮರ್ಶೆ ಕುರಿತು ಸಂದರ್ಶನದಲ್ಲಿ ಕುಸುಮಾಕರರು ಹೇಳಿದ ಮಾತುಗಳು ತುಂಬಾ ಮೌಲ್ಯಯುಕ್ತವಾಗಿವೆ. ಅದು ಇಂತಿದೆ. "ನನ್ನನ್ನು ವಿಮರ್ಶಕರು ಗಮನಿಸಿಲ್ಲ ಎಂದಾಗಲಿ, ನನಗೆ ನ್ಯಾಯ ದೊರಕಿಲ್ಲ ಎಂದಾಗಲಿ ನನಗೆ ಕೊರಗು ಉಂಟಾಗಿಲ್ಲ. ನಿಸರ್ಗದಲ್ಲಿ ಎಂತಹ ಸೌಂದರ್ಯವಿದೆ. ಎಲ್ಲವನ್ನೂ ನೋಡಿ ತಡೆಯಬಲ್ಲ ಸಾಮರ್ಥ್ಯ ಯಾರಿಗಿದೆ? ಸಾಹಿತ್ಯ Self Conscious ಆಗಬಾರದು. ಆದುದರಿಂದ ನನ್ನ ಕೃತಿಗೆ ಬಹುಮಾನ ದೊರೆಯಲಿಲ್ಲ ಎಂಬ ದುಃಖವೂ ನನಗಿಲ್ಲ. ಬಹುಮಾನ ಪಡೆದ ಎಲ್ಲ ಕೃತಿಗಳೂ ಶ್ರೇಷ್ಠವೆಂದು ಭಾವಿಸುವುದು ಇಲ್ಲವೇ. ಬಹುಮಾನ ದೊರೆಯದ ಕೃತಿಗಳು ಅಯೋಗ್ಯವೆಂದು ಭಾವಿಸುವುದು ಸರಿಯಾದುದಲ್ಲ" ಎಂಬುದಾಗಿ ಹೇಳಿದ ಮಾತುಗಳು ಅರ್ಥಪೂರ್ಣವಾಗಿವೆ.

ನಾಲ್ಕನೆಯ ಆಯಾಮ, ಬಯಲು ಬಸಿರು, ನಿರಿಂದ್ರಿಯ, ಪರಿಘ ಈ ನಾಲ್ಕು ಕಾದಂಬರಿಗಳನ್ನು ಡಾ.ಉಪಾಧ್ಯ ಅವರು ಪ್ರತ್ಯೇಕ ಅಧ್ಯಯನಗಳ ಮೂಲಕ ತುಂಬಾ ಸೊಗಸಾಗಿ ವಿಶ್ಲೇಷಿಸಿದ್ದಾರೆ. 'ನಾಲ್ಕನೆಯ ಆಯಾಮ' ಇದು ಸ್ವಾತಂತ್ರ್ಯ ನಂತರದ ಯುವ ಪೀಳಿಗೆಯನ್ನು ಪ್ರತಿನಿಧಿಸುವ ಕಾದಂಬರಿಯಾಗಿದೆ. ಶ್ರೇಯ ಪ್ರೇಯಗಳ ಸಂಘರ್ಷದಲ್ಲಿ ಸಿಲುಕಿದ ವಿದ್ಯಾರ್ಥಿಯೊಬ್ಬನ ಕತೆ ಇದಾಗಿದೆ. ಬಯಲು ಬಸಿರು ಇದೊಂದು ಭಿನ್ನಪರಿಯ ವೈಚಾರಿಕ ಕಾದಂಬರಿ. ಅಮೆರಿಕಾದಿಂದ ಭಾರತಕ್ಕೆ ಬಂದ ಸಾರ್ಮನ್ ಎಂಬ ಶ್ರೀಮಂತ ಯುವಕನು ಪಟ್ಟಪಾಡು, ಅನುಭವಿಸಿದ ದ್ವಂದ್ವ-ದುಗುಡಗಳೆಲ್ಲ ಕತೆಯಾಗಿ ಈ ಕಾದಂಬರಿಯಲ್ಲಿ ಪಡಿಮೂಡಿದೆ. "ಆಧ್ಯಾತ್ಮದ ಕುರಿತು ಮಾತನಾಡುತ್ತ ಬಿಚ್ಚಿಗೊಳ್ಳುವ ಕಾದಂಬರಿ ವರ್ತಮಾನದ ಜಾಗತಿಕ ನೆಲೆಯಲ್ಲಿನ ಸಾಮಾಜಿಕ, ರಾಜಕೀಯ, ಆರ್ಥಿಕ ವಿಷಯಗಳಂಥ ಗಂಭೀರ ವಿಚಾರಗಳನ್ನು ಅಲ್ಲಿನ ತವಕ ತಲ್ಲಣಗಳನ್ನು ಗಂಭೀರವಾಗಿ ಅಷ್ಟೇ ನಿರ್ಲಿಪ್ತವಾಗಿ ಬಯಲುಗೊಳಿಸಿದೆ. ಮಾನವ ಬದುಕಿನ ಎಲ್ಲ ಅಂಶಗಳನ್ನು ಒಳಗೊಂಡ ಜೀವಂತ ತನವನ್ನು ಇಲ್ಲಿ ನಾವು ಸೂಕ್ಷ್ಮವಾಗಿ ಗುರುತಿಸಬಹುದಾಗಿದೆ" (ಪುಟ 28) ಎಂಬುದಾಗಿ ಲೇಖಕರು ಒತ್ತಿ ಹೇಳಿದ್ದಾರೆ.

'ನಿರಿಂದ್ರಿಯ' ಈ ಕಾದಂಬರಿಯಲ್ಲಿ ನಗರಕೇಂದ್ರಿತ ಮಾಧ್ಯಮ ವರ್ಗದ ರೊಳ್ಳೀ ಎಂಬ ವ್ಯಕ್ತಿಯೊಬ್ಬನ ಅಂತರಂಗ ಬಹಿರಂಗಗಳ ಚಿತ್ರಣವಿಲ್ಲಿದೆ. ನಗರದ ಬದುಕಿನಲ್ಲಿ ಎದುರಾಗುವ ಒಂಟಿತನ, ಬದುಕಿನ ರಿಕ್ತತೆ, ಭವಿಷ್ಯದ ಬಗೆಗಿನ ಆತಂಕ, ಸಂಗ್ರಹ ಪ್ರವೃತ್ತಿ ಬದುಕಿಗಾಗಿ ನಡೆಸಬೇಕಾಗಿ ಬರುವ ಹೋರಾಟ ಇತ್ಯಾದಿಗಳ ಚಿತ್ರಣವಿಲ್ಲ. ಮನೋಜ್ಞವಾಗಿ ಮೂಡಿಬಂದಿದೆ. 'ಪರಿಘ' ಈ ಕಾದಂಬರಿ ಮಹಾಕವಿಯೊಬ್ಬನ ಏಳುಬೀಳುಗಳ ಕುರಿತು ಮಾತನಾಡುತ್ತದೆ. ಪ್ರಸ್ತುತ 'ಪರಿಘ' ಕಾದಂಬರಿಯಲ್ಲಿ ಕಾವ್ಯಾತ್ಮಕ ಗದ್ಯ, ಸಾತತ್ಯ, ಶೈಲಿ, ತಂತ್ರಗಳೆಲ್ಲ ಕುಸುಮಾಕರರ ಪ್ರತಿಭೆಗೆ ಕನ್ನಡಿ ಹಿಡಿಯುತ್ತಿದೆ ಎಂದು ಲೇಖಕರು ಹೇಳಿರುವ ಮಾತಿನಲ್ಲಿ ತಥ್ಯವಿದೆ.

ಕುಸುಮಾಕರರು ಕಾದಂಬರಿಕಾರರಷ್ಟೇ ಅಲ್ಲ ಅವರು ಕವಿಯಾಗಿಯೂ ಮಿಂಚಿದ್ದಾರೆ. 'ಸ್ವಪ್ನನೌಕೆ' ಇದು 1954ರಲ್ಲಿ ಪ್ರಕಟಗೊಂಡ ಅವರ ಚೊಚ್ಚಲ ಕಾವ್ಯಕೃತಿ. ಸೊಲ್ಲಾಪೂರದ ಪುರೋಹಿತ ಪಬ್ಲಿಶಿಂಗ್ ಹೌಸ್ ಈ ಕೃತಿಯನ್ನು ಪ್ರಕಟಿಸಿದೆ. ಪ್ರಸ್ತುತ ಕವನದಲ್ಲಿ ಮೂವತ್ತು ಕವಿತೆಗಳಿವೆ. ಈ ಕವನ ಸಂಕಲನಕ್ಕೆ ರಂ.ಶ್ರೀ. ಮುಗಳಿ ಅವರು ಸುದೀರ್ಘ ಮುನ್ನುಡಿ ಬರೆದಿದ್ದಾರೆ. ಇಲ್ಲಿನ ಬಹುತೇಕ ಕವಿತೆಗಳು ದಾಂಪತ್ಯ ಗೀತೆಗಳಾಗಿ ಗಮನ ಸೆಳೆಯುತ್ತವೆ. ಡಾ. ಜಿ.ಎನ್. ಉಪಾಧ್ಯ ಅವರು ಕೆಲವು ಕವಿತೆಯ ಚರಣಗಳನ್ನು ಉಲ್ಲೇಖಿಸಿ ಅರ್ಥಪೂರ್ಣವಾಗಿ ವಿಮರ್ಶಿಸಿದ್ದಾರೆ. 'ಪ್ರಸಾದಯೋಗ' ಡಾ. ದಿವಾಣಜಿ ಅವರ ಸಂಶೋಧನ ಮಹಾಪ್ರಬಂಧ. 1972 ರಲ್ಲಿ ಪ್ರಕಟಗೊಂಡ ಈ ಪ್ರಬಂಧವು ಪುರಂದರ ದಾಸರ ಜೀವನ ಹಾಗೂ ಕೃತಿಗಳ ಮೇಲೆ ಹೊಸ ಬೆಳಕು ಚೆಲ್ಲುತ್ತದೆ. ಕನ್ನಡ ಹರಿದಾಸ ಪರಂಪರೆ ಇಟ್ಟ ಹೆಜ್ಜೆ ಹಾಗೂ ಅದು ತೊಟ್ಟ ರೂಪವನ್ನು ಚಿತ್ರಿಸುವಲ್ಲಿ ಈ ಶೋಧ ಪ್ರಬಂಧ ಯಶಸ್ವಿಯಾಗಿದೆ ಎಂದೂ ಲೇಖಕರು ವಿಶ್ಲೇಷಣೆ ಮಾಡಿದ್ದಾರೆ.

'ಗಾಳಿ ಹೆಜ್ಜೆ ಹಿಡಿದ ಸುಗಂಧ' ಎಂಬ ಲೇಖನವು ಸೊಗಸಾಗಿ ಮೂಡಿ ಬಂದಿದೆ. ವಿಮರ್ಶಕರು ಕಂಡಂತೆ 'ಡಾ. ದಿವಾಣಜಿ ಸಾಹಿತ್ಯ' ಈ ಲೇಖನದಲ್ಲಿ ಕುಸುಮಾಕರರ ಸಾಹಿತ್ಯಕ್ಕೆ ಬಂದ ವಿಮರ್ಶಕರ ಅಭಿಪ್ರಾಯಗಳನ್ನು ಸಂಗ್ರಹಿಸಲಾಗಿದೆ. "ಕನ್ನಡದಲ್ಲಿ ಬಹು ವಿಶಿಷ್ಟವಾದ ಕಾದಂಬರಿಗಳನ್ನು ಕೊಟ್ಟವರು ಕುಸುಮಾಕರ ದೇವರಗೆಣ್ಣೂರರು. ವಿವರಗಳ ಸೌಷ್ಟವದಿಂದ ಕೂಡಿದ ಪರಿಸರ, ನಾಯಕ ಕೇಂದ್ರಿತ ಚಿತ್ರಣ, ಭಾಷೆಯ ಚೆಲುವು ಇಂತಹ ಕಾದಂಬರಿ ಲೋಕದ ಹಲವು ಸಹಜ ಎಂದು ನಾವು ಭಾವಿಸಿರುವ ಅನಿವಾರ್ಯತೆಯನ್ನು ಅವರ ಕೃತಿಗಳು ಮುರಿದಿವೆ" (ಪುಟ-86) ಎಂಬುದಾಗಿ ಎನ್.ಎಸ್. ಶ್ರೀಧರ್ ಮೂರ್ತಿ ಅವರು ಅಭಿಪ್ರಾಯಪಟ್ಟಿದ್ದಾರೆ. ಕೊನೆಯದಾಗಿ ಕುಸುಮಾಕರ ದೇವರಗೆಣ್ಣೂರರ ಜೀವನದ ವಿವರ ಮತ್ತು ಕೃತಿಗಳು ಹಾಗೂ ಅವರಿಗೆ ಸಂದ ಪ್ರಶಸ್ತಿಗಳ ವಿವರವನ್ನು ನೀಡಲಾಗಿದೆ. ಒಟ್ಟಿನಲ್ಲಿ ಡಾ. ಜಿ.ಎನ್. ಉಪಾಧ್ಯ ಅವರು ಕುಸುಮಾಕರರ ಸಮಗ್ರ ಸಾಹಿತ್ಯ ಸಾಧನೆಯನ್ನು ಪರಿಚಯಿಸಿಕೊಟ್ಟು ಅವರ ಕೃತಿಗಳಿಗೆ ಯೋಗ್ಯ ವಿಮರ್ಶೆಯ ನ್ಯಾಯವನ್ನು ಒದಗಿಸಿಕೊಟ್ಟಿದ್ದಾರೆ.

***- ದುರ್ಗಪ್ಪ ಯ. ಕೋಟಿಯವರ,***

# ಶಿಮುಂಜೆ ಪರಾರಿಯವರ ಬದುಕು - ಬರಹ - ಒಂದು ಓದಲೇಬೇಕಾದ ಕೃತಿ

ಸಂಶೋಧನೆಯಲ್ಲಿ ತೊಡಗಿಸಿಕೊಂಡವರು ಯಾವತ್ತೂ ಕುತೂಹಲ, ಆಸಕ್ತಿಯನ್ನು ಉಳಿಸಿಕೊಂಡು ವ್ಯಾಪಕ ಅಧ್ಯಯನವನ್ನು ಕೈಗೆತ್ತಿಕೊಳ್ಳಬೇಕು. ಈ ಕ್ಷೇತ್ರ ಅಪಾರ ಶ್ರಮವನ್ನು ಬೇಡುತ್ತದೆ. ಸಂಶೋಧನೆಯಲ್ಲಿ ನಿರತರಾಗವರು. ಸತ್ಯವನ್ನೇ ಹೇಳಬೇಕು ಮೂಲ ಆಕರವನ್ನು ಬಳಸಿಕೊಳ್ಳುವಲ್ಲಿ, ವ್ಯಾಖ್ಯಾನಿಸುವಲ್ಲಿ ಅವರು ಪ್ರಾಮಾಣಿಕರಾಗಬೇಕು.

ಎಂಫಿಲ್, ಪಿಎಚ್‌ಡಿ. ಸಂಶೋಧನಾ ಕ್ಷೇತ್ರದಲ್ಲಿ ಕಾಲಿಡಲು ಒಂದು ಪ್ರಮಾಣಪತ್ರ. ಸಂಶೋಧನಾ ಕಾರ್ಯ ಅದೊಂದು ನಿರಂತರ ಪ್ರಕ್ರಿಯೆ. ಯಾರು ಅದರಲ್ಲಿ ಶ್ರದ್ಧೆಯಿಂದ ಪಾಲ್ಗೊಳ್ಳುತ್ತಾರೋ ಅವರ ಮೂಲಕ ಸತ್ಯ ಹೊರಬೀಳುತ್ತದೆ. ಸಂಶೋಧನೆಯಲ್ಲಿ ಮಾರ್ಗದರ್ಶನ ತಾಯಿ ಇದ್ದಂತೆ. ಹೆಜ್ಜೆಯಿಡುವಾಗ ಮಾರ್ಗದರ್ಶನ ಸಹಾಯ ಸಿಕ್ಕಂತೆ ಸಂಶೋಧಕ ತಾನಾಗಿಯೇ ಬೆಳೆಯಬೇಕು. ಬರೇ ಪದವಿಗಾಗಿ ಸಂಶೋಧನೆ ಕೈಗೊಳ್ಳಬಾರದು. ಮುಂದೆಯೂ ಕಾರ್ಯ ನಿರತರಾದಲ್ಲಿ ಅದು ಸಾರ್ಥಕ.

ಶ್ರೀಮತಿ ಪೂರ್ಣಿಮಾ ಸುಧಾಕರ ಶೆಟ್ಟಿ ಇವರ ಚೊಚ್ಚಲ ಕೃತಿ ಶಿಮುಂಜೆಯವರ ಬದುಕು ಬರಹ ಮುಂಬಯಿಯ ಹೆಸರಾಂತ ಸಂಶೋಧಕರಲ್ಲೊಬ್ಬರಾದ ಡಾ. ಜಿ.ಎನ್. ಉಪಾಧ್ಯರ ಮಾರ್ಗದರ್ಶನದಲ್ಲಿ ಎಂ.ಫಿಲ್ ಪದವಿಗಾಗಿ ಸಿದ್ಧಪಡಿಸಿದ ಸಂಪ್ರಬಂಧದ ಕೃತಿರೂಪ. ತಮ್ಮ ಅಭಿಜಿತ್ ಪ್ರಕಾಶನದಲ್ಲಿ ಈ ಕೃತಿಯನ್ನು ಪ್ರಕಟಿಸಿ ಡಾ. ಉಪಾಧ್ಯರು ಅಭಿನಂದನೀಯ ಕಾರ್ಯ ಮಾಡಿದ್ದಾರೆ. ಅಲ್ಲದೆ ಈ ಕೃತಿಯನ್ನು ಪ್ರಕಟಿಸಲು ಮುಂದೆ ಬಂದು ಆರ್ಥಿಕ ಸಹಾಯ ನೀಡಿದ ಕವಿ ಮಿತ್ರ ಶ್ರೀ ವಿಶ್ವನಾಥ ಶೆಟ್ಟಿ ಪೇತ್ರಿ ಕೂಡಾ ಅನುಕರಣೀಯ ಕಾರ್ಯ ಮಾಡಿದ್ದಾರೆ.

ಪ್ರತಿಭಾವಂತರಾಗಿದ್ದುಕೊಂಡು ವಿವಾಹದ ನಂತರ ಪತಿ, ಮಕ್ಕಳು, ಸಂಸಾರವೆಂದುಕೊಂಡು ತೆರೆಮರೆಗೆ ಸೇರುವವರ ಸಾಲಿಗೆ ಸೇರದೆ ಪೂರ್ಣಿಮಾ ಅವರು ತಮ್ಮ ವ್ಯಸ್ತ ವೈವಾಹಿಕ ಜೀವನದಲ್ಲೂ ಸಾಹಿತ್ಯ ಸಂಸ್ಕೃತಿಯ ಒಲವನ್ನು ಉಳಿಸಿ ಬೆಳೆಸಿಕೊಂಡು ಬಂದಿರುವುದು ಉಲ್ಲೇಖನೀಯ. ಇದಕ್ಕಾಗಿ ನಾನು ಅವರ ಪತಿ ಶ್ರೀ ಸುಧಾಕರ ಶೆಟ್ಟಿಯವರನ್ನು ಅಭಿನಂದಿಸುತ್ತಿದ್ದೇನೆ.

ಕನ್ನಡ ಸಾಹಿತ್ಯ ಲೋಕಕ್ಕೆ ಮುಂಬೈ ನೀಡಿದ ಕಾಣಿಕೆ ಮಹತ್ವದ್ದಾಗಿದೆ. ಕರ್ಕಿ ವೆಂಕಟರಮಣ ಶಾಸ್ತ್ರಿ, ಚುರುಮುರಿ ಶೇಷಗಿರಿ ರಾಯರು, ವಿಜಿ ಭಟ್, ದೇವನೂರು, ಚಿತ್ತಾಲ, ಕಾಯ್ಕಿಣಿ ಬಲ್ಲಾಳ, ನಿಂಜೂರು, ಡಾ. ಜೀವಿ, ಕುರ್ಕಾಲ್, ಕೋಡು, ಡಾ. ಸುನೀತಾ ಶೆಟ್ಟಿ ಇಂತವರ ಯಾದಿಯಲ್ಲಿ ಕೇಳಿ ಬರುವ ಹೆಸರು ಶಿಮುಂಜೆ ಪರಾರಿಯವರದ್ದು. ತನ್ನ ಪಾಡಿಗೆ ತಾನಿದ್ದುಕೊಂಡು ಅವರು ಮಾಡಿಕೊಂಡು ಬಂದ ಸಾಹಿತ್ಯ ಪರಿಚಾರಿಕೆ ಮೆಚ್ಚುವಂತಹುದು. ಶಿಮುಂಜೆ ಪರಾರಿ ಎಂದೇ ಪ್ರೀತ್ಯಾದರಗಳಿಂದ ಕನ್ನಡ ತುಳು ಭಾಷಿಕರಿಗೆ ಪರಿಚಿತರಾಗಿರುವ ಶ್ರೀ ಸೀತಾರಾಮ್ ಎಮ್. ಶೆಟ್ಟಿಯವರುದು ಬಹುಮುಖ ಪ್ರತಿಭೆ. ಅವರ ಸೃಜನಶೀಲತೆ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಮೇಳೈಸಿದ ಕನ್ನಡ, ತುಳು, ಮರಾಠಿ, ಗುಜರಾತಿ, ಇಂಗ್ಲಿಷ್ ಭಾಷೆಗಳಲ್ಲಿ ನಿರ್ಗಳ ವ್ಯವಹಾರ, ನಟನೆ, ಸಾಹಿತ್ಯ ರಚನೆ ಹಾಗೆಯೆ ಅವಳ ತೊಡುಗೆಯನ್ನು ಇವಳಿಗಿಟ್ಟು ನೋಡುವ ಸುಂದರ ಮನಸು. ಹೃದಯವೈಶಾಲ್ಯ ಹೊಂದಿರುವ ಶಿಮುಂಜೆಯವರು ಸರಳ ಭಾಷೆಯಲ್ಲಿ ಸಾವಿರಾರು ಸಂಪುಟಗಳಲ್ಲಿ ನಿತ್ಯಾನಂದ ವಚನದ ಮೂವತ್ತು ಸಾವಿರ ಪ್ರತಿಗಳನ್ನು ಓದುಗರ ಕೈಗೆ ಹಾಕಿದ್ದು ಭಾರತೀಯ ಭಾಷೆಗಳ ಇತಿಹಾಸದಲ್ಲಿ ಒಂದು ಅನನ್ಯ ಸಾಧನೆ. ಈ ವಚನಗಳು ಸರಳ ಸುಂದರ ಪುಸ್ತಕಗಳಾಗಿದ್ದು ಅನುಭವ ಅಭಿವ್ಯಕ್ತಿಗೆ ಒಂದು ಮಾಧ್ಯಮವಾಗಬಲ್ಲದೆಂದು ಶಿಮುಂಜೆ ತೋರಿಸಿಕೊಟ್ಟಿದ್ದಾರೆ. ಈ ಕಾರ್ಯಕ್ಕಾಗಿ ಶಿಮುಂಜೆಯವರು ಅಭಿನಂದನೆಗೆ ಪಾತ್ರರಾಗುತ್ತಾರೆ.

ಮುಂಬೈಯಲ್ಲಿ ಸದ್ದುಗದ್ದಲವಿಲ್ಲದೆ ಯಾವುದೇ ಪ್ರಚಾರದ ಗೀಳು ಅಂಟಿಸಿಕೊಳ್ಳದೆ ಗುಂಪುಗಾರಿಕೆಯಿಂದ ದೂರ ಸಾಹಿತ್ಯದ ಕಾರ್ಯಗಳಿಗೆ ತನ್ನನ್ನು ತಾನು ಸಮರ್ಪಿಸಿಕೊಂಡವರು ಶಿಮುಂಜೆ ಪರಾರಿಯವರು. ಅವರ ಮುಖ ಕಂಡಾಗ ಗಂಭೀರ ಸ್ವಭಾವದವರಂತೆ ಕಂಡು ಬಂದರೂ ಅವರ ಸನಿಹಕ್ಕೆ ಬಂದವರಿಗೆ ಮಾತ್ರ ಅವರ ಮಗುವಿನಂತಹ ನಿರ್ಮಲ ಮನಸ್ಸು ಸ್ನೇಹದ ಅರಿವುಂಟಾಗುತ್ತದೆ. ಬದುಕನ್ನು ಸುಂದರವಾಗಿಸುವುದು ಅವರ ಸಾಹಿತ್ಯದ ಮುಖ್ಯ ಉದ್ದೇಶ. ಅವರ ಸಿದ್ಧಿ ಸಾಧನೆಯ ಹಿಂದೆ ಅವರ ಪತ್ನಿ ಶ್ರೀಮತಿ ಚಂದ್ರಿಕಾ ಅವರ ಪ್ರೀತಿ ಸಹಕಾರ ಮರೆಯುವಂತಿಲ್ಲ. ಈ ಕೃತಿಯುದ್ದಕ್ಕೂ ಪೂರ್ಣಿಮಾ ಅವರು ಶಿಮುಂಜೆಯವರ ಬದುಕು ಬರಹಗಳಿಗೆ ಬೆಳಕು ತೋರಿದ್ದಾರೆ.

ಶಿಮುಂಜೆಯವರ ನಗುಮುಖದ ಭಾವಚಿತ್ರವನ್ನು ಹೊತ್ತುಕೊಂಡಿರುವ ಈ ಕೃತಿಯಲ್ಲಿ ಹತ್ತು ಅಧ್ಯಾಯಗಳಿವೆ. ಅವರ ಜೀವನ ಸಾಧನೆ, ಕವಿಯಾಗಿ ಶಿಮುಂಜೆ, ಅನುವಾದಕರಾಗಿ, ತುಳು ಸಾಹಿತಿಯಾಗಿ ಅಲ್ಲದೆ ಅವರ ವಚನಗಳು ಅವರ ಜೊತೆ ಲೇಖಕಿ ನಡೆಸಿದ ಸಂದರ್ಶನ, ಅಲ್ಲದೆ ಅವರ ಕೃತಿಗಳ ಬಗ್ಗೆ ಬಂದ ವಿಮರ್ಶೆಗಳು ಇಲ್ಲಿ ಕ್ರಮವತ್ತಾಗಿ ಮೂಡಿ ಬಂದಿದೆ. ಹೀಗೆ ಶಿಮುಂಜೆ ಅವರ ಬದುಕಿನ ಹಲವು ಹತ್ತು ಆಯಾಮಗಳಿಗೆ ಸೋದರಿ ಪೂರ್ಣಿಮಾ ಬೆಳಕು ಬೀರಿರುವುದನ್ನು ನಾವಿಲ್ಲಿ ಕಾಣಬಹುದಾಗಿದೆ.

ಮುಂಬಯಿಯ ಸಾಹಿತ್ಯ ಲೋಕದತ್ತ ದೃಷ್ಟಿ ಹಾಯಿಸಿದಾಗ ಕನ್ನಡ ಹಾಗೂ ತುಳು ಭಾಷೆಯಲ್ಲಿ ತಮ್ಮ ಕೈಂಕರ್ಯವನ್ನು ಮೆರೆದ ಹಲವಾರು ಸಾಹಿತಿಗಳಲ್ಲಿ ಶಿಮುಂಜೆಯವರ ಹೆಸರು ಮೊದಲ ಸಾಲಿನಲ್ಲಿ ಬರುತ್ತದೆ. ಅವರು ಮುಂಬಯಿ ಮಣ್ಣಿನಲ್ಲಿ ಅರಳಿದ ಪ್ರತಿಭೆ. ಮುಂಬಯಿ ಅವರ ಕರ್ಮಭೂಮಿ. ಅವರದು ಬಹುಭಾಷಿಕ ಸಂವೇದನೆ. ಇದರಿಂದಾಗಿ ಅವರು ಹಿಂದಿ, ಮರಾಠಿ ಮತ್ತು ಗುಜರಾತಿ ಭಾಷೆಗಳ ಮೇಲೆ ಹಿಡಿತ ಸಾಧಿಸುವಂತಾಯಿತು.

ಒಂದು ಭಾಷೆಯಿಂದ ಇನ್ನೊಂದು ಭಾಷೆಗೆ ಅನುವಾದಿಸುವಾಗ ಲೇಖಕನಿಗೆ ಎರಡೂ ಭಾಷೆಗಳ ಸಂಪೂರ್ಣ ಜ್ಞಾನವಿರಬೇಕಾಗುತ್ತದೆ. ಯಾವನೇ ಲೇಖಕ ಮೂಲ ಭಾಷೆಯಲ್ಲಿ ಬರೆದಿರುವಾಗ ಅವನ ಆಶಯ ಅನುವಾದ ಸಾಹಿತ್ಯದಲ್ಲಿ ಮೂಡಿಬರಬೇಕಿದ್ದರೂ ಅನುವಾದಕ ತಾನು ಅನುವಾದಿಸುವ ಭಾಷೆಯ ನೆಲದ ಸಂಸ್ಕೃತಿಗೆ ಅಲ್ಪ ಸ್ವಲ್ಪ ಬದಲಾವಣೆ ಮಾಡಿಕೊಳ್ಳಬಹುದಾಗಿದೆ. ಆಗ ಮಾತ್ರ ಅನುವಾದಿತ ಕೃತಿಯನ್ನು ಸಹೃದಯ ಬಂಧುಗಳು ತೆರೆದ ಹೃದಯದಿಂದ ಬರಮಾಡಿಕೊಳ್ಳುತ್ತಾರೆ. ಶಿಮುಂಜೆಯವರು ಮಾಡಿದ್ದು ಇದನ್ನೇ. ಇದಕ್ಕೆ ಅವರ 'ಜೋಕುಲು ಬಾಲೆಲು' ನಾಟಕ ಸಾಕ್ಷಿಯಾಗುತ್ತದೆ. ಮೂಲ ನಾಟಕ ಅಶೋಕ ಪಾಟೋಳೆಯವರ 'ಮಿ ಮಾಝು ಮುಲಾಂಚಾ' ಮರಾಠಿ ಮಣ್ಣಿನ ಕಥೆಯಾದರೂ ತುಳು ಮಣ್ಣಿನ ಸೊಗಡನ್ನು ಅದು 'ಜೋಕುಲು ಬಾಲೆಲು' ಕಥೆಯಲ್ಲಿ ತೆರೆದಿಡುತ್ತದೆ. ಇದು ಸಫಲ ಅನುವಾದಕನ ಕೈಚಳಕವೆನ್ನಬೇಕಾಗುತ್ತದೆ. ಅವರ ಇತರ ಭಾಷೆಯ ಮೇಲಿನ ಹಿಡಿತ ಕೊಡುಕೊಳ್ಳುವಿಕೆಗೆ ನಾಂದಿಯಾಗಿ ಕನ್ನಡ ತುಳು ಭಾಷೆ ಮತ್ತಷ್ಟು ಶ್ರೀಮಂತವಾಯಿತೆನ್ನುವುದು ಉಲ್ಲೇಖನೀಯ.

ಇನ್ನು ಶಿಮುಂಜೆಯವರು ಉತ್ತಮ ನಾಟಕಕಾರರಾಗಿರುವುದಷ್ಟೇ ಅಲ್ಲದೆ ಉತ್ತಮ ನಟರೂ ಆಗಿದ್ದರು. ಅವರು ಅಭಿನಯಿಸಿದ್ದ 'ಘಟಶ್ರಾದ್ಧ' ಚಿತ್ರದ ಕುಬೇರನ ಪಾತ್ರ ಅವಿಸ್ಮರಣೀಯ. ಅಲ್ಲದೆ ನಾನು ಮುಂಬಯಿಗೆ ಬಂದ ಹೊಸತರಲ್ಲಿ ಅವರು ಅನುವಾದಿಸಿದ ದತ್ತಾ ಕೇಶವ ಅವರ ಮರಾಠಿ ನಾಟಕ 'ಕುಣಾ ಮಣು ಮೀ ಮಾಝು'ದ ಕನ್ನಡ ಅನುವಾದಿತ ನಾಟಕ "ಸತ್ಯಂ ವಧ ಧರ್ಮಂ ಚರ" ನಾಟಕ ವೀಕ್ಷಿಸಿದ್ದೆ. ಅವರು ಇನ್ನೂ ಅನೇಕ ಕನ್ನಡ ತುಳು ನಾಟಕಗಳಲ್ಲಿ ಅಭಿನಯಿಸಿದ್ದರೆಂದು ಕೇಳಿದ ನೆನಪು. ಈ ಕೃತಿಯಲ್ಲಿ ಆ ಬಗ್ಗೆ ಒಂದು ಬೇರೆಯ ಅಧ್ಯಾಯ ಬಂದಿದ್ದರೆ ಕೃತಿಗೆ ಇನ್ನಷ್ಟು ಮೆರುಗು ಬರುತ್ತಿತ್ತೆಂದು ನನ್ನ ಅನಿಸಿಕೆ.

ಶಿಮುಂಜೆಯವರು ಶಿಕ್ಷಕ ವೃತ್ತಿಯನ್ನು ಹೆಚ್ಚು ಪ್ರೀತಿಸುತ್ತಿದ್ದರು. ಅದನ್ನು ಧರ್ಮಾರ್ಥವಾಗಿ ಕಲಿಸಿದ ಶ್ರೇಯ ಅವರದ್ದು. ಬದುಕಿನುದ್ದಕ್ಕೂ ಆದರ್ಶಮಯ ಬದುಕು ಸಾಗಿಸಿದ ಶಿಮುಂಜೆ ಏನು ಹೇಳಿದರೋ ಅದೇ ರೀತಿ ಬದುಕಿ ತೋರಿಸಿದವರು. ಸದ್ದು ಗದ್ದಲದಿಂದ ದೂರವಿದ್ದು, ಹೃದಯವಂತರಾಗಿ ಸಾಹಿತ್ಯದಲ್ಲಿ,

✍ ಡಾ. ಕರುಣಾಕರ್ ಎನ್. ಶೆಟ್ಟಿ ಪಣಿಯೂರು

ನಾಟಕಗಳಲ್ಲಿ ತೊಡಗಿಸಿಕೊಂಡಿರುವ ಶಿಮುಂಜೆ ಅವರ ಬದುಕಿನ ಹತ್ತು ಹಲವು ಆಯಾಮಗಳಿಗೆ ಪೂರ್ಣಿಮಾ ಬೆಳಕು ಚೆಲ್ಲಿದ್ದಾರೆ.

ಕೃತಿಯ ಮುನ್ನುಡಿಯಲ್ಲಿ ಪ್ರಕಾಶಕ ಡಾ. ಜಿ.ಎನ್. ಉಪಾಧ್ಯರು ಹೇಳಿರುವಂತೆ ಶಿಮುಂಜೆ ಅವರ ಜೀವನ ಸಾಧನೆಯನ್ನು ಪ್ರಸ್ತುತ ಸಂಪ್ರಬಂಧದ ಮೂಲಕ ಶ್ರೀಮತಿ ಪೂರ್ಣಿಮಾ ಸೊಗಸಾಗಿ ನಿರೂಪಿಸಿದ್ದಾರೆ. ಅಲ್ಲದೆ, ಕೃತಿಯ ಬೆನ್ನುಡಿಯಲ್ಲಿ ಕವಿ ಕುರ್ಕಾಲರು ಬರೆದಿರುವ ಮಾತುಗಳು ಶಿಮುಂಜೆಯವರ ಬದುಕಿಗೆ ಬರೆದ ಭಾಷ್ಯದಂತಿದೆ.

ದಾದರ್‌ನ ಮುನ್ಸಿಪಲ್ ಕಾಲೇಜಿನಲ್ಲಿ ಓದುತ್ತಿದ್ದ ಕಾಲದಲ್ಲಿ ಹಿಂದಿ ಪದ್ಯವೊಂದನ್ನು ಅನುವಾದಿಸಿದ ಶಿಮುಂಜೆ ಅದನ್ನು ಒಂದು ಹವ್ಯಾಸವನ್ನಾಗಿಸಿಕೊಂಡರು. ತನ್ನ ಹತ್ತೊಂಬತ್ತನೆಯ ವಯಸ್ಸಿನಲ್ಲಿ ಅವರು ಹಿಂದಿ ಲೇಖಕ ವಿಷ್ಣು ಪ್ರಭಾಕರ ಅವರ ಐತಿಹಾಸಿಕ ನಾಟಕ 'ನವಪ್ರಭಾವತ'ವನ್ನು ಅನುವಾದಿಸಿದರು. ರಂಗತಜ್ಞ ಸದಾನಂದ ಸುವರ್ಣ ಅದನ್ನು 'ಧರ್ಮಚಕ್ರ' ಹೆಸರಿನಲ್ಲಿ ರಂಗದ ಮೇಲೆ ತಂದಾಗ ಅದರಲ್ಲಿ ಅಭಿನಯಿಸಿದ ಹೆಗ್ಗಳಿಕೆ ಶಿಮುಂಜೆ ಅವರದ್ದು. 'ಹುತಾತ್ಮರು' ಶಿಮುಂಜೆ ಅವರು ಅನುವಾದಿಸಿದ ಐವರು ಸಶಸ್ತ್ರ ಕ್ರಾಂತಿಕಾರರ ಜೀವನ ಚಿತ್ರಗಳನ್ನೊಳಗೊಂಡ ಕೃತಿ. ಓದುತ್ತಾ ಹೋದಂತೆ ರೋಮಾಂಚನಗೊಳಿಸುತ್ತದೆ. ಇದೇ ರೀತಿ 'ನಿಯೋಗ'ದ ಮೂಲಕ ಲೇಖಕರು ಸಮಾಜದಲ್ಲಿ ಬೇರೂರಿದ್ದ ದುರಂತವೊಂದರ ಮೇಲೆ ಬೆಳಕು ತೋರಿದ್ದಾರೆ. ಇದೇ ರೀತಿ 'ಹಣತೆ' ಹಿಂದಿಯ ಪಂಡಿತ ಸುದರ್ಶನ್ ಅವರ 'ಝು ರೋಕೆ' ಕೃತಿಯ ಅನುವಾದ. ಗುಜರಾತಿಯ ಪ್ರಸಿದ್ಧ ಲೇಖಕ ಚಂದ್ರಕಾಂತ ಭಕ್ಷಿಯವರ ಕಥೆಗಳನ್ನು ಕನ್ನಡೀಕರಿಸಿದ ಶ್ರೇಯ ಶಿಮುಂಜೆಯವರದು. 'ನಾನು ನೀನು ಮತ್ತು ಹಾಗೂ ಚದರಂಗದ ಕುದುರೆ' ಗುಜರಾತಿ ಸಂಸ್ಕೃತಿಯನ್ನು ಕನ್ನಡಕ್ಕೆ ಪರಿಚಯಿಸುತ್ತದೆ.

'ನವಪ್ರಭಾತ' ವಿಷ್ಣು ಪ್ರಭಾಕರ್‌ರ ಐತಿಹಾಸಿಕ ನಾಟಕ. ಇದನ್ನು ಕನ್ನಡಕ್ಕೆ ತಂದ ಶ್ರೇಯ ಶಿಮುಂಜೆಯವರದು. ಈ ಎಲ್ಲ ಕೃತಿಗಳ ಬಗ್ಗೆ ಚರ್ಚೆ ನಡೆಸಿದ ಹೆಚ್ಚುಗಾರಿಕೆ ಪೂರ್ಣಿಮಾ ಅವರದ್ದು. ಇದೇ ರೀತಿ ತುಳುವಿನಲ್ಲಿ 'ಯಾನ್ ಪನ್ಪಿನಿ ಇಂಚ'. ಅಲ್ಲದೆ ಮಾನವ್ಯ ಕವಿ ಬಿ.ಎ. ಸನದಿಯವರ ಕವನಗಳನ್ನು ತುಳುವಿಗೆ 'ಅಡ್ಡ ಬೂರೊಂಡೆ' ಹೆಸರಿನಲ್ಲಿ ಅನುವಾದಿಸಿದ್ದಾರೆ ಶಿಮುಂಜೆಯವರು.

ಹೀಗೆ ರಂಗನಟರಾಗಿ, ಕವಿಗಳಾಗಿ, ಅನುವಾದಕರಾಗಿ, ನಾಟಕಕಾರರಾಗಿ ಶಿಮುಂಜೆಯವರದು ಬಹುಮುಖ ಪ್ರತಿಭೆ. ಮುಂಬಯಿಯ ಮರಾಠಿ ಮಣ್ಣಿನಲ್ಲಿ ನೆಲೆನಿಂತು ತಾಯ್ನೆಲದ ಮಣ್ಣಿನ ಋಣವನ್ನು ತೀರಿಸಲು ಶ್ರಮಿಸಿದ ಶ್ರೇಯ ಇವರಿಗಿದೆ. ಹಿರಿಯ ಕಿರಿಯರೆನ್ನದೆ ಸಮಾಭಾವ, ಸಮಚಿತ್ತದಿಂದ ಬೆರೆಯುವ ಇವರು ಇತರರಿಗೆ ಮಾದರಿ ವ್ಯಕ್ತಿಯೆಂದರೆ ಆ ಮಾತಿನಲ್ಲಿ ಅತಿಶಯೋಕ್ತಿ ಇರಲಾರದು.

## ಪರಿಶುದ್ಧ ಪ್ರೀತಿ

1

ತಂದೆತಾಯಿ ಮಕ್ಕಳಿಗೆ ನೀಡುತ್ತಿರಬೇಕು ಪರಿಶುದ್ಧ ಪ್ರೀತಿ, ಅದುವೆ ವಾತ್ಸಲ್ಯಪಥ.
ತಾಯಿಯ ಹಾಲು ಕುಡಿದ ಮಗು ನೈಸರ್ಗಿಕವಾಗಿ ರೋಗನಿರೋಧಕ ಶಕ್ತಿ ಪಡೆಯುವುದು.
ತಂದೆಯ ಅಕ್ಕರೆ ಪಡೆದ ಮಗು ಧೈರ್ಯಶಾಲಿ ಆಗುವುದು. ಪಶುಗಳಿಗೂ ಪ್ರೀತಿ ಬೇಕು.
ಗಿಡ ಮರಗಳಿಗೂ ಪ್ರೀತಿ ಬೇಕು, ಪ್ರೀತಿಸಿ ನೋಡಿ, ಹೇಗೆ ಬೆಳೆಯುತ್ತವೆ ಕಣ್ಣಾರೆ ನೋಡಿರಿ.
ಕಲ್ಲು ಕೂಡ ಶಿಲ್ಪಿಯ ಪ್ರೀತಿ ಪಡೆದು ಮೂರ್ತಿಯಾಗುವುದು, ಪೂಜಾರ್ಹವಾಗುವುದು.

2

ಕಾಮ ಕೆಸರಾದರೆ, ಇಡ್ಡಾದರೆ ಜಿಡ್ಡಾದರೆ, ಪ್ರೀತಿ ಅದರಲ್ಲಿ ಅರಳಿನಿಂತ ಕಮಲ.
ಪ್ರೀತಿ ಕಮಲವಾದರೆ, ಪುಷ್ಪವಾದರೆ, ವಾತ್ಸಲ್ಯ ಅದರ ಮಧು, ಮಕರಂದ.
ಕಾಮ ಮಾಗಿ ಹಣ್ಣಾದಾಗ ಪ್ರೀತಿಯಾಗುವುದು, ಪ್ರೀತಿಯೇ ಭಕ್ತಿಯಾಗುವುದು.
ಕಾಮ–ಪ್ರೇಮ–ಭಕ್ತಿಗಳಿಂದ ಜೀವನದಿ ನಿಜವಾದ ಸಂತೃಪ್ತಿ ದೊರೆಯುವುದು.
ಪ್ರೀತಿಯ ಬಂಗಾರ ಕಾಸಿ, ಸುತ್ತಿಗೆಯಿಂದ ಬಡಿದಾಗ, ಅದು ಅಪರಂಜಿಯಾಗುವುದು.

3

ಭೋಗದಲ್ಲೇ ಕೊಳೆಯದಿರಿ, ಯೋಗದಿಂದ ಮಲಮಲಿಸಿರಿ.
ಕಾಮದಲ್ಲಿ ಕೊರಗದಿರಿ, ಪ್ರೇಮದಿಂದ ಲವಲವಿಸಿರಿ.
ತನ್ನ ತಾನೆ ಪ್ರೀತಿಸುವುದು ಯೋಗವಲ್ಲ ಅದುವೆ ಭೋಗ
ದೇವನಲ್ಲಿ ಇಡುವ ಪ್ರೀತಿ ನೈಜವಾದ ಭಕ್ತಿಯೋಗ.
ಪ್ರೀತಿಯೆ ಓಂಕಾರವಾಗಿ ಮೂರು ಜಗವ ಮೊಳಗುತಿದೆ.

4

ದ್ವೇಷದ ರೋಗದಿ ಬಳಲಿದವಗೆ, ಪ್ರೀತಿಯೆ ಪರಮೌಷಧಿ,
ಅಸೂಯೆಯ ಕಿಚ್ಚಿನಲಿ ಬೆಂದವರಿಗೆ, ಪ್ರೀತಿಯೇ ಪರಮೌಷಧಿ
ಮತ್ಸರದಲ್ಲಿ ಮುಳುಗಿದವರಿಗೆ, ಪ್ರೀತಿಯೆ ಪರಮೌಷಧಿ.
ನಿರಾಸೆಯ ಬಿಸಿಲಲಿ ಬಾಡಿದವರಿಗೆ ಪ್ರೀತಿಯೇ ಪರಮೌಷಧಿ,
ಎಲ್ಲ ನಕಾರಗಳಿಗೂ ಪ್ರೀತಿಯೇ ಸಕಾರಾತ್ಮಕ ಪರಮೌಷಧಿ.



–ಡಾ। 'ಜೀವಿ' ಕುಲಕರ್ಣಿ
**(M: 9324242172)**

(ಸ್ವಾಮಿ ಜಗದಾತ್ಮಾನಂದರ 'ಬದುಕಲು ಕಲಿಯಿರಿ' ಅಧ್ಯಾಯ ನಾಲ್ಕರಿಂದ ಸ್ಫುರಿಸಿದ್ದು)


## MATRIMONIAL

Well settled Madwa Brahmin, BE/MBA, Kannada / Gujrati speaking, Height 5'5", age 27 years, Gotra – Vashishta, Wheatish Complexion, living in Gandhi Nagar and working at an MNC at Ahmedabad seeks suitable alliance from well educated, Kannada Brahmin girl willing to settle in Gujrat. Interested may contact at phone no. : 079 23215547 or Mobile : 9879851822 or Email: galagali2013@gmail.com

***

Alliance invited from well educated, well settled South Indian/ Maharashtrian Brahmin Boys (Mumbai Preferred) for 27 years / 5'6"/Practicing Dentist BDS, PGDBM, Vasisth Gothra Kannada Madhwa Brahmin Girl of Professional Parents. Please contact: 9757362651 Email: mmargikar@hotmail.com

***

Alliance Invited from Well Educated working Kannada Brahmin Girls / South Indian (Mumbai Preferable) for 29 year / 5'11"/ BE, MBA-Kashyap Gothra Smartha Brahmin Boy well settled in Mumbai. Please contact 9833488416 Email: saraswathi.mvmurthy@gmail.com

***

Alliance for Brahmin Smartha Boy age 30 years, Kaushik Gotra, Simha Rashi, Magha Nakshatra, Height 5'11", fair complexion, B.com Graduate working in International Global Service in Mumbai, earning Rs. 45,000/- per month. Girl wanted with service in Mumbai (Smartha or Madhava), Graduate age between (25-28 years) Height 5'.5" to 5'.5", Good looking. Contact: Mrs. Meenakshi V. Begoor – 022 28970741 / 9892588861 / 9930466951

# ‘ದಿವ್ಯ’ ಕಾದಂಬರಿಯ ಆದರ್ಶ ಮಹಿಳೆಯರು

ಜಗತ್ತಿನಲ್ಲಿ ಯಾರೂ ಹೆಸರು ಹಿಡಿದು ಕರೆಯದ ಮಡಿ ಹೆಂಗಸು, ಮನೆಯವರಿಗೆ ಏಕವಚನದ ಅಕ್ಕು, ಪರರಿಗೆ ಬಹುವಚನದ ಅಕ್ಕಯ್ಯ. ಅಕ್ಕಮ್ಮನ ಗಂಡನ ಮೊದಲನೆಯ ಹೆಂಡತಿಯ ಮಕ್ಕಳು ಗಂಗೆ ಮತ್ತು ಗೌರಿ. ಅಕ್ಕಯ್ಯನ ಗಂಡ ಯಾರದೋ ಮನೆಗೆ ಶ್ರಾದ್ಧ ಮಾಡಿಸಲೆಂದು ಹೋಗುತ್ತಿದ್ದಾಗ ಪ್ರವಾಹದಲ್ಲಿ ದೋಣಿ ಮಗುಚಿ ಈಜಲಾರದೆ ಕೈ ಸೋತು ಪರಲೋಕ ಸೇರುತ್ತಾನೆ. ತನ್ನ ಇಪ್ಪತ್ತನೇ ವಯಸ್ಸಿನಲ್ಲೇ ಗಂಡನನ್ನು ಕಳೆದುಕೊಂಡು, ತನ್ನ ಸವತಿಯ ಎರಡು ಮಕ್ಕಳನ್ನು ಕಟ್ಟಿಕೊಂಡು ದಯಿನೆ ಗುಡ್ಡದ ತಮ್ಮನ ಮನೆ ಸೇರುತ್ತಾಳೆ ಅಕ್ಕು. ಸವತಿಯ ಮಕ್ಕಳಾದರೂ ಅವರಿಗೆ ಎಣ್ಣೆ ಸ್ನಾನ ತಪ್ಪಿಸಿದವಳಲ್ಲ. ದ್ವಾದಶಿಗೆ ದೋಸೆ, ಹಬ್ಬದಲ್ಲಿ ಹೋಳಿಗೆ ಮಾಡಿ ತನ್ನ ತಮ್ಮ ಕೇಶವನನ್ನೂ ಮತ್ತು ಎರಡು ಹೆಣ್ಣು ಮಕ್ಕಳನ್ನೂ ಅತೀ ಪ್ರೀತಿಯಿಂದ ಬೆಳೆಸುತ್ತಾಳೆ. ತನ್ನ ತಮ್ಮ ಕೇಶವನೇ ಸವತಿಯ ಮಗಳು ಗೌರಿಯನ್ನು ಮದುವೆಯಾಗಬಹುದಿತ್ತು. ಅಂದು ಆಕೆಗೆ ಅನ್ನಿಸುತ್ತಿದ್ದರೂ ಎಂದೂ ಬಾಯಿ ಬಿಟ್ಟು ಹೇಳಿದವಳಲ್ಲ. ಆದರೆ, ಅಂತಹ ಯಾವ ಭಾವನೆಯೂ ಇಲ್ಲದೆ ಬೆಳೆದವರು ಕೇಶವ ಮತ್ತು ಗೌರಿ. ಮಲೆನಾಡಿನ ಸಣ್ಣ ಕೊಂಪೆಯಲ್ಲಿದ್ದರೂ ಗಳಗನಾಥ, ಶರತ್ ಚಂದ್ರ, ಬಂಕಿಮಚಂದ್ರರ ಕಾದಂಬರಿಗಳನ್ನು, ಅಳಸಿಂಗಾಚಾರ್ಯರ ಮಹಾಭಾರತವನ್ನು, ಕಾರಂತರ ಮರಳಿ ಮಣ್ಣಿಗೆ, ಚೋಮನ ದುಡಿ, ಕುವೆಂಪುರವರ ಕಾನೂರು ಹೆಗ್ಗಡತಿ ಅಷ್ಟೇ ಅಲ್ಲದೆ ತನ್ನ ಅಪ್ಪನ ಹಿತ್ತಾಳೆ ಟ್ರಂಕಿನಲ್ಲಿದ್ದ ಗೋಪಾಲ ಕೃಷ್ಣ ರಾಯರ ಕಲಿಯುಗ ಪತ್ರಿಕೆಯನ್ನೂ ಓದಿ ಲೋಕದ ಆಗುಹೋಗುಗಳನ್ನು ತಿಳಿದಿದ್ದವಳು ಇಪ್ಪತ್ತರ ಹರೆಯದ ಗೌರಿ. ತನಗೆ ತಿಳಿದಿದ್ದ ವಿಷಯವನ್ನು ತನಗಿಂತ ಏಳೆಂಟು ವರ್ಷ ಕಿರಿಯಳಾದ ಗಂಗೆಗೂ ತಿಳಿ ಹೇಳುತ್ತಿದ್ದಳು. ಗಂಗೆ ಗೌರಿ ಕೇವಲ ಅಕ್ಕ ತಂಗಿಯರಷ್ಟೇ ಅಲ್ಲ ಆಪ್ತ ಸಂಗಾತಿಯರೂ ಹೌದು. ಅಂತಹ ಸಂತೃಪ್ತ ಸಂಸಾರದಲ್ಲಿ ಗಂಗೆಯ ಅನಿರೀಕ್ಷಿತ ಸಾವು ಗೌರಿಯ ನಡವಳಿಕೆಯಲ್ಲಿ ಯಾರೂ ಅರ್ಥ ಮಾಡಿಕೊಳ್ಳಲಾಗದಂತಹ ಬದಲಾವಣೆ ತರುತ್ತದೆ. ಪ್ರತಿದಿನ ಸಂಜೆ ಮನೆಯ ಹಿಂದಿರುವ ಗುಡ್ಡದಲ್ಲಿ ಒಂದು ಸಂಪಿಗೆ ಮರದಡಿ ಕಪ್ಪು ಬೆಕ್ಕಿಗೆ ಹಾಲು ಕುಡಿಸಿ ಬರುತ್ತಾಳೆ. ಹೊಲೆಯ ಕರಿಯನ ಜೊತೆ ಗುಡ್ಡಕ್ಕೆ ಹೋಗಿ ಅವನ ಕೊಳಲುವಾದನ ಕೇಳಿ ಸಂತೋಷ ಪಡುತ್ತಾಳೆ. ಕೇಶವನಿಗೆ ಆಕೆ ದೇವರ ಕೂಸು ಎನ್ನುವ ಭಾವ, ಅಕ್ಕುಗೆ ಆಕೆಗೆ ದೆವ್ವ ಹಿಡಿದಿರಬಹುದೆಂಬ ಸಂಶಯ. ಆದರೆ, ಹಳ್ಳಿಯ ಮುಗ್ಧ ಜನರಿಗೆ ಆಕೆ ಸಾಕ್ಷಾತ್ ದೇವಿ. ಆಕೆಯಿಂದ ಮುಟ್ಟಿಸಿಕೊಂಡರೆ ತಮ್ಮ ಕಷ್ಟಗಳೆಲ್ಲಾ ದೂರವಾಗುತ್ತದೆ ಎನ್ನುವ ದೃಢವಾದ ನಂಬಿಕೆ. ಹೀಗೆ ದೈವಾಂಶ ಸಂಭೂತಳೆಂದು ಪ್ರತೀತಳಾಗಿದ್ದ ಗೌರಿ - ಯು ಆರ್. ಅನಂತ ಮೂರ್ತಿಯವರು 2001ರಲ್ಲಿ ರಚಿಸಿದ 'ದಿವ್ಯ' ಕಾದಂಬರಿಯ ನಾಯಕಿ. ಸುಮಾರು ಅರವತ್ತರ ದಶಕದಲ್ಲಿ ದೇಶದಲ್ಲಿ ಸಮಾಜವಾದದ ಅಲೆ ಬೀಸುತ್ತಿದ್ದ ಹಿನ್ನೆಲೆಯಲ್ಲಿ ನಡೆದ ಕತೆ ಇದು. ಅಕ್ಕು, ಕೇಶವ, ಗಂಗೆ, ಗೌರಿಯ ದಯಿನೆ ಮನೆಯ ಜೀವನ ಚಿತ್ರಣ ಕಥೆಯ ಮೊದಲ ಭಾಗದ ಕಥಾವಸ್ತು.

ಕಥೆಯ ಎರಡನೆ ಭಾಗದಲ್ಲಿ ಅಕ್ಕುವಿನ ಮನೆಯ ಹಿಂದೆ ಒಂದು ಪುಟ್ಟ ಕೂಸು ಸಿಗುವುದರಿಂದ ಕಥೆ ಹೊಸ ತಿರುವನ್ನು ಪಡೆಯುತ್ತದೆ. ಕಥೆಯ ಕೊನೆಯ ಭಾಗದಲ್ಲಿ ನಾಯಕನ ಆಗಮನವಾಗುತ್ತದೆ. ನಂತರ ಅರವತ್ತರ ದಶಕದ ಹಿಂದಿ ಸಿನಿಮಾದಂತೆ ಎಲ್ಲವೂ ಸುಖಾಂತ್ಯವಾಗಿ ಕೊನೆಗೊಳ್ಳುತ್ತದೆ. ಅಕ್ಕುವಿನ ದೂರದ ಸಂಬಂಧಿ ಕೃಷ್ಣ ಶಾಸ್ತ್ರಿಗಳು "ನಿಮಗೆ ಪುತ್ರ ಸಂತಾನದ ಯೋಗ ಇದೆ" ಎಂದು ನುಡಿದ ಭವಿಷ್ಯದಂತೆ ಒಂದು ಮುಂಜಾನೆ ಮನೆಯ ಹಿತ್ತಲಲ್ಲಿ ತೊಟ್ಟಿಲಲ್ಲಿ ಒಂದು ಮಗು ಇರುತ್ತದೆ. ಮಗುವನ್ನು ಕಂಡ ಅಕ್ಕು ಅದರ ಹಿನ್ನೆಲೆಯ ಬಗ್ಗೆ ಚಿಂತಿಸದೆ ತನ್ನದೇ ಮಗು ಎನ್ನುವಂತೆ ಪಾಲಿಸಿ ಪೋಷಿಸುತ್ತಾಳೆ. ಅಕ್ಕು ಮತ್ತು ಗೌರಿ ಚಂದ್ರವದನನ ಆರೈಕೆ ಬಹಳ ಸಂಭ್ರಮದಿಂದ ಮಾಡುತ್ತಾರೆ. ದಯಿನೆ ಗುಡ್ಡದ ಅನತಿ ದೂರದಲ್ಲೇ ಇರುವ ದೇವನ ಹಳ್ಳಿಯ ಮಂಜಯ್ಯ ಸಾಹುಕಾರರ ಮಗಳು ವಿಮಲೆ ಒಂದು ದಿನ ಗೌರಿಯನ್ನು ತನ್ನ ಮನೆಗೆ ಬರಹೇಳುತ್ತಾಳೆ. ಗೌರಿಯೊಡನೆ ಏನೂ ಮುಚ್ಚು ಮರೆ ಮಾಡದೆ "ಗೌರಿ ನೀವು ಸಾಕುತ್ತಿರೋದು ನನ್ನ ಕೂಸು" ಎನ್ನುತ್ತಾಳೆ. ವಿಮಲೆ ಮದುವೆಯಾದ ಹೊಸತರಲ್ಲೇ ಗಂಡನನ್ನು ಕಳೆದುಕೊಂಡವಳು. ಆದರೆ, ಆಧುನಿಕ ಮನೋಭಾವದ ಮಂಜಯ್ಯನವರು ಮಗಳನ್ನು ಮನೆಗೆ ಕರೆತಂದು ಅವಳನ್ನು ಮುಂದೆ ಓದಿಸುತ್ತಾರೆ. ವಿಧವೆಯಾದರೂ ಕರಿಮಣಿ ತೊಟ್ಟು, ಹೂ ಮುಡಿದು ಜರಿ ಸೀರೆ ಉಟ್ಟು ತಂದೆಗೆ ತಕ್ಕ ಮಗಳಾಗಿ ನಡೆಯುತ್ತಾಳೆ. ಮನೆಯ ಕಾರ್ ಡ್ರೈವರ್ ಮಿಂಗೇಲನ ಜೊತೆಗಿನ ಪ್ರೇಮ ವ್ಯವಹಾರದಿಂದ ಹುಟ್ಟಿದ ಮಗು ಚಂದ್ರವನ. ಹಳ್ಳಿಯ ಜನರು ವಿಮಲ- ಮಿಂಗೇಲನ ಬಗ್ಗೆ ಗುಸುಪುಸು ಮಾತನಾಡಿದ್ದರೂ ದೊಡ್ಡವರ ಮನೆ ಸುದ್ದಿಯಾದ್ದರಿಂದ ಅದು ಬೆಳಕಿಗೆ ಬರಲಿಲ್ಲ. ವಿಮಲಳಿಂದ ಸುದ್ದಿ ತಿಳಿದ ಗೌರಿ ಗುಟ್ಟನ್ನು ತನ್ನೊಳಗೇ ಮುಚ್ಚಿಟ್ಟುಕೊಳ್ಳುತ್ತಾಳೆ. ವಿಮಲಳ ಅಪೇಕ್ಷೆಯಂತೆ ಪ್ರತಿನಿತ್ಯ ಅವಳ ಮನೆಗೆ ಹೋಗಿ ಚಂದುವಿನ ಬಾಲಲೀಲೆಯನ್ನು ವಿಮಲಳಿಗೆ ಒಪ್ಪಿಸುತ್ತಾಳೆ.

ರಾಜಕೀಯ ಸದೃಢ ಸ್ಥಾನ ಹೊಂದಿದ್ದ ಮಂಜಯ್ಯನವರನ್ನು ಒಮ್ಮೆಲೇ ಕುಗ್ಗಿಸಿದ್ದು ಅವರು ಘಾಟಿ ಗಣಪಯ್ಯನಿಗೆ ಸಾಕ್ಷಿ ಹೇಳಿದ್ದರಿಂದ. ಊರಿನವರೆಲ್ಲ ದ್ವೇಷಿಸುತ್ತಿದ್ದ ಗಣಪಯ್ಯನಿಗೆ ಒಬ್ಬಳು ರೂಪವತಿ ಮಗಳು ಸರಸ್ವತಿ ಬಾಲ ವಿಧವೆ. ಮಂಜಯ್ಯನ ಪ್ರೇರಣೆಯ ಮೇರೆಗೆ ಮಗಳನ್ನು ಶಾಲೆಗೆ ಸೇರಿಸುತ್ತಾರೆ. ಸರಸ್ವತಿ ಶಾಲೆಯ ಆದರ್ಶ ಶಿಕ್ಷಕ ಮೋಚಿ ದುರುಗಪ್ಪನನ್ನು ಪ್ರೀತಿಸುತ್ತಾಳೆ. ಅವರಿಬ್ಬರ ಪ್ರೇಮದ ಫಲವಾಗಿ ಸರಸ್ವತಿ ಬಸುರಿಯಾಗುತ್ತಾಳೆ. ಇಬ್ಬರೂ ಊರು ಬಿಟ್ಟು ಹೋಗಿ ಮದುವೆಯಾಗುವ ನಿರ್ಧಾರ ಮಾಡುತ್ತಾರೆ. ಆದರೆ, ಗಣಪಯ್ಯನಿಗೆ ಮಗಳ ಪ್ರೇಮ

✍ ರಮಾ ಉಡುಪ, ಥಾಣೆ

ವ್ಯವಹಾರದ ಸುದ್ದಿ ಸಿಕ್ಕಿ ದುರುಗಪ್ಪನ ಕೊಲೆ ಮಾಡುತ್ತಾನೆ. ಗಣಪಯ್ಯನನ್ನು ಉಳಿಸಲು ಸುಳ್ಳು ಸಾಕ್ಷಿ ಹೇಳಿ ಮಂಜಯ್ಯನವರ ಘನತೆ ಕುಗ್ಗುತ್ತದೆ. ಗಂಡನ ಕ್ರೂರತನದಿಂದ ರೋಸಿ ಹೋದವಳು ಸರಸ್ವತಿಯ ತಾಯಿ ಯಮುನಮ್ಮ. ದುರುಗಪ್ಪನ ಸಾವಿನಿಂದ ನೊಂದ ಸರಸ್ವತಿ ತನ್ನ ಬಸಿರನ್ನು ತೆಗೆಸಲು ಒಪ್ಪುವುದಿಲ್ಲ. ತಾಯಿ ಯಮುನಮ್ಮ ಮಗಳಿಗೆ ಬೆಂಬಲಿಗಳಾಗಿ ನಿಲ್ಲುತ್ತಾಳೆ. ತಾಯಿ ಮಗಳ ಉದ್ಧಟತನದಿಂದ ಗಣಪಯ್ಯನ ಸಿಟ್ಟು ನೆತ್ತಿಗೇರುತ್ತದೆ. 'ನಾನು ಮುಂಡೆಯಾದರೂ ಚಿಂತೆಯಿಲ್ಲ, ನನ್ನ ಮಗಳ ಬಾಣಂತನ ನಾನು ಮಾಡೇ ಮಾಡ್ತೀನಿ' ಎಂದು ಯಮುನಮ್ಮ ನಿರ್ಧರಿಸುತ್ತಾಳೆ.

ಮಾನಸಿಕವಾಗಿ ನೊಂದ ಮಂಜಯ್ಯ ಹಾಸಿಗೆ ಹಿಡಿಯುತ್ತಾರೆ. ಮಂಜಯ್ಯನ ಶುಶ್ರೂಷೆಯ ಜವಾಬ್ದಾರಿಯನ್ನು ಗೌರಿ ಸಂಪೂರ್ಣವಾಗಿ ವಹಿಸಿಕೊಳ್ಳುತ್ತಾಳೆ. ಅಷ್ಟೇ ಅಲ್ಲದೆ ಮನೆಯ ಉಸ್ತುವಾರಿಯನ್ನು ತಾನೇ ವಹಿಸಿಕೊಳ್ಳುತ್ತಾಳೆ. ವಿಮಲ ಗೌರಿಗಿಂತ ಹಿರಿಯವಳಾದರೂ ಗೌರಿಯ ಸಾತ್ವಿಕ ವ್ಯಕ್ತಿತ್ವಕ್ಕೆ ಮನಸೋತ ಮಿಮಲ ಅವಳಿಗೆ ತಲೆಬಾಗುತ್ತಾಳೆ. ಮಂಜಯ್ಯನ ಕ್ಷೀಣಿಸುತ್ತಿರುವ ಆರೋಗ್ಯವನ್ನು ಗಮನಿಸಿದ ಗೌರಿ ಅವರಿಗೆ ವಿಮಲಳ ಮಗುವಿನ ಬಗ್ಗೆ ತಿಳಿಸಬೇಕೆಂದು ನಿಶ್ಚಯಿಸುತ್ತಾಳೆ. ತನ್ನ ಅಣ್ಣ ಘನಶ್ಯಾಮ ಲಂಡನ್‌ನಿಂದ ಬರುವವರೆಗೆ ಕಾಯಬೇಕೆಂದು ವಿಮಲಳಿಗೆ ಅನ್ನಿಸಿದರೂ ಗೌರಿ ಮಂಜಯ್ಯರಿಗೆ 'ಇದು ನಿಮ್ಮ ಮೊಮ್ಮಗ. ಇವರು ಈ ಮಗುವಿನ ಅಪ್ಪ' ಎಂದು ತೋರಿಸುತ್ತಾಳೆ. ತಬ್ಬಿಬ್ಬಾದ ಮಂಜಯ್ಯನಿಗೆ ನಡೆದ ಘಟನೆಯನ್ನು ವಿವರವಾಗಿ ತಿಳಿಸುತ್ತಾಳೆ. ಮಂಜಯ್ಯ ಮಗಳಿಗೂ, ಮಿಂಗೇಲನಿಗೂ ಆಶೀರ್ವದಿಸುತ್ತಾರೆ. ಗೌರಿಯ ಪ್ರೀತಿಯ, ಅಧಿಕಾರಯುಕ್ತ ಮಾತುಗಳಿಗೆ ಸಂಪೂರ್ಣ ಪರವಶರಾಗಿದ್ದ ಮಂಜಯ್ಯನನ್ನು ಕಂಡು ಆಳು ಶೀನಪ್ಪ "ಸಾಹುಕಾರ್ರ ಹತ್ತಿರ ಹೀಗೆ ಯಾರಾದ್ರೂ ಈ ಪ್ರಪಂಚದಲ್ಲಿ ಮಾತಾಡಿದ್ದು ಕಂಡವ್ರು ಇದ್ದಾರಾ?" ಎಂದು ದೇವನ ಹಳ್ಳಿಯಲ್ಲೇ ಸುದ್ದಿ ಮಾಡಿದ್ದ. ಗೌರಿ ನಿಜಕ್ಕೂ ದೈವಾಂಶ ಸಂಭೂತೆ, ದೇವಿ ಎನ್ನುವ ಭಾವನೆ ಮತ್ತಷ್ಟು ಬಲಗೊಳ್ಳುತ್ತಾ ಹೋಗುತ್ತದೆ.

ಗೌರಿ ಮಂಗಳೂರಿನಿಂದ ಮಂಜಯ್ಯನ ಉಪಪತ್ನಿ ಮೀನಾಕ್ಷಿ ಮತ್ತು ಅವಳ ಮಗಳು ವಿನೋದಿನಿಯನ್ನು ಕರೆಸುತ್ತಾಳೆ. ಮೀನಾಕ್ಷಿ ಮತ್ತು ಮಗಳು ವಿನೋದಿನಿಯದ್ದು ತದ್ವಿರುದ್ಧ ಸ್ವಭಾವ. ತಾಯಿ ಅಲಂಕಾರ ಪ್ರಿಯೆ, ಮಗಳು ಸೀದಾ ಸಾದ ಸೀರೆ ಉಟ್ಟು ರಾಮಕೃಷ್ಣಾಶ್ರಮದಲ್ಲಿ ಸನ್ಯಾಸಿಯಾಗಬೇಕೆಂಬ ಅಭಿಲಾಷೆಯುಳ್ಳ ವಿದ್ಯಾವಂತೆ. ತಾಯಿ ಮಗಳು ಮಂಜಯ್ಯನ ಮನೆಯಲ್ಲಿ ಸುಲಭವಾಗಿ ಹೊಂದಿಕೊಳ್ಳುವಂತೆ ಮಾಡುವವಳೂ ಗೌರಿಯೇ. ವಿನೋದಿನಿಯೂ ಗೌರಿಯ ಸರಳತನಕ್ಕೆ ಮಾರುಹೋಗುತ್ತಾಳೆ.

ಲಂಡನ್‌ನಿಂದ ಘನಶ್ಯಾಮನ ಆಗಮನದ ನಂತರ ಎಲ್ಲರ ಬಾಳೂ ಒಂದು ಹಂತಕ್ಕೆ ಬರುತ್ತದೆ. ಮಗನನ್ನು ಕಂಡು ಸ್ವಲ್ಪ ದಿನದಲ್ಲೇ ಮಂಜಯ್ಯ ಕೊನೆಯುಸಿರೆಳೆಯುತ್ತಾರೆ. ಪರದೇಶದಿಂದ ಬಂದಿದ್ದರೂ ಆದರ್ಶವಾದಿ, ಸಮಾಜವಾದಿ ಚಿಂತಕ ಘನಶ್ಯಾಮ ತಂದೆಯ ಆಸ್ತಿಯನ್ನು ಯಾರಿಗೂ ಚ್ಯುತಿ ಬಾರದಂತೆ ಹಂಚುತ್ತಾನೆ. ತಮ್ಮ ಜಮೀನು ಮಾಡುತ್ತಿದ್ದ ಗೇಣಿದಾರರಿಗೇ ಜಮೀನು ಬಿಟ್ಟು ಕೊಡುತ್ತಾನೆ. ತನ್ನ ಪಾಲಿಗೆ ಯಾವ ಆಸ್ತಿಯನ್ನೂ ಇಟ್ಟುಕೊಳ್ಳದ ಅಣ್ಣನನ್ನು ಕಂಡು ವಿನೋದಿನಿಯೂ ತನಗೂ ಯಾವ ಪಾಲೂ ಬೇಡ ಎನ್ನುವ ನಿರ್ಧಾರಕ್ಕೆ ಬರುತ್ತಾಳೆ. ಅಂತ್ಯದಲ್ಲಿ ಕೃಷ್ಣ ಶಾಸ್ತ್ರಿಗಳ ಮುಂದಾಳತ್ವದಿಂದ ವಿನೋದಿನಿ ಕೇಶವನನ್ನು ವರಿಸುವುದೆಂದು, ಪರದೇಶದಿಂದ ಬಂದ ಗಂಧರ್ವ ಘನಶ್ಯಾಮ ಗೌರಿಯನ್ನು ಮದುವೆಯಾಗುವುದೆಂದು ನಿಶ್ಚಯವಾಗುತ್ತದೆ. ಮೀನಾಕ್ಷಿ ಮಂಗಳೂರಿನಲ್ಲಿದ್ದ ಮಂಜಯ್ಯನ ಆಸ್ತಿಗೆ ಹಕ್ಕುದಾರಳಾಗಿ ಮಂಗಳೂರಿಗೆ ತೆರಳುತ್ತಾಳೆ. ವಿಮಲ ಮತ್ತು ಮಿಂಗೇಲ ಶಿವಮೊಗ್ಗದಲ್ಲಿ ತಂದೆಯ ಪೆಟ್ರೋಲ್ ಪಂಪ್, ಸಿನಿಮಾ ಟಾಕೀಸ್ ಮತ್ತಿತರ ವ್ಯವಹಾರದ ನೇತೃತ್ವ ವಹಿಸಿಕೊಳ್ಳುತ್ತಾರೆ.

ಇಡೀ ಕಾದಂಬರಿಯಲ್ಲಿ ಮನ ತಟ್ಟುವ ಪಾತ್ರಗಳು - ಸ್ತ್ರೀ ಪಾತ್ರಗಳು - ಗೌರಿ, ಅಕ್ಕು, ವಿಮಲ, ವಿನೋದಿನಿ, ಸರಸ್ವತಿ, ಯಮುನಕ್ಕ ಎಲ್ಲರೂ ಓದುಗರಿಗೆ ಮೆಚ್ಚುಗೆಯಾಗುತ್ತಾರೆ. ಇಪ್ಪತ್ತನೇ ವಯಸ್ಸಿನಲ್ಲೇ ಗಂಡನನ್ನು ಕಳೆದುಕೊಂಡು ಕೇಶಚ್ಛೇದನ ಮಾಡಿಸಿಕೊಂಡು ಮಡಿಸೀರೆ ಉಟ್ಟ ಅಕ್ಕು ವೇಷಭೂಷಣದಲ್ಲಿ ಹಿಂದುಳಿದವಳೆನ್ನಿಸಿದರೂ ಅವಳ ವಿಚಾರಗಳು ಮಾತ್ರ ಅವಳ ಕಾಲಕ್ಕಿಂತ ಬಹಳ ಮುಂದುವರಿದದ್ದು. ಚಂದ್ರವದನ ಅವಳ ಮಡಿಲಿಗೆ ಬಂದು ಬಿದ್ದಾಗ ಹಳ್ಳಿಯ ಜನರು ಮಗುವಿನ ತಾಯಿ ತಂದೆಯ ಬಗ್ಗೆ ಸಂಶಯವಿದ್ದರೂ "ಅದು ದೇವರ ಕೂಸು ಅದರ ಜಾತಿ ಕುಲ ಗೋತ್ರ ಕೇಳಬಾರದು" ಎಂದು ಬಾಯಿ ಮುಚ್ಚಿಸುತ್ತಾಳೆ. ಮನೆಗೆ ಬರುತ್ತಿದ್ದ ಕೆಲಸದವರಿಂದ ಊರಿನ ವಿಷಯಗಳನ್ನೆಲ್ಲಾ ಸಂಗ್ರಹಿಸಿದರೂ ಯಾರ ಬಗ್ಗೆಯೂ ಎಂದೂ ಕೆಟ್ಟ ಮಾತನಾಡಿದವಳಲ್ಲ. ಚಂದ್ರವದನ ವಿಮಲಳ ಮಗ ಎಂಬ ವಿಷಯ ಆಕೆಗೆ ಮೊದಲಿನಿಂದ ತಿಳಿದಿದ್ದರೂ ಯಾರ ಮುಂದೆಯೂ ಬಾಯಿ ಬಿಟ್ಟವಳಲ್ಲ. ಗಂಗೆಯ ಸಾವಿನ ನಂತರ ಗೌರಿ ವಿಮನಸ್ಕಳಾಗಿ ಗುಡ್ಡ ಸುತ್ತಾಡಿ ಬರುತ್ತಿದ್ದರೂ ಅದರ ಬಗ್ಗೆ ಗೌರಿಯ ಮನ ನೋಯಿಸಿ ಎಂದು ಮಾತನಾಡಿದವಳಲ್ಲ. ಅಕ್ಕರೆಯಿಂದ ಸಾಕಿದ ಚಂದುವನ್ನು ವಿಮಲಳಿಗೆ ಒಪ್ಪಿಸುವಾಗಲೂ "ನಮ್ಮದಲ್ಲದೆ ಇರೋದಕ್ಕೆ ನಾವು ಅತೀ ಆಸೆ ಮಾಡಬಾರದು ಅಂತ ಮೊದಲೇ ಅಂದುಕೊಂಡಿದ್ದೆ" ಎನ್ನುವ ಸ್ಥಿತಪ್ರಜ್ಞೆ ಹೊಂದಿದವಳು. ಸಣ್ಣ ವಯಸ್ಸಿನಲ್ಲೇ ಮಡಿ ಸೀರೆ ಉಟ್ಟು ತನ್ನದೇ ಮಕ್ಕಳೂ ಇಲ್ಲದೆ ತನ್ನ ತಮ್ಮ ಮತ್ತು ಸವತಿಯ ಮಕ್ಕಳಿಗಾಗಿ ಸಂತಸದಿಂದ ದುಡಿದ ಹೆಂಗಸು ಅಕ್ಕು.

ಕೇವಲ ಒಂಭತ್ತನೇ ತರಗತಿ ಓದಿದ್ದ ಗೌರಿ ದಯಿನೆ ಗುಡ್ಡದ ಹೊರತು ಬೇರೆ ಪ್ರಪಂಚವನ್ನೇ ಕಾಣದಿದ್ದೂ, ತಾನು ಓದಿದ ಕಾದಂಬರಿಗಳು ಕೇಶವನಿಂದ ಕೇಳಿದ ಕಥೆಗಳಿಂದ ಒಳ್ಳೆಯ ವಿಚಾರವಂತಿಕೆ ಬೆಳೆಸಿಕೊಂಡವಳು. ಚೋಮನ ದುಡಿ ಓದಿ ಅಸ್ಪೃಶ್ಯರನ್ನು ನಾವು ನಡೆಸಿಕೊಳ್ಳುತ್ತಿರುವುದು ಸರಿಯೇ ಎಂದು ಚಿಂತಿಸುವಳು. ಕಾನೂರು ಹೆಗ್ಗಡತಿಯನ್ನು ಓದಿ ತಮಗಿಂತ ಶ್ರೀಮಂತರಾದ ಗೌಡರು ಕೇಶವ ಮತ್ತು ಅಕ್ಕುವಿಗೆ ತೋರಿಸುತ್ತಿದ್ದ ಗೌರವ ಮತ್ತು ತನಗಿಂದ ಹಿರಿಯರೂ ಅವಳನ್ನು ಬಹುವಚನದಲ್ಲಿ ಮಾತನಾಡಿಸುವುದರ ಬಗ್ಗೆ ಯೋಚಿಸುವಳು. ವಿಧವೆ ವಿಮಲ ಕ್ರಿಶ್ಚಿಯನ್ ಮಿಂಗೇಲನ ಜೊತೆ ಹೊಂದಿದ್ದ ಸಂಬಂಧದ ಬಗ್ಗೆ ಎಂದೂ ತಿರಸ್ಕಾರ ತೋರಿದವಳಲ್ಲ. ವಯಸ್ಸಿಗೆ ಮೀರಿದ ಪ್ರಬುದ್ಧತೆ ಅವಳದ್ದು.

ವಿಮಲಳ ಪರಿಚಯದ ನಂತರ ಮಂಜಯ್ಯನವರ ಮನೆಯ ಆಡಳಿತವನ್ನು ಸಂಪೂರ್ಣವಾಗಿ ಗೌರಿ ವಹಿಸಿಕೊಳ್ಳುವುದು ಸ್ವಲ್ಪ ಅಸಹಜ ಎನ್ನಿಸಿದರೂ ವಿಮಲ ಗೌರಿಗೆ ಸಂಪೂರ್ಣ ಸಹಕಾರ ನೀಡುತ್ತಾಳೆ. ಘನಶ್ಯಾಮ ವಿಮಲಳ ಮಗುವನ್ನು ಅಕ್ಕು ನೋಡಿಕೊಂಡಿದ್ದಕ್ಕೆ ಕೃತಜ್ಞತೆ ಸೂಚಿಸಿದಾಗ ಗೌರಿ ಸಿಡಿಮಿಡಿಗೊಳ್ಳುತ್ತಾಳೆ. "ನೀವು ಹೇಳ್ತಿರೋದು ಕೇಳಿದ್ರೆ ಅಂಥ ಒಂದು ಮಗುವನ್ನು ನಿಮ್ಮಂಥ ವಿಚಾರವಾದಿಗಳು ನೋಡಿಕೊಂಡಿದ್ರೆ ಅದೇನೂ ವಿಶೇಷವಾಗ್ತಾ ಇರಲಿಲ್ಲ. ಆಗ ಅದು ತುಂಬಾನೇ ಸಹಜವಾಗಿ ಇರ್ತಾ ಇತ್ತು. ಯಾಕೆಂದ್ರೆ ಇಂಗ್ಲಿಷ್ ಕಲಿತ ನೀವು ತುಂಬಾನೇ ಸಾಚಾ. ಎಲ್ಲರಿಗಿಂತ ಮುಂದಿರೋರು. ಆದರೆ, ನಮ್ಮ ಅಕ್ಕು ಹಾಗೆ ತಲೆ ಬೋಳಿಸಿಕೊಂಡ ಮಡಿ ಹೆಂಗಸೊಬ್ಬಳು ಏನೂ ತಿಳಿಯದ ಮೂಢಳೇ ಇರಬೇಕು ಅಲ್ಲವೇ? ಅಂಥವಳು ಕ್ರೂರಿಯಾಗಿರೋದೇ ಸಹಜ. ಆದರೆ, ಹಾಗಾಗದೆ ಅವಳು ಮನುಷ್ಯಳಂತೆ ವರ್ತಿಸಿದಾಳಲ್ಲ ಅದು ಬಹಳ ಅಪರೂಪ ಅಂತ ನಮ್ಮನ್ನ ಇಲ್ಲಿ ಕೂರಿಸಿಕೊಂಡು ಬೆನ್ನು ತಟ್ಟಿ ಹೊಗಳೋದೆ ನನಗೆ ದರ್ಪದ ಮಾತು ಅನ್ನಿಸುತ್ತೆ. ನಿಮ್ಮ ಬಿಳಿಜನ ಇಲ್ಲಿ ಬರೋ ಮುಂಚೆ ನಾವೆಲ್ಲ ಕಾಡು ಮನುಷ್ಯರಾಗಿದ್ದೆವು ಅಂತ ನೀವು ತಿಳಿದರೋ ಹಾಗಿದೆ" ಎನ್ನುವ ಮಾತುಗಳು ಗೌರಿಯ ವ್ಯಕ್ತಿತ್ವವನ್ನು ಸ್ಪಷ್ಟವಾಗಿ ಸೂಚಿಸುತ್ತದೆ. ಹಳ್ಳಿಯ ಜನರೆಲ್ಲಾ ಅವಳನ್ನು 'ದೇವಿ' ಎಂದೇ ಪರಿಗಣಿಸಿದ್ದರೂ ಆಕೆ ಮಾತ್ರ ಎಂದು ಅದರ ಬಗ್ಗೆ ತಲೆ ಕೆಡಿಸಿಕೊಂಡವಳಲ್ಲ. ವಿಮಳಿಗೂ ಕೆಲವೊಮ್ಮೆ ಗೌರಿ 'ಮಿಸ್ಟೀರಿಯಸ್' ಅಂತ ಅನ್ನಿಸುತ್ತಾಳೆ. ಆದರೆ, ಘನಶ್ಯಾಮ ಗೌರಿಯ ದೈವತ್ವಕ್ಕೆ "ಮನಸ್ಸಿಗೆ ದೊಡ್ಡ ಆಘಾತವಾದಾಗ ಒಬ್ಬ ವ್ಯಕ್ತಿಯೇ ಇಬ್ಬರ ಹಾಗೆ ವರ್ತಿಸಲಿಕ್ಕೆ ಶುರು ಮಾಡಿ ಬಿಡೋದುಂಟು" ಎಂದು ಸೈಕಲಾಜಿಕಲ್ ಎಕ್ಸ್‌ಪ್ಲನೇಶನ್ (psycologycal explanation) ಕೊಡುತ್ತಾನೆ. ಸುಮಾರು ಐನೂರು ವರ್ಷಗಳಿಂದ ಮನೆಯಲ್ಲಿ ನಡೆಯುತ್ತಿದ್ದ ಭೂ ವರಾಹ ಪೂಜೆಯನ್ನು ನಿಲ್ಲಿಸಿದ್ದಕ್ಕೆ ಮತ್ತು ಭೂ ವರಾಹ ಮೂರ್ತಿಯನ್ನು ಕಾರ್ಲ್‌ಮಾರ್ಕ್ಸ್‌ನ ಫೋಟೋದ ಪಕ್ಕ ಅಲಂಕಾರಕ್ಕಾಗಿ ಇಟ್ಟಿದ್ದನ್ನು ಕಂಡು ಗೌರಿ ಘನಶ್ಯಾಮನನ್ನು ಖಂಡಿಸುತ್ತಾಳೆ. ಗೌರಿಯ ಖಂಡನೆಯಿಂದ ಅವಮಾನಿತನಾದರೂ ಭೂ ವರಾಹವನ್ನು ಗೋಡೆಯಿಂದ ತೆಗೆದು ಪೆಟ್ಟಿಗೆಯಲ್ಲಿ ಸುತ್ತಿಡುತ್ತಾನೆ. ಗೌರಿಯ ಪ್ರತಿಯೊಂದು ಕೃತ್ಯವೂ ಘನಶ್ಯಾಮನಿಗೆ ಅವಳತ್ತ ಹೆಚ್ಚು ಆಕರ್ಷಣೆಯನ್ನುಂಟು ಮಾಡುತ್ತದೆ.

ಅಕ್ಕುವಿಗಿಂತ ಹತ್ತು ಹನ್ನೆರಡು ವರುಷ ಕಿರಿಯವರಾದ ವಿಮಲ ಮತ್ತು ಸರಸ್ವತಿಯವರ ಜೀವನ ಅಕ್ಕುವಿನ ಜೀವನಕ್ಕಿಂತ ಬಹಳ ಭಿನ್ನವಾದದ್ದು. ಇಬ್ಬರೂ ಬಾಲ ವಿಧವೆಯರಾದರೂ ವೈಧವ್ಯದ ಯಾವ ಕುರುಹೂ ಅವರ ಜೀವನಕ್ಕೆ ಅಡ್ಡಿ ಬರಲಿಲ್ಲ. ವಿಮಲ ಕ್ರಿಶ್ಚಿಯನ್ ಮಿಂಗೇಲನನ್ನು ಪ್ರೀತಿಸಿ ಮಗುವನ್ನು ಪಡೆಯುತ್ತಾಳೆ. ಸರಸ್ವತಿ ಮೋಚಿ ದುರುಗಪ್ಪನ ಮಗುವನ್ನು ಸಮಾಜಕ್ಕೆ ಹೆದರದೆ ತಾಯಿ ಬೆಂಬಲದಿಂದ ಹೆತ್ತು ಸಲಹುತ್ತಾಳೆ. ದಾವಣಗೆರೆಯಿಂದ ತನ್ನ ಮಾವನನ್ನು ಕರೆಸಿಕೊಂಡು ಮಗುವನ್ನು ಆತನ ಪಾದದ ಮೇಲಿಟ್ಟು ನಮಸ್ಕಾರ ಮಾಡುತ್ತಾಳೆ. ಸಮಾಜ ಆಕೆಯನ್ನು ತಿರಸ್ಕರಿಸದೇ ಗೌರವಿಸುತ್ತದೆ.

ಈ ಕಾದಂಬರಿಯಲ್ಲಿ ಕಾಣುವ ಎಲ್ಲಾ ಸ್ತ್ರೀ ಪಾತ್ರಗಳು ಅನಂತ ಮೂರ್ತಿಯವರ ಬಹಳಷ್ಟು ಸಣ್ಣ ಕತೆಗಳಲ್ಲಿಯೂ ಕಾಣಸಿಗುತ್ತಾರೆ. ಆದರೆ, ಈ ಕಾದಂಬರಿಯಲ್ಲಿ ಎಲ್ಲಾ ಉದಾತ್ತ ಸ್ತ್ರೀಯರ ಮಿಲನವಾಗಿದೆ. ಅನಂತ ಮೂರ್ತಿಯವರ ಎಡಪಂಥೀಯ ವಿಚಾರಧಾರೆಯಿಂದಾಗಿ ಸ್ತ್ರೀಯರನ್ನು ಉನ್ನತ ಮಟ್ಟದಲ್ಲಿಟ್ಟು ಗೌರವಿಸಿರುವುದು ಸಹಜವಾಗಿದೆ. ಅರವತ್ತರ ದಶಕದಲ್ಲಿ ವಿಧವೆಯರಾದ ವಿಮಲೆ ಮತ್ತು ಸರಸ್ವತಿಯವರ ದಿಟ್ಟ ಹೆಜ್ಜೆ ಶ್ಲಾಘನೀಯ. ಈ ಕಾದಂಬರಿ ಅರವತ್ತರ ದಶಕದಲ್ಲೇ ಪ್ರಕಟವಾಗಿದ್ದರೆ ಹೆಚ್ಚು ಸಮಂಜಸವಾಗಿರುತ್ತಿತ್ತು ಮತ್ತು ಸಮಾಜಕ್ಕೆ ಒಳ್ಳೆಯ ಕೊಡುಗೆಯಾಗಿರುತ್ತಿತ್ತು.

# ಮತ್ತೆ ಜಾಗರಣೆ...

ಅಂದು ಶಿವರಾತ್ರಿ. ಹಬ್ಬದ ತಯಾರಿಗಾಗಿ ಮಾರ್ಕೆಟ್ಟು ಗಿಜಿಗುಡುತಿತ್ತು. ಆ ಸದ್ದಿನ ನಡುವಲ್ಲಿಯೂ ಪಾರ್ವತಕ್ಕನಿಗೆ ಜೋರಾದ ಸದ್ದು ಕೇಳಿಸಿತ್ತು....

"ಪಾರ್ವತಕ್ಕ ಬಿಲ್ವಪತ್ರೆ ತಕ್ಕೊಂಡು ಹೋಗೋಕೆ ಬಂದ್ರಾ. ನಿಮ್ಮ ಕೈಯಲಲಿರೋ ಬಿಲ್ವ ಪತ್ರೆಗಳನ್ನ ನೋಡಿದ್ರೆ. ಇವತ್ತು ರಾತ್ರಿ ಇಡೀ ಜಾಗರಣೆ ಅಂತನ್ನಿಸುತ್ತೆ...."

ಪಾರ್ವತಕ್ಕನ ಕೈಯಲ್ಲಿದ್ದ ಬಿಲ್ವ ಪತ್ರೆಯ ಚೀಲವನ್ನ ನೋಡಿ ಯಶೋದಕ್ಕ ನಿಲ್ಲಿಸಿ ಪ್ರಶ್ನೆ ಎಸೆದಿದ್ದರು. "ಹೌದು ಯಶೋದಕ್ಕ ಇವತ್ತು ಶಿವರಾತ್ರಿ ಅಲ್ವಾ... ಇವತ್ತಿನ ದಿನ ಈ ಬಿಲ್ವ ಪತ್ರೆಯನ್ನು ಭಕ್ತಿಯಿಂದ ಆ ಭೋಲೇನಾಥನಿಗೆ ಅರ್ಪಿಸಿದರೆ ಸಾಕು... ಆ ಶಿವ ಖಂಡಿತ ಒಲಿದೇ ಒಲೀತಾನೆ... ಈ ಸಾರಿಯಂತೂ ನನ್ನ ಮಗಳದ್ದು MBA ಫೈನಲ್ ಇಯರ್ ಅಲ್ವಾ... ಹಾಗಾಗಿ ಸ್ವಲ್ಪ ವಿಶೇಷ ಆರಾಧನೆ ಮಾಡ್ಬೇಕೂಂತ ಇದೀನಿ.... ಅಹೋರಾತ್ರಿ ಪಂಚಾಕ್ಷರಿ ನಾಮ ಜಪ... ನೀವೂ ಬರ್ತೀರಾ...?"

"ಅಯ್ಯೋ ಇಲ್ಲಾರೀ ಹನ್ನೊಂದು ಘಂಟೆಯವರೆಗೆ ಸೀರಿಯಲ್ ನೋಡೋದೇ ಬಹಳ ಕಷ್ಟ... ಇನ್ನು ಬೆಳಗ್ಗಿನವರೆಗೆ ಜಾಗರಣೆ ಅಂದ್ರೆ ಮುಗಿದೋಯ್ತು ನನ್ನ ಕಥೆ.... ನಿಮ್ಮ ಶಿವ ಭಕ್ತಿ ನಿಮಗೇ ಇರಲಿ" ಅಂತಂದು ಬೇಗ ಜಾಗ ಖಾಲಿ ಮಾಡಿ ಬಿಟ್ಟರು ಯಶೋದಕ್ಕ.

ಸರಿ ಬಿಡಿ ನಿಮಗೇನು ಗೊತ್ತು... ನಮ್ಮ ಶಂಕರ ಅದೆಷ್ಟು ದಯಾಳು ಅಂತ... ಮನದಲ್ಲಿ ಗೊಣಗಿಕೊಂಡರು ಮುಂದೆ ಹೆಜ್ಜೆ ಹಾಕತೊಡಗಿದರು ಪಾರ್ವತಕ್ಕ.

ಹಾ.... ಪಾರ್ವತಕ್ಕ ಈ ಕಾಲಕ್ಕೆ ಸಿಗೋ ಅಪರೂಪದ ಶಿವ ಭಕ್ತೆ. ಅದರಲ್ಲೂ ಶಿವರಾತ್ರಿಯಂದು ಉಪವಾಸ, ಜಾಗರಣೆ ಅಂತ ಶಿವನ ಅರಾಧನೆ ಬಹಳ ಜೋರಾಗೇ ಇರುತ್ತೆ. ಈ ಪಾರ್ವತಕ್ಕನ ಪತಿ ದೇವರು ಗಿರೀಶಣ್ಣ ಅಂತ, ಅವರಿಗೋ ಪೇಟೆಯಲ್ಲಿ ಸ್ವಂತದ ಗಿಫ್ಟ್ ಮತ್ತು ಕಾರ್ಡ್ಸ್‌ಗಳ ಅಂಗಡಿ ಇದೆ. ಪಾರ್ವತಕ್ಕನ ಭಕ್ತಿಯ ಫಲವೋ ಅಥವಾ ಗಿರೀಶ್‌ರ ಶ್ರದ್ಧೆಯ ದುಡಿಮೆಯ ಫಲವೋ ಉತ್ತಮ ಆದಾಯವಂತೂ ಬರುತ್ತಿತ್ತು. ಈ ದಂಪತಿಗಳಿಗೆ ಒಬ್ಬಳೇ ಪುತ್ರಿ.... ನಮಿತಾ ಅಂತ... ಇಬ್ಬರೂ ಮುದ್ದಾಗಿ ನಮ್ಮೀ... ಅಂತಾನೇ ಕರೀತಿದ್ರು... ಈ ಬಾರಿ ಆಕೆಯದು ಫೈನಲ್ ಇಯರ್ MBA ಪರೀಕ್ಷೇ ಕೂಡಾ ಹತ್ತಿರ ಬರ್ತಾ ಇತ್ತು. ಮೊದಲೆಲ್ಲಾ ಒಳ್ಳೆ ರಿಸಲ್ಟ್ ತರ್ತಾ ಇದ್ದೋಳೋ ಯಾಕೋ ಒಂದು ವರ್ಷದಿಂದ ಸ್ವಲ್ಪ ಕಡಿಮೆ ಮಾರ್ಕ್ಸ್ ತೆಗೆಯೋಕೆ ಶುರುಮಾಡಿದ್ಲು.... ಹಾಗಾಗೋ ಏನೋ ಪಾರ್ವತಕ್ಕ ನನ್ನ ಚಿಂತೆ ಕಾಡತೊಡಗಿತ್ತು.... ಈ ಬಾರಿ ಶಿವನ ಎದುರು ತನ್ನ ಮಗಳ ಕುರಿತೇ ಬೇಡಿಕೊಳ್ಳೋ ಅಲೋಚನೆ ಮಾಡಿಕೊಂಡಿದ್ದಳು....

ಹಾಗೇ ಪೂಜೆಗೆ ಬೇಕಾದ ಎಲ್ಲಾ ಸಾಮಾಗ್ರಿ ಖರೀದಿಸಿ ತರುವಷ್ಟರಲ್ಲಿ ಗಂಟೆ ಏಳಾಗಿತ್ತು. ಮನೆಗೆ ಬಂದವಳೇ ಕೈಕಾಲು ಮುಖ ತೊಳೆದು ದೇವರ ಕೋಣೆಗೆ ಹೋಗಿ ದೇವರ ಅಲಂಕಾರ ಶುರುಮಾಡಿಕೊಂಡಳು. ಅಷ್ಟು ಹೊತ್ತಿಗೆ ಯಾರೋ ಬಂದ ಸದ್ದಾಯಿತು.... ಕುಳಿತಲ್ಲಿಂದಲೇ ಇಣುಕಿ ನೋಡಿದಳು....

ಬಂದಿದ್ದು ನಮ್ಮೀ ಬಂದವಳೇ ಟಿ.ವಿ. ಆನ್ ಮಾಡಿ ಚಾನಲ್ ಬದಲಾಯಿಸೋಕೆ ಶುರುಮಾಡಿಕೊಂಡಳು.

"ಏ ನಮ್ಮೀ ಪುರುಸೊತ್ತು ಇದ್ರೆ ಇಲ್ಲಿ ಬಾರೆ.... ಸ್ವಲ್ಪ ಅಲಂಕಾರ ಮಾಡುವಿಯಂತೆ...."

"ಇಲ್ಲಾ ಅಮ್ಮಾ... ಎಕ್ಸಾಮ್‌ಗೆ ಓದ್ಕೋಬೇಕು..." ಅಂದವಳೆ ಸುಮ್ಮನೆ ರಾಗ ಎಳೆದಳು....

"ಹೂ... ಸರಿ ಬಿಡು ಓದ್ಕೋ...." ಅಂದಳು ಪಾರ್ವತಕ್ಕ.

ನಮ್ಮೀ ಒಳ್ಳೆ ಹುಡುಗೀನೇ ಆದರೆ ಅದೇನೋ ಸಹವಾಸ ದೋಷ ಅಂತಾರಲ್ಲ ಹಾಗಾಗಿ ಮೊದಲಿನ ಭಯ ಭಕ್ತಿ ಎಲ್ಲಾ ಮರೆಯೋಕೆ ಶುರುಮಾಡಿದ್ದಳು. ಕಾರಣ ಉತ್ತರ ಭಾರತದಿಂದ ಕಲಿಯಲು ಬಂದಿದ್ದ ಇವಳ ಗೆಳೆಯರೆಲ್ಲಾ ಹೈ ಫೈ ಲೈಫ್ ಸ್ಟೈಲ್‌ನ ರುಚಿ ತೋರಿಸತೊಡಗಿದ್ದರು. ಎಲ್ಲರೂ ಆ ರೀತಿ ಇರಬೇಕಾದ್ರೆ ಇವಳೊಬ್ಬಳನ್ನ ಬದಲಾಯಿಸದೇ ಬಿಡುತ್ತಾರೆ...?



✍ ಗುರುಪ್ರಸಾದ್ ಆಚಾರ್ಯ

ಗಂಟೆ ಎಂಟಾಗುತ್ತಿದ್ದಂತೆ ಕಾಲಿಂಗ್ ಬೆಲ್ ಸದ್ದು ಕೇಳಿಸಿದ್ದೇ ತಡ.... ನಮ್ಮೀ ಓಡೋಡಿ ಬಂದವಳೇ... ಬಾಗಿಲು ತೆಗೆದಳು.... ನೋಡಿದರೆ ಒಂದಿಬ್ಬರು ಕಾಲೇಜಿನ ಮಿತ್ರರು... ಅದೇನೋ ಗುಸು ಗುಸು ಅಂತ ಮಾತಾಡಿಕೊಂಡರು... ಆ ಮಾತುಕತೆ ಅಲಂಕಾರದ ಕೆಲಸದಲ್ಲಿ ತಲ್ಲೀನಳಾಗಿದ್ದ ಪಾರ್ವತಕ್ಕನ ಕಿವಿಗೆ ಬೀಳಲಿಲ್ಲ. ಆಕೆ ಗಮನವನ್ನೂ ಹರಿಸಲಿಲ್ಲ.

ಅತ್ತ ಮಾತುಕತೆ ಮುಗಿದದ್ದೇ ತಡ ನಮ್ಮೀ ಅಮ್ಮನ ಬಳಿಗೋಡಿ ಬಂದು... ಅಮ್ಮಾ... ಎಂದವಳೆ ಮೆಲುಧ್ವನಿಯಲ್ಲಿ ರಾಗ ಎಳೆಯತೊಡಗಿದಳು...

"ಏನೇ..."

"ಅದು ಎಕ್ಸಾಮ್ ಹತ್ರ ಬಂತಲ್ವಾ... ಕೆಲವು ಪೋರ್ಶನ್ ನಾವೇ ಓದ್ಕೋಬೇಕು ಅಂದಿದಾರೆ ಹಾಗಾಗಿ ನಾವೊಂದು ಐದು ಜನ ಗ್ರೂಪ್ ಸ್ಟಡಿ ಮಾಡ್ಬೇಕೋಂತ ಇದೀವೀ ನನ್ನ ಫ್ರೆಂಡ್ ಸಹನಾ ಮೇಲಿ ಒಟ್ಟಾಗ್ತಾ ಇದ್ದೀವಿ... ಹೋಗ್ಲಾ..."

"ಅಯ್ಯೋ ಆಗ್ಲೇ ಕತ್ತಲಾಯಿತಲ್ಲೇ..."

"ಹೂ... ಅಮ್ಮ ನಾಳೆ ಬುಕ್ ರಿಟರ್ನ್ ಮಾಡೋಕ್ಕಿದೆ.... ಹಾಗಾಗಿ ಇವತ್ತಿಡೀ ಜಾಗರಣೆ ಮಾಡ್ಬೇಕಾಗುತ್ತೆ..."

"ಹಾಗಿದ್ರೆ ಅಪ್ಪ ಬರ಼್ಿ... ಅವರ ಹತ್ರನೇ ಕೇಳು..."

"ಅಮ್ಮಾ... ಪ್ಲೀಸ್... ಅಮ್ಮಾ... ನೀನೇ ಅಪ್ಪನ ಹತ್ರ ಹೇಳು ನಾನೀಗ್ಲೇ ಹೊರಡಬೇಕು.... ನೀನು ಇಲ್ಲಿ ಜಾಗರಣೆ ಮಾಡು... ನಾನು ಅಲ್ಲಿ ಮಾಡ್ತೀನಿ... ಹಾ ಈಶ್ವರ ದೇವರ ಫೋಟೋ ಕೂಡ ಇದೆಯಮ್ಮಾ..." ಅಂತ ಅಮ್ಮನನ್ನ ಭಾವನಾತ್ಮಕವಾಗಿ ಕಾಡತೊಡಗಿದಳು.

"ಜಾಗರಣೆ".... "ಈಶ್ವರನ ಫೋಟೋ ಅನ್ನುವ ಶಬ್ದಗಳೆಲ್ಲ ಪಾರ್ವತಕ್ಕನ ಮೇಲೆ ಮೋಡಿ ಮಾಡಿತ್ತು.

"ಸರಿ, ಅಪ್ಪನ ಹತ್ರ ನಾನು ಹೇಳ್ತೀನಿ ನೀನು ಚೆನ್ನಾಗಿ ಓದು.... ಭೋಲೇನಾಥನನ್ನು ಆಗಾಗ ನೆನಪಿಸ್ಕೋ..." ಅಂತಂದರು...

ಸೋ ಸ್ವೀಟ್... ಅಂದವಳೇ ಅಮ್ಮನ ಕೆನ್ನೆಗೆ ಸಿಹಿ ಮುತ್ತನ್ನಿಕ್ಕಿ ಓಡಿ ಹೋಗಿ ಹೊರಡೋಕೆ ಶುರು ಮಾಡಿದಳು...

ಇಲ್ಲಿ ಪಾರ್ವತಕ್ಕನ ಜಾಗರಣೆ ನಿಶ್ಕಲ್ಮಶ ಭಕ್ತಿಯಿಂದ ಶುರುವಾದ್ರೆ ಅಲ್ಲಿ ಅವರ ಮಗಳು ಕಪಟತನದ ಭಕ್ತಿಯಿಂದ ಕೂಡಿತ್ತು. ನಿಜಕ್ಕೂ ನಮ್ಮಿಗೆ ಯಾವುದೇ ಗ್ರೂಪ್ ಸ್ಟಡಿ ಇದ್ದಿರಲಿಲ್ಲ. ಸಂಡೇ ಪಬ್‌ಗೆ ಹೋಗೋದಕ್ಕಾಗಿ ನಮ್ಮೀ ಗ್ರೂಪ್ ಸ್ಟಡಿ ಮತ್ತು ಜಾಗರಣೆಯ ನೆಪ ಮುಂದಿಟ್ಟಿದ್ದಳು. ಗೆಳತಿಯ ರೂಮಿಗೆ ಹೋದವಳೇ ತನ್ನ ಸಾಂಪ್ರದಾಯಿಕ ಉಡುಗೆಗಳನ್ನೆಲ್ಲಾ ಬಿಸಾಕಿ ಆಧುನಿಕ ಬಟ್ಟೆಗಳನ್ನ ತೊಟ್ಟುಕೊಂಡಳು, ಪಬ್ ಸಂಸ್ಕೃತಿನೇ ಹಾಗಲ್ವಾ... ಬಟ್ಟೆಗಳಿಗೆ ಹೆಚ್ಚು ಮೈಮುಚ್ಚುವ ಅವಕಾಶ ಇಲ್ಲ... ಗೆಳತಿಯರ ಜೊತೆಗೂಡಿ ಹೊರಟವಳೇ. ಅಲ್ಲಿಂದ ಒಂದಷ್ಟು ಜನ ಹುಡುಗರ ಜೊತೆ ಸೇರಿ ನಗರದ ಪ್ರಸಿದ್ದ ಪಬ್ ಸೇರಿದ್ದಳು. ಇತ್ತ ತಾಯಿ ಲಿಂಗಾಭಿಷೇಕದ ನೀರನ್ನ ತೀರ್ಥವಾಗಿ ಸೇವಿಸಿದರೆ ಅತ್ತ ಮಗಳು.. ಬೇರೇನೇ ತೀರ್ಥ ಸೇವಿಸೋಕೆ ಶುರು ಮಾಡ ತೊಡಗಿದ್ದಳು. ಭಗವದ್ಭಕ್ತಿಯಲ್ಲಿ ತಲ್ಲೀನವಾಗಿ ತಾಯಿ ಜಗರಣೆ ಮಾಡುತ್ತಿದ್ದರೆ ಮಗಳು ಕುಡಿದು ಕುಪ್ಪಳಿಸಿ ಮೈ ಮರೆತು ಜಾಗರಣೆ ಮಾಡುತ್ತಿದ್ದಳು. ನಶೆ ಏರಿ ತನ್ನ ಮೈ ಮೇಲಿನ ಅರಿವನ್ನೇ ಕಳಕೊಂಡಿದ್ದಳು... ಅದೆಷ್ಟು ಜನ ಇವಳ ಈ ದುರಾವಸ್ಥೆಯ ಲಾಭ ಪಡಕೊಂಡರೋ ದೇವರೇ ಬಲ್ಲ... ಅಲ್ಲಿಂದ ನಡುರಾತ್ರಿ ಮೂರರ ಹೊತ್ತಿಗೆ ಹೇಗೋ ಗೆಳತಿಯ ರೂಮ್ ಸೇರಿದವಳನ್ನ ಆರೂವರೆಯ ಅಲರಾಂ ಬಡೆದೆಬ್ಬಿಸಿತು... ತಡೆಯಲಾಗದ ತಲೆಭಾರವನ್ನು ಲೆಕ್ಕಿಸದೆ ಮನೆಯಿಂದ ಬರುವಾಗ ಹಾಕಿದ್ದ ಬಟ್ಟೆ

ಧರಿಸಿ ಮನೆಗೆ ಕಡೆ ಹೆಜ್ಜೆ ಹಾಕಿದಳು ನಮ್ಮೀ....

ಇತ್ತ ಆರು ಗಂಟೆಯವರೆಗೆ ಜಾಗಣೆ ಮಾಡಿದ್ದ ಪಾರ್ವತಕ್ಕ ಸ್ನಾನವನ್ನೆಲ್ಲಾ ಪೂರೈಸಿ ಚೆಂದವಾಗಿ ಅಂಗಣದಲ್ಲಿ ರಂಗೋಲಿ ಹಾಕುತ್ತಿದ್ದರು. ಅದಾಗಲೇ ಮಗಳ ಪ್ರವೇಶವಾಯಿತು.

"ಯಾಕೇ ಇಷ್ಟೊಂದು ತಡವಾಯಿತು...?"

"ಹಾ... ಪೂರ್ತಿ ಜಾಗರಣೆ ಅಮ್ಮಾ... ಓದಿ ಓದಿ ಸಾಕಾಗಿ ಹೋಯಿತು. ನಾನೊಬ್ಬಳೇ ಇದ್ದಿದ್ರೆ ಮಲಗಿರ್ತಿದ್ನೋ ಏನೋ ಗ್ರೂಪದಲ್ಲಿ ಓದಿದ್ದಕ್ಕೆ ಸುಲಭ ಆಯಿತು... ಸ್ವಲ್ಪ ಹೊತ್ತು ಮಲಗ್ತೀನಿ ಒಂಭತ್ತು ಗಂಟೆಗೆ ಎಬ್ಬಿಸ್ತೀಯಾ..." ಅಂದವಳೇ ತನ್ನ ರೂಮಿನಾಚೆ ಹೊರಟಳು.

ನಮ್ಮೀಯ ಮುಖವನ್ನು ಸರಿಯಾಗಿ ನೋಡಿದ ಪಾರ್ವತಕ್ಕನಿಗೆ ಅವಳಲ್ಲಿನ ಆಯಾಸ, ಕೆಂಪಾದ ಕಣ್ಣುಗಳು ಆಕೆ ನಿಜವನ್ನೇ ಹೇಳುತ್ತಿದ್ದಾಳೆ ಅನ್ನುವ ನಂಬಿಕೆಯನ್ನು ಹುಟ್ಟಿಸಿತ್ತು. ಒಂದು ಕ್ಷಣ ಮನದಲ್ಲಿ ಸಂತಸ ಪಟ್ಟ ಪಾರ್ವತಕ್ಕ ನೇರ ದೇವರ ಕೋಣೆಯ ಬಳಿ ಬಂದು...

"ಹೇ ಶಂಕರಾ... ನಿಜಕ್ಕೂ ನನ್ನ ಮಗಳನ್ನ ನೋಡೋವಾಗ ಅದೆಷ್ಟು ಖುಶಿಯಾಯಿತು ಗೊತ್ತಾ.... ನನ್ನ ಜಾಗರಣೆಗೆ ಅಷ್ಟು ಬೇಗ ಮೆಚ್ಚಿದಿಯಾ... ಅದೆಷ್ಟು ಕಷ್ಟಪಟ್ಟು ಓದ್ತಾ ಇದ್ದಾಳೆ... ಅವಳಲ್ಲಿ ಈ ಬುದ್ಧಿ ಸದಾ ಇರೋ ಹಾಗೆ ಮಾಡಪ್ಪಾ... ಇದೇ ನನ್ನ ಕೋರಿಕೆ..."

ಅತ್ತ ನಿಜವಾದ ಕೈಲಾಸದಲ್ಲಿ ಪರಶಿವನ ಅರ್ಧಾಂಗಿ ಶಿವೆ ನಗತೊಡಗಿದಳು...

"ಸ್ವಾಮೀ ಈಗೇನು ಮಾಡುವಿರಿ... ನಿಮ್ಮ ಭಕ್ತೆ ವಾಸ್ತವದ ಅರಿವಿಲ್ಲದೇ ತನ್ನ ಮಗಳ ಬುದ್ಧಿ ಇದೇ ತೆರನಿರಲಿ ಅನ್ನುತ್ತಿದ್ದಾಳಲ್ಲ..."

ನಿಜಕ್ಕೂ ತನ್ನ ಭಕ್ತಿಯ ಜಾಗರಣೆ ಸಾಕ್ಷಾತ್ ಪರಶಿವನನ್ನೇ ಧರ್ಮ ಸಂಕಟಕ್ಕೀಡು ಮಾಡಿತ್ತು.

ಕೊನೆಗೂ ಮುಗುಳ್ನಕ್ಕ ಶಿವ ತಥಾಸ್ತು ಅಂದು ಬಿಟ್ಟ...

ಮರುದಿನ ಮಗಳು ಅದೇ ರೀತಿ ಓದೋಕಿದೆ ಅಂತ ಹೇಳಿ ಅದೇ ಗುಂಪಿನ ಜೊತೆ ಮತ್ತು ಹೊರಟಿದ್ದಳು. ಮತ್ತದೇ... ಹಾಳು ಮದ್ಯದ ಎರಡು ಗುಟುಕನ್ನೇರಿಸಿದ್ದಳು.... ಅಷ್ಟರಲ್ಲಿ... ಹಠಾತ್ತಾಗಿ ಆ ಪಬ್ಬಿನ ಮೇಲೆ ಪೋಲೀಸ್ ದಾಳಿಯಾಗಿತ್ತು. ಎಲ್ಲ ಹುಡುಗ ಹುಡುಗಿಯರು ಚೆಲ್ಲಾಪಿಲ್ಲಿಯಾಗಿ ಓಡತೊಡಗಿದಾಗ ಈಕೆಗೆ ತಲೆಗೇರಿದ್ದಾಗ ನಶಿ ಇಳಿದು ಹೋಗಿತ್ತು. ಎಲ್ಲರೂ ಅತ್ತಿತ್ತ ಓಡಾಡತೊಡಗಿದರು. ತಪ್ಪಿಸಿಕೊಳ್ಳೋ ಆಸೆ... ಅಷ್ಟರಲ್ಲಿ ಅದ್ಯಾರೋ ಈಕೆಯ ತೋಳನ್ನ ಹಿಡಿದು ದರದರನೆ ಹಿಂಬಾಗಿಲ ಕಡೆ ಕರೆದೊಯ್ದು..." ಬೇಗ ತಪ್ಪಿಸಿಕೋ... ಇನ್ನ್ಯಾವತ್ತೂ ನಿನ್ನ ತಾಯಿಗೆ ಮೋಸ ಮಾಡಬೇಡ... ನಿನ್ನ ಈ ರೂಪ ಕಂಡರೆ ಆಕೆಗೆ ಶಿವನ ಮೇಲಿನ ನಂಬಿಕೆ ಹೊರಟು ಹೋದೀತು..." ಎಂದವನೇ ಅವಳನ್ನ ಹೋಗಲು ಬಿಟ್ಟ ಒಬ್ಬ ಪೋಲೀಸ್ ಪೇದೆ... ಆತ ಯಾರು....? ಎಷ್ಟು ಯೋಚಿಸಿದರೂ ಆಕೆಗೆ ಏನು ಅರ್ಥವಾಗಲಿಲ್ಲ.... ಸಾವರಿಸಿಕೊಂಡು ಓಡತೊಡಗಿದಳು ಮೆಲ್ಲನೆ ಹಿಂದುರಿಗಿ ನೋಡಿದರೆ ಬೇರೆ ಇಬ್ಬರು ಪೋಲೀಸ್ ಪೇದೆಗಳು ಇವಳಟ್ಟಿಸಿ ಬರತೊಡಗಿದ್ದರು.... ಅಷ್ಟರಲ್ಲೇ ಅದೆಲ್ಲಿಂದಲೋ ಬಂದ ದೊಡ್ಡ 'ಬಸವ' ಆ ಪೋಲಿಸರ ಕಡೆ ದುರುಗುಟ್ಟಿಸಿ ಹೂಂಕರಿಸಿತು...

"ಲೋ.. ಒಬ್ಳೇ ತಾನೆ ಹೋಗ್ಲಿ ಬಿಡು... ಮೊದ್ಲು ಈ ಬಸವನಿಂದ ನಾವ್ ಬಚಾವಾಗೋಣ" ಅಂದವರೆ ಹಿಂದುರಿಗಿ ಓಡತೊಡಗಿದರು.

"ಏನಾಯಿತು..."


"ಏನಿಲ್ಲ ಅಮ್ಮಾ... ಹೆಚ್ಚಿನವರಿಗೆ ಗ್ರೂಪ್ ಸ್ಟಡಿ ಮಾಡೋಕೆ ಬರಲಾಗಲೇ ಇಲ್ಲ ಹಾಗಾಗಿ ನಾನು ವಾಪಾಸ್ ಬಂದೆ... ಬರಬೇಕಾದ್ರೆ ಬೀದಿ ನಾಯಿಯೊಂದು ಅಟ್ಟಿಸಿಕೊಂಡು ಬಂತು... ಅಷ್ಟೇ..." ಅಂದಳು.

"ಹೆದರಬೇಡ ನಮ್ಮೀ ನನ್ನ ಶಿವ ನಿನ್ನನ್ನು ಸದಾ ಕಾಪಾಡ್ತಾನೆ" ಎಂದು ಒಳಹೋದಳು.

ಆ ಘಟನೆ ನಮ್ಮೀಯಲ್ಲಿ ದೊಡ್ಡ ಬದಲಾವಣೆಯನ್ನ ತಂದಿತ್ತು....

ಈಗ ಪಾರ್ವತಕ್ಕನದು ಒಂದೇ ರಾಗ "ಒಳ್ಳೆ ಮಾರ್ಕ್ಸ್‌ನೇ ಬರ್ತದೆ... ಆದರೆ ಯಾಕೋ ನನ್ನ ನಮ್ಮೀ ಗ್ರೂಪ್ ಸ್ಟಡೀಸ್ ಗೇ ಹೋಗೋದಿಲ್ಲ..." ಅಂತ

# ವಿದ್ವಾನ್ ಮೈಸೂರು ವಾಸುದೇವಾಚಾರ್ಯರು (ವಾಗ್ಗೇಯಕಾರರು)



1865 ನೇ ಇಸವಿ ಮೇ ತಿಂಗಳ 25ನೇ ದಿನಾಂಕ ಅಂದರೆ ಜೇಷ್ಠ ಶುದ್ಧ ಚೌತಿಯಂದು ಸುಬ್ರಮಣ್ಯಾಚಾರ್ಯ ಮತ್ತು ಪುಷ್ಪಾಬಾಯಿಯವರ ಸುಪುತ್ರರಾಗಿ ಜನಿಸಿದರು.

ಸುಬ್ರಮಣ್ಯಾಚಾರ್ಯರು ವೇದಾಧ್ಯಯನ ಸಂಪನ್ನರು ಹಾಗೂ ಪೌರಾಣಿಕ ಶ್ರೇಷ್ಠರು. ಚಿಕ್ಕ ವಯಸ್ಸಿನಲ್ಲಿಯೇ ವಾಸುದೇವಾಚಾರ್ಯರು ತಂದೆಯನ್ನು ಕಳೆದುಕೊಂಡು ತಾಯಿಯ ತಂದೆಯುವರಾದ ಗೋಪಾಲಾಚಾರ್ಯರಲ್ಲಿ ಆಶ್ರಯ ಪಡೆಯಬೇಕಾಯಿತು. ವಂಶಪಾರಂಪರ್ಯರಾಗಿ ಬಂದಿದ್ದ ಸಂಸ್ಕೃತ ವ್ಯಾಸಂಗಕ್ಕಾಗಿ ತಿರುಮಲಾಚಾರ್ಯರಲ್ಲಿ ಶಿಷ್ಯತ್ವ ಪಡೆಯಬೇಕಾಯಿತು. ಹೆಚ್ಚಿನ ಸಂಸ್ಕೃತ ವ್ಯಾಸಂಗಕ್ಕಾಗಿ ಮೈಸೂರು ಸೇರಿದರೂ ಇವರ ಒಲವು ಸಂಗೀತದ ಕಡೆಗೆ ಹೆಚ್ಚಾಗಿದ್ದಿತು. ಆದರೆ ಆಗಿನ ಸಂದರ್ಭದಲ್ಲಿ ಸಂಗೀತ ಮತ್ತು ನಾಟಕ ಇಂಥ ಕಲೆಗಳು ಗೌರವಸ್ಥ ಮನೆತನದವರು ಕಲಿಯಬಾರದೆಂದಿತ್ತು. ಇವರ ಸಂಗೀತ ಸಾಧನೆಗೆ, ಕಲಿಕೆಗೆ ಅಪರೋಕ್ಷವಾಗಿ ಸೋದರಮಾವ ಪದ್ಮನಾಭಾಚಾರ್ಯರ ಬೆಂಬಲ ದೊರೆಯಿತು. ಆದರೆ ಇವರು ಗುಟ್ಟಾಗಿಟ್ಟಿದ್ದ ಸಂಗೀತ ಕಲಿಕೆಯ ವಿಷಯ ತಾತನವರಿಗೆ ಗೊತ್ತಾಗಿ ಅದು ಮೊಟಕುಗೊಳ್ಳುವ ಸಂದರ್ಭ ಒದಗಿ ಬಂದಿತ್ತು.

ಆಗಿನ ಸಂಸ್ಕೃತ ಪಾಠಶಾಲೆಯ ಕಲಿಕೆಯಲ್ಲಿ ವಿದ್ಯಾರ್ಥಿಗಳು ತಾವೇ ವಿಷಯಗಳನ್ನು ಆಯುವಂತಿರಲಿಲ್ಲ. ಒಂದು ಚೀಟಿಯಲ್ಲಿ ವಿಷಯಗಳನ್ನು ಬರೆದು ಅದನ್ನು ದೇವರ ಮುಂದೆ ಇಟ್ಟು ಪ್ರತಿಯೊಂದು ವಿದ್ಯಾರ್ಥಿಯ ಹೆಸರು ಹೇಳಿ ಒಂದು ಚಿಕ್ಕ ಮಗುವಿನ ಕೈಯಲ್ಲಿ ಆ ಚೀಟಿ ಎತ್ತಿಸುತ್ತಿದ್ದರು. ಆ ಚೀಟಿಯಲ್ಲಿ ಬಂದ ವಿಷಯದ ಬಗ್ಗೆ ಆ ವಿದ್ಯಾರ್ಥಿ ವ್ಯಾಸಂಗ ಮಾಡಬೇಕಿತ್ತು. ಇದು ಅನೂಚಾನವಾಗಿ ನಡೆದು ಬಂದಿತ್ತು. ವಾಸುದೇವಾಚಾರ್ಯರ ಹೆಸರಿನಲ್ಲಿ ಎತ್ತಿದ ಚೀಟಿಯಲ್ಲಿ 'ಸಂಗೀತ ಮತ್ತು ಸಾಹಿತ್ಯ' ವೆಂದು ಬಂದಿತ್ತು. ದೈವ ವಾಸುದೇವಾಚಾರ್ಯರ ಅಭೀಷ್ಟ ಈಡೇರಿಸಿತ್ತು. ಪಾಠ ಶಾಲೆಯಲ್ಲಿಯೇ ಇದ್ದ ಸಂಗೀತದ ಗುರುಗಳಾದ ವೀಣಾ ಪದ್ಮನಾಭಯ್ಯನವರಲ್ಲಿ ಸಂಗೀತ ಶಿಕ್ಷಣ ಮುಂದುವರೆಯಿತು. ಹೀಗೆ ವಾಸುದೇವಾಚಾರ್ಯರು ಕ್ರಮಬದ್ಧ ಸಂಗೀತ ಶಿಕ್ಷಣ ಪಡೆದವರಾಗಿ ಮೈಸೂರಿನ ಆಸ್ಥಾನದಲ್ಲಿ ವಿದ್ವಾಂಸರಾಗಿ ನೇಮಿಸಲ್ಪಟ್ಟರು.

ಸಾಹಿತ್ಯ –ಸಂಗೀತ ಇವೆರಡರಲ್ಲೂ ಅಪೂರ್ವ ಸಾಧನೆಗೈದಿದ್ದ ಇವರು ಪ್ರಖ್ಯಾತ ವಾಗ್ಗೇಯಕಾರರಾದರು. ಅನೇಕ ಕೃತಿಗಳನ್ನು ತೆಲುಗು–ಸಂಸ್ಕೃತದಲ್ಲಿ ರಚಿಸಿ ಪ್ರಖ್ಯಾತರಾದರು. ತೆಲುಗು ಮತ್ತು ಸಂಸ್ಕೃತದಲ್ಲಿ ಹೆಚ್ಚಿನ ಪರಿಣತಿ ಪಡೆದಿರುವ ಇವರಿಂದ ರಚಿತವಾದ ಕನ್ನಡ ಕೃತಿಗಳು ಅತಿ ವಿರಳ.

'ವಾಸುದೇವ ಕೃತಿ ಮಂಜರಿ'– ಭಾಗ 1 ಮತ್ತು ಭಾಗ 2, ಮೈಸೂರು ಸದಾಶಿವರಾಯರ ಕೃತಿಗಳು, ಪಟ್ಟಣಂ ಸುಬ್ರಮಣ್ಯ ಅಯ್ಯರ್, ವಾಲ್ಮೀಕಿ ರಾಮಾಯಣ ಮುಂತಾದ ಕೃತಿಗಳ ಕರ್ತೃ ಇವರಾಗಿದ್ದಾರೆ.

1961 ನೇ ಇಸವಿ ಮೇ ತಿಂಗಳ ದಿನಾಂಕ 17 ರಂದು ದೈವಾಧೀನರಾದರು.

## ಕರ್ನಾಟಕ ಸಂಘದಲ್ಲಿ ಪ್ರಶಸ್ತಿ ಪುರಸ್ಕೃತ ಮಕ್ಕಳ ಚಲನಚಿತ್ರೋತ್ಸವ

ಮಕ್ಕಳಿಗೆ - ಹೆತ್ತವರಿಗೆ ಮಾರ್ಗದರ್ಶನ ಸಿಗುವಂತಹ ನಾಟಕಗಳು, ಸಿನಿಮಾಗಳು ಇಂದು ಬಹಳ ಅಗತ್ಯವಿದೆ. ಸಮಾಜದಲ್ಲಿಂದು ದುಷ್ಕೃತ್ಯಗಳು ಹೆಚ್ಚುತ್ತಿವೆ. ಸಮಾಜದಲ್ಲಿ ಸತ್ಪ್ರಜೆ ಆಗುವಂತೆ ಮಕ್ಕಳನ್ನು ರೂಪಿಸಬೇಕು. ನಮ್ಮ ಚಲನ ಚಿತ್ರಗಳಲ್ಲಿ ಸಂದೇಶ ಇರಬೇಕು. ಆ ಮೂಲಕ ಮಕ್ಕಳು ಯುವಜನಾಂಗಕ್ಕೆ ಒರೆ ಹಚ್ಚುವ ಕೆಲಸವನ್ನು ಸಿ. ಲಕ್ಷ್ಮಣ ಅವರ ಈ ಚಲನಚಿತ್ರಗಳು ಮಾಡುತ್ತವೆ ಎಂದು ಕರ್ನಾಟಕ ವಿಧಾನ ಸಭೆಯ ಮಾಜಿ ಸಚಿವರು, ವಿಧಾನ ಪರಿಷತ್ ಸದಸ್ಯರಾದ ಶ್ರೀಮತಿ ಮೋಟಮ್ಮ ಹೇಳಿದರು.

ಸುವರ್ಣ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಕರ್ನಾಟಕ ಸಂಘ ಮುಂಬಯಿ ಮತ್ತು ವಾರ್ತಾ ಇಲಾಖೆ, ಕರ್ನಾಟಕ ಸರಕಾರ ಸಂಯುಕ್ತವಾಗಿ ವಿಶ್ವೇಶ್ವರಯ್ಯ ಸಭಾಗೃಹದಲ್ಲಿ ಮೂರು ದಿನಗಳ ಕಾಲ ಹಮ್ಮಿಕೊಂಡ ರಾಷ್ಟ್ರಪ್ರಶಸ್ತಿ ಪುರಸ್ಕೃತ ಶಿಕ್ಷಕ, ಹೆಸರಾಂತ ರಂಗಕರ್ಮಿ ಸಿ. ಲಕ್ಷ್ಮಣ ನಿರ್ದೇಶನದ ಪ್ರಶಸ್ತಿ ಪುರಸ್ಕೃತ ಮಕ್ಕಳ ಚಲನಚಿತ್ರೋತ್ಸವವನ್ನು ದಿನಾಂಕ 24-09-2014 ರಂದು ಸಂಜೆ ದೀಪ ಬೆಳಗಿಸಿ ಉದ್ಘಾಟಿಸಿ ಅವರು ಮಾತನಾಡಿದರು.

ಮುಂಬಯಿಯಲ್ಲಿ ಕನ್ನಡದ ಕಹಳೆಯನ್ನು ಎಲ್ಲಾ ರೀತಿಯಲ್ಲಿ ಕೇಳುವ ಹಾಗೆ ಕರ್ನಾಟಕ ಸಂಘ ಮುಂಬಯಿ ಪ್ರಶಸ್ತಿ ಪುರಸ್ಕೃತ ಮಕ್ಕಳ ಚಲನಚಿತ್ರೋತ್ಸವವನ್ನು ಹಮ್ಮಿಕೊಂಡಿರುವುದು ಅಭಿಮಾನ ಪಡಬೇಕು. ಕುವೆಂಪು ಸಂದೇಶ ಯಾವ ರೀತಿ ಸಮಾಜಕ್ಕೆ ತಲುಪಿಸಿದ್ದಾರೆ ಎನ್ನುವುದಕ್ಕೆ ಸಿ. ಲಕ್ಷ್ಮಣ ಅವರ 'ನನ್ನ ಗೋಪಾಲ' ಸಾಕ್ಷಿ. ಒಬ್ಬ ಒಳ್ಳೆಯ ಶಿಕ್ಷಕರಾಗಿರುವ ಲಕ್ಷ್ಮಣ ಅಂತಹ ಶಿಕ್ಷಕರ ಅಗತ್ಯ ಇಂದು ಹೆಚ್ಚಿದೆ. ಅವರ 'ಮಸಣದ ಮಕ್ಕಳು' ಚಿತ್ರದಲ್ಲಿ ನಾನೂ ಅಭಿನಯಿಸಿದ್ದೇನೆ ಎಂದು ಅಲ್ಲಿನ ನೆನಪುಗಳನ್ನು ತೆರೆದಿಟ್ಟ ಶ್ರೀಮತಿ ಮೋಟಮ್ಮ ಕೌಟುಂಬಿಕ ಸಂಬಂಧಗಳನ್ನು ಹೆಚ್ಚಿಸಿಕೊಳ್ಳಲು, ಅರ್ಥಮಾಡಿಕೊಳ್ಳಲು ನಾವು ಸಂದೇಶವಿರುವ ಸಿನಿಮಾಗಳನ್ನು ವೀಕ್ಷಿಸಬೇಕು. ಇಂದಿನ ನಮ್ಮ ಅನೇಕ ಚಲನಚಿತ್ರಗಳ ಹಾಡುಗಳಲ್ಲೂ ನಾವು ಸಂದೇಶಗಳು ನಾಪತ್ತೆಯಾಗುತ್ತಿವೆ. ಇಂದಿನ ಹಾಡುಗಳು ಈಗಲೂ ನಮ್ಮನ್ನು ಕಾಡುತ್ತಿರುವುದಕ್ಕೆ ಅಲ್ಲಿನ ಉತ್ತಮ ಸಾಹಿತ್ಯವೇ ಕಾರಣ. ಅದರಲ್ಲಿ ಸಮಾಜಕ್ಕೆ ಸಂದೇಶ ಇದೆ. ಅಂತಹ ಸಂದೇಶ ಸಿ. ಲಕ್ಷ್ಮಣ ಅವರ ಚಲನಚಿತ್ರಗಳಲ್ಲಿ ನಾವು ಕಾಣುತ್ತೇವೆ ಎಂದರು.

ರಾಷ್ಟ್ರ ಪ್ರಶಸ್ತಿ ಪುರಸ್ಕೃತ ಶಿಕ್ಷಕ, ಹೆಸರಾಂತ ರಂಗಕರ್ಮಿ, ಚಲನಚಿತ್ರ ನಿರ್ದೇಶಕ, ಸಿ. ಲಕ್ಷ್ಮಣ ಅವರು ಮಾತನಾಡುತ್ತಾ ಒಂದರಿಂದ ಐದನೇ ತರಗತಿ ತನಕದ ಮಕ್ಕಳಿಗೆ ಶಿಕ್ಷಕ ಆಗುವುದು ನನ್ನ ಕನಸು. ಮಗು ಕೇಳುವ ಪ್ರಶ್ನೆಗಳಿಗೆ ಜಗತ್ತು ಇದೆ. ಶಿಕ್ಷಕ ಇಲ್ಲಿ ತನ್ನನ್ನು ವಿಶೇಷವಾಗಿ ತೊಡಗಿಸಿಕೊಳ್ಳಬೇಕು. ತನಗೆ ಇಷ್ಟೆಲ್ಲ ಪ್ರಶಸ್ತಿ ಸಿಕ್ಕಿದ್ದು ಮಕ್ಕಳಿಂದ, ಮಕ್ಕಳ ಸೇವೆಯಿಂದ ಎಂದು ಕೃತಜ್ಞತೆ ತಿಳಿಸಿದರು. ಇದೇ ಸಂದರ್ಭದಲ್ಲಿ ಅವರು ಒಬ್ಬೊಬ್ಬ ಶಿಕ್ಷಕರು ಒಂದು ಮಗುವನ್ನಾದರೂ ದತ್ತು ತೆಗೆದುಕೊಳ್ಳಿ ವರ್ಷಕ್ಕೆ ಒಂದರಂತೆ. ತಾನು 16 ಮಕ್ಕಳನ್ನು ದತ್ತು ತೆಗೆದುಕೊಂಡೆ. ಇಂದು ಅವರೆಲ್ಲ ಒಂದೊಂದು ಒಳ್ಳೆಯ ಕೆಲಸದಲ್ಲಿದ್ದಾರೆ. ಹಿರಿಯರು ಮಕ್ಕಳ ಆಸೆಗಳನ್ನು ಮೊಟಕುಗೊಳಿಸಬೇಡಿ. ಅವರಿಗೆ ರಂಗಭೂಮಿಯಲ್ಲಿ ಆಸಕ್ತಿ ಇದ್ದರೆ ಅದಕ್ಕೂ ಅವಕಾಶ ಕಲ್ಪಿಸಿ ಎಂದು ವಿನಂತಿಸಿದರು.

ಅಧ್ಯಕ್ಷತೆ ವಹಿಸಿದ್ದ ಸಂಘದ ಅಧ್ಯಕ್ಷ ಪ್ರಕಾಶ್ ಬುರ್ಡೆಯವರು ಮಾತನಾಡುತ್ತಾ, ದೇಶಕ್ಕೆ ಶ್ರೀ ರಾಮ, ಕರ್ನಾಟಕದಲ್ಲಿ ಸಿ. ಲಕ್ಷ್ಮಣ ಸುದ್ದಿಯಾಗುತ್ತಾರೆ. ಇಂದು ಜಾಗತೀಕರಣದಲ್ಲಿ ಹಳ್ಳಿಗಳು ನಗರಗಳಾಗುತ್ತಿವೆ. ಇಂತಹ ಸ್ಥಿತಿಯಲ್ಲಿ ಸಿ. ಲಕ್ಷ್ಮಣರ ಚಲನಚಿತ್ರಗಳು ನಮಗೆ ಮತ್ತೆ ಹಳ್ಳಿಯ ಆ ಸುಂದರ ದೃಶ್ಯಗಳನ್ನು ನೆನಪಿಸಿಕೊಡುತ್ತದೆ ಎಂದರು.

ಕಾರ್ಯಕ್ರಮವನ್ನು ರಂಗ ನಿರ್ದೇಶಕ ಡಾ. ಭರತ್ ಕುಮಾರ್ ಪೊಲಿಪು ನಿರೂಪಿಸಿ, ವಂದಿಸಿದರು. ಅತಿಥಿಗಳನ್ನು ಸಂಘದ ಉಪಾಧ್ಯಕ್ಷ ಶ್ರೀನಿವಾಸ ಜೋಕಟ್ಟೆ ಮತ್ತು ಕವಯಿತ್ರಿ ಅನಿತಾ ಪಿ. ಪೂಜಾರಿ ತಾಕೊಡೆ ಪರಿಚಯಿಸಿದರು. ಸಂಘದ ಗೌ. ಕಾರ್ಯದರ್ಶಿ ಓಂದಾಸ್ ಕಣ್ಣಂಗಾರ್ ಸ್ವಾಗತ ಪ್ರಸ್ತಾವನೆ ನುಡಿಗಳನ್ನಾಡಿದರು. ಕೋಶಾಧಿಕಾರಿ ಎನ್.ಎಂ. ಗುಡಿ ಮತ್ತು ಸಂಘದ ಪದಾಧಿಕಾರಿಗಳು ಅತಿಥಿಗಳನ್ನು ಗೌರವಿಸಿದರು.

ಇದೇ ವೇದಿಕೆಯಲ್ಲಿ 'ಕಾರಣಿಕದ ಶಿಶು' ಕೃತಿಯನ್ನು ಮೋಟಮ್ಮ ಬಿಡುಗಡೆಗೊಳಿಸಿದರು. ಅನಂತರ ಸಿ. ಲಕ್ಷ್ಮಣ ನಿರ್ದೇಶನಕ 'ಕಾರಣಿಕ ಶಿಶು' ಚಲನಚಿತ್ರ ಪ್ರದರ್ಶನಗೊಂಡಿತು.

### ಮುಂಬಯಿ ಕನ್ನಡ ಸಂಘದ ನೂತನ ಕಾರ್ಯಕಾರಿ ಸಮಿತಿ

## ಅಧ್ಯಕ್ಷರಾಗಿ ಗುರುರಾಜ್ ಎಸ್. ನಾಯಕ್ ಪುನರಾಯ್ಕೆ

ಮುಂಬಯಿ ಮಾಟುಂಗ (ಪೂ)ದ ಮುಂಬಯಿ ಕನ್ನಡ ಸಂಘದ ವಾರ್ಷಿಕ ಮಹಾಸಭೆಯು ತಾ.06-09-2014ರಂದು ಸಂಜೆ ಸಂಘದ ಕಾರ್ಯಾಲಯದಲ್ಲಿ ಅಧ್ಯಕ್ಷ ಗುರುರಾಜ್ ಎಸ್. ನಾಯಕ್‌ರವರ ಅಧ್ಯಕ್ಷತೆಯಲ್ಲಿ ನಡೆಯಿತು. ಈ ಮಹಾಸಭೆಯಲ್ಲಿ ಕಳೆದ ವಾರ್ಷಿಕ ಮಹಾಸಭೆಯ ವರದಿ 2013-14ನೇ ಸಾಲಿನ ವರ್ಷದ ವರದಿ ಮತ್ತು ಲೆಕ್ಕಪತ್ರಗಳನ್ನು ಸರ್ವಾನುಮತದಿಂದ ಮಂಜೂರು ಮಾಡಲಾಯಿತು.

2014-15ನೇಯ ಸಾಲಿಗೆ ಎಂ.ಎಂ. ಕಿಸ್ತಿ C.A ಮತ್ತು ಕಂಪೆನಿ ಇವರನ್ನು ಲೆಕ್ಕ ಪರಿಶೋಧಕರಾಗಿ ನೇಮಿಸಲಾಯಿತು. ನಂತರ 2014-15ಮತ್ತು 2015-16 ನೇ ಸಾಲಿಗೆ ಅಂದರೆ ಎರಡು ವರ್ಷದ ಅವಧಿಗೆ ಕಾರ್ಯಕಾರಿ ಸಮಿತಿಯನ್ನು ರಚಿಸಲಾಯಿತು.

ಅಧ್ಯಕ್ಷರಾಗಿ ಗುರುರಾಜ್ ಎಸ್. ನಾಯಕ್‌ರವರನ್ನು ಪುನರಾಯ್ಕೆ ಮಾಡಲಾಯಿತು. ಇವರು ಸಂಘದಲ್ಲಿ ಕಳೆದ 40 ವರ್ಷಗಳಿಂದ ವಿವಿಧ ಪದಾಧಿಕಾರಿಯಾಗಿ, ಅಧ್ಯಕ್ಷರಾಗಿ ಸೇವೆ ಸಲ್ಲಿಸಿ ಸಂಘದ ಅಭಿವೃದ್ಧಿಗಾಗಿ ಶ್ರಮಿಸಿರುತ್ತಾರೆ. ಅವರು ಸಂಘದ ಸುವರ್ಣ ಮಹೋತ್ಸವ, ವಜ್ರಮಹೋತ್ಸವ ಮತ್ತು ಅಮೃತ ಮಹೋತ್ಸವ ಆಚರಣಾ ಸಮಿತಿಯಲ್ಲಿ ಕೆಲಸ ಮಾಡಿ ಹೆಚ್ಚು ಧನ ಸಂಗ್ರಹ ಮಾಡಿ ಎಲ್ಲರ ಪ್ರೀತಿಗೆ ಪಾತ್ರರಾಗಿರುತ್ತಾರೆ. ಆದುದರಿಂದ ಎಲ್ಲರೂ ಅವರನ್ನು ಅವಿರೋಧವಾಗಿ ಆಯ್ಕೆ ಮಾಡಿದರು.

ಅದೇ ರೀತಿ ನುರಿತ ಅನುಭವವಿರುವ ಡಾ. ಎಸ್.ಕೆ. ಭವಾನಿಯವರನ್ನು ಉಪಾಧ್ಯಕ್ಷರಾಗಿ ಆಯ್ಕೆ ಮಾಡಲಾಯಿತು. ಗೌರವ ಪ್ರಧಾನ ಕಾರ್ಯದರ್ಶಿಯಾಗಿ ಸತೀಶ ಎನ್. ಬಂಗೇರ ಇವರನ್ನು ನೇಮಕಮಾಡಲಾಯಿತು.

ಈ ಹಿಂದೆ ಸಮಿತಿಯಲ್ಲಿ ಕೆಲಸ ಮಾಡಿ ಅನುಭವವಿರುವ ಸೋಮನಾಥ ಕರ್ಕೇರರವರನ್ನು ಗೌರವ ಜೊತೆ ಕಾರ್ಯದರ್ಶಿಯಾಗಿ ಆಯ್ಕೆ ಮಾಡಲಾಯಿತು. ಸಂಘದಲ್ಲಿ ಹಲವಾರು ವರ್ಷಗಳಿಂದ ಗೌರವ ಕೋಶಾಧಿಕಾರಿಯಾಗಿ ಕೆಲಸ ಮಾಡಿದ ರಾಜೇಂದ್ರ ಆರ್. ಗಡಿಯಾರ್‌ರವರನ್ನು ಗೌ.ಕೋಶಾಧಿಕಾರಿಯಾಗಿ ಪುನರಾಯ್ಕೆ ಮಾಡಲಾಯಿತು. ಗೌರವ ಪುಸ್ತಕ ಭಂಡಾರದ ಅಧಿಕಾರಿಯಾಗಿ ಶ್ರೀ ಎಸ್. ಕೆ. ಪದ್ಮನಾಭರವರನ್ನು, ಗ್ರಂಥಾಲಯ ಸಮಿತಿಯ ಕಾರ್ಯಾಧ್ಯಕ್ಷೆಯಾಗಿ ಶ್ರೀಮತಿ ಸಂಧ್ಯಾ ಎ. ಪ್ರಭು ಅವರನ್ನು ನೇಮಿಸಲಾಯಿತು. ಮಹಿಳಾವಿಭಾಗದ ಕಾರ್ಯಾಧ್ಯಕ್ಷೆಯಾಗಿ ಶ್ರೀಮತಿ ರಜನಿ ವಿ.ಪೈ, ಕಾರ್ಯದರ್ಶಿಯಾಗಿ ಸುಗುಣ ವಿ. ಶೆಟ್ಟಿಯವರನ್ನು, ಮಹಿಳಾ ವಿಭಾಗದ ಉಪಾಧ್ಯಕ್ಷೆಯಾಗಿ ಶ್ರೀಮತಿ ಲಕ್ಷ್ಮೀ ಸುಧೀಂದ್ರ ಅವರನ್ನು ನೇಮಿಸಲಾಯಿತು.

ಕಟ್ಟಡ ಸಮಿತಿ (ಕಿರು ಸಭಾಗೃಹ ಸಮಿತಿಯ)ಯ ಮುಖ್ಯಸ್ಥರಾಗಿ ಡಾ. ಎಸ್.ಕೆ. ಭವಾನಿಯವರನ್ನು ಆಯ್ಕೆ ಮಾಡಲಾಯಿತು. ಕಾರ್ಯಕಾರಿ ಸಮಿತಿಯ ಸದಸ್ಯರಾಗಿ ಎಚ್.ಎಸ್ ಅಡೂರ್, ಸುಧಾಕರ ಸಿ. ಪೂಜಾರಿ, ಬಾಬುರಾಯ ಎಮ್. ಪ್ರಭು, ಜಯಂತಿರಾವ್, ಶಿ. ಪಂಪಣ್ಣ ಆಯ್ಕೆಯಾದರು.

## MAHARASHTRA STATE ELECTIONS

Elections are due on 15th October. It is your duty as a citizen to vote on 15th October without fail. It is your only chance in 5 years. If you miss you have only yourselves to blame. Don't be watching movie, watch your future.

# ‘ಹೊರನಾಡಿನ ಮೂರು ಕರ್ನಾಟಕ ರಾಜ್ಯಗಳು’



✍ ಡಾ.ಮಮತಾ ರಾವ್

‘ಕಾವೇರಿಯಿಂದಮಾ ಗೋದಾವರಿವರಂ’ ಇದ್ದ ಕರ್ನಾಟಕ ರಾಜ್ಯದ ವಿಸ್ತಾರದ ಕುರಿತು ಎದೆಯುಬ್ಬಿಸುವ ಕನ್ನಡಿಗರಿಗೆ, ನೂರಾರು ವರ್ಷಗಳ ಹಿಂದಕ್ಕೆ ಕನ್ನಡಿಗರು ದೂರದ ಬಂಗಾಲ, ಬಿಹಾರ ಮತ್ತು ಹತ್ತಿರದಲ್ಲಿ ಗೋದಾವರಿಯಿಂದಾಚೆಗೆ ತಮಿಳ್ನಾಡಿನಲ್ಲಿಯೂ ರಾಜ್ಯಸ್ಥಾಪನೆ ಮಾಡಿ ರಾಜ್ಯವಾಳಿದ್ದರು ಎನ್ನುವುದನ್ನು ಕೇಳಿ ಆಶ್ಚರ್ಯವೆನಿಸಬಹುದು. ಆಗುಂಬೆ ಎಸ್. ನಟರಾಜ್ ಅವರ ‘ಹೊರನಾಡಿನ ಮೂರು ಕರ್ನಾಟಕ ರಾಜ್ಯಗಳು’ ಕೃತಿಯು ಈ ಕುರಿತು ಬಹಳ ಕುತೂಹಲಕರವಾದ ಐತಿಹಾಸಿಕ ವಿಷಯಗಳನ್ನು ವಿವರಿಸುತ್ತದೆ. ಕರ್ನಾಟಕ ರಾಜ್ಯದ ಸೀಮೆಯೊಳಗಿರುವ ಭೂಭಾಗಗಳಿಗಾಗಿ ನೆರೆರಾಜ್ಯಗಳು ಕಚ್ಚಾಡುತ್ತಿರುವ ಸಂದರ್ಭದಲ್ಲಿ ಒಂದೊಮ್ಮೆ ಕರ್ನಾಟಕದಿಂದ ಸಾವಿರಾರು ಮೈಲಿ ದೂರದಲ್ಲಿ ನೆಲೆಸಿದ್ದು, ಕನ್ನಡತನವನ್ನು ಮೆರೆದ ಸೌಹಾರ್ದಪೂರ್ಣ ರಾಜಮನೆತನಗಳ ಕುರಿತಾದ ಈ ಕೃತಿಯು ಬಹಳ ಮಹತ್ವವನ್ನು ಪಡೆಯುತ್ತದೆ.

ಆಗುಂಬೆ ಎಸ್. ನಟರಾಜ್ ಅವರು ವಾಣಿಜ್ಯ ಪದವೀಧರರು. ಕೆನರಾ ಬ್ಯಾಂಕಿನಲ್ಲಿ ಉದ್ಯೋಗಸ್ಥರಾಗಿದ್ದು, ದೇಶದ ಮೂಲೆಮೂಲೆಯಲ್ಲಿರುವ ಐತಿಹಾಸಿಕ ಸ್ಥಳಗಳನ್ನು ಸಂದರ್ಶಿಸಿ ಮಾಹಿತಿಗಳನ್ನು ಕಲೆಹಾಕುತ್ತಾ, ಅವುಗಳನ್ನು ಕೃತಿಮೂಲಕ ದಾಖಲಿಸುತ್ತಾ ಬಂದಿರುವ ಉತ್ಸಾಹಿ ಪ್ರವಾಸಿ. ಇವರಲ್ಲಿರುವ ಸಂಶೋಧನಾ ಪ್ರವೃತ್ತಿ, ಅನ್ವೇಷಕ ಬುದ್ಧಿ, ಅಪರಿಮಿತ ಕನ್ನಡಾಭಿಮಾನ ಅನೇಕ ವಿಶಿಷ್ಟ ಕೃತಿಗಳನ್ನು ಕನ್ನಡ ಸಾರಸ್ವತಲೋಕಕ್ಕೆ ಪರಿಚಯಿಸಿತು. ‘ಇದು ದಿಲ್ಲಿ, ಇದು ದೆಹಲಿ’, ‘ಯಾತ್ರಾವಳಿ’, ‘ಇದು ಕಾಶಿ, ಇದು ವಾರಣಾಸಿ’, ‘ಹೊರನಾಡಿನ ಮೂರು ಕರ್ನಾಟಕ ರಾಜ್ಯಗಳು’, ‘ರಾಷ್ಟ್ರೀಯತೆಯಿಂದ ಮತಾಂಧತೆಗೆ ಒಂದು ಪಯಣ’, ‘ದಿಲ್ಲಿಯಿಂದ ತಾಮ್ಡೀ ಸುರ್ಲಾಗೆ’, ‘ಖಜಥಿಣಟಚಿಡಿಘಟ: ಂ ಘಣಠಡಿಛಿಚಿಟ ಕಜಢಿಠಿಜಥಿಣುತಜ’, ಮುಂತಾದ ಕನ್ನಡದ ಸಂಶೋಧಕರ ಮೆಚ್ಚುಗೆ ಪಡೆದ ಕೃತಿಗಳೊಂದಿಗೆ, ಕಥಾಸಂಕಲನಗಳು, ಕಾದಂಬರಿ, ಜೀವನಚರಿತ್ರೆ, ಹನಿಗವನಗಳು ಹೀಗೆ ಸುಮಾರು ಇಪ್ಪತ್ತರಷ್ಟು ಪುಸ್ತಕಗಳನ್ನು ಪ್ರಕಟಿಸಿದ್ದಾರೆ.

ಆಗುಂಬೆ ಎಸ್. ನಟರಾಜರದ್ದು ವಸ್ತುನಿಷ್ಠವಾದ ಬರವಣಿಗೆ. ಪ್ರತಿಯೊಂದು ಸ್ಥಳಗಳಿಗೂ ಭಾಷೆ ತಿಳಿಯದಿದ್ದರೂ ಸ್ವತಃ ಹೋಗಿ ಕ್ಷೇತ್ರ ಸಂದರ್ಶನ ನಡೆಸಿ, ಸ್ಥಳೀಯ ಪುರಾಣ, ಸಾಹಿತ್ಯ ಹಾಗೂ ಶಾಸನಗಳ ಆಧಾರಗಳಿಂದ ಮಾಹಿತಿಗಳನ್ನು ಕಲೆಹಾಕಿ ಬಹಳ ಶ್ರದ್ಧೆಯಿಂದ ರಚಿಸಿದ ಕೃತಿ ‘ಹೊರನಾಡಿನ ಮೂರು ಕರ್ನಾಟಕ ರಾಜ್ಯಗಳು’. 1097ರಿಂದ 1324ರ ವರೆಗಿನ ಕಾಲಖಂಡದಲ್ಲಿ ನಾನ್ಯದೇವನಿಂದ ಆರಂಬಿಸಿ ಹರಿಸಿಂಹದೇವನವರೆಗೆ ಎಂಟು ರಾಜರುಗಳು ಸೀತೆಯ ತವರಾದ ಮಿಥಿಲಾ ಪ್ರದೇಶ, ನೇಪಾಳದ ಕೆಳಭಾಗದಲ್ಲಿ; ಹಾಗೂ ಉತ್ತರ ಬಂಗಾಲದಲ್ಲಿ ಮತ್ತು ತಮಿಳ್ನಾಡಿನಲ್ಲಿ ರಾಜ್ಯಭಾರ ಮಾಡಿದ ಕನ್ನಡ ರಾಜರುಗಳ ಚರಿತ್ರೆ, ಅವರ ಆಡಳಿತ ವ್ಯವಸ್ಥೆ ಇತ್ಯಾದಿಗಳ ವಿವರಣೆ ಇಲ್ಲಿದೆ.

ಪ್ರಸಿದ್ಧ ಪಟ್ಟದಕಲ್ಲಿನ ಶಾಸನದ ಪ್ರಕಾರ ಚಾಲುಕ್ಯ ಚಕ್ರವರ್ತಿ ಸೋಮೇಶ್ವರ(ಕ್ರಿ.ಶ.1060–1069)ಹಾಗೂ ಅವನ ಮಗ ವಿಕ್ರಮಾದಿತ್ಯ(ಕ್ರಿ.ಶ. 1076–1126) ಇವರಿಬ್ಬರೂ ಉತ್ತರಭಾರತದಲ್ಲಿ ನೇಪಾಳದ ವರೆಗೆ ದಿಗ್ವಿಜಯವನ್ನು ಸಾಧಿಸಿದರು. ಇದೇ ಸಮಯದಲ್ಲಿ ಕರ್ನಾಟಕದ ಮೂರು ವಂಶಗಳು ಕನ್ನೋಜಿನ ಗಹಡಪಾಲರು, ಬಂಗಾಳದ ಸೇನರು ಹಾಗೂ ಮಿಥಿಲೆಯ ಸಿಂಹರು ಅಲ್ಲಿಯೇ ಸ್ಥಾಪಿತಗೊಂಡು ಕನ್ನಡರಾಜ್ಯಭಾರವನ್ನು ನಡೆಸಿದರು. ತಮ್ಮದು ‘ಕರ್ನಾಟಕ ವಂಶ’ವೆಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತಿದ್ದ ನಾನ್ಯದೇವನು ಮಿಥಿಲೆಯನ್ನು ಕ್ರಿ.ಶ.1097–1147ವರೆಗೆ ಆಳಿದ್ದ. ಭರತಮುನಿಯ ನಾಟ್ಯಶಾಸ್ತ್ರದ ಮೇಲೆ ಭಾಷ್ಯ(ಕ್ರಿ.ಶ.1097)ಬರೆದ ನಾನ್ಯದೇವನು ಸ್ವತಃ ವಿದ್ವಾಂಸನಾಗಿದ್ದು ಲಲಿತಕಲೆ, ಸಾಹಿತ್ಯಕ್ಕೆ ಅಪಾರ ಪ್ರೋತ್ಸಾಹವನ್ನು ನೀಡಿದ್ದನು. ಸಂಸ್ಕೃತದೊಂದಿಗೆ ಸ್ಥಳೀಯ ಭಾಷೆಯಾದ ಮೈಥಿಲಿಯ ಬೆಳವಣಿಗೆಗೂ ಕಾರಣೀಭೂತನಾದ. ಇವರ ಕಾಲದಲ್ಲಿ ಬರೆಯಲ್ಪಟ್ಟ ಕವಿ ರತ್ನಾಕರನ ‘ವರ್ಣನ್ ರತ್ನಾಕರ’ ಗ್ರಂಥವು ಮೈಥಿಲಿಭಾಷೆಯ ಪ್ರಥಮ ಗದ್ಯ ಎಂದು ಪ್ರಸಿದ್ಧಿಯನ್ನು ಪಡೆದಿದೆ. ‘ಧೂರ್ತ ಸಮಾಗಮ’ ಎಂಬ ನಾಟಕವೂ ಈ ಕಾಲದಲ್ಲಿ ಬರೆಯಲ್ಪಟ್ಟಿತು. ಕರ್ನಾಟಕದ ರಾಜಾಶ್ರಯದಲ್ಲಿ ಮೈಥಿಲಿಭಾಷೆಯು ಸರ್ವತೋಮುಖವಾಗಿ ಬೆಳೆದು ಉತ್ತರಭಾರತದ ಇತರಭಾಷೆಗಳಿಗಿಂತ ಹೆಚ್ಚು ಪ್ರಾಮುಖ್ಯತೆಯನ್ನು ಪಡೆಯಿತು. ಸುತ್ತುಮುತ್ತಲೆಲ್ಲಾ ಮುಸ್ಲಿಂರ ಸಾಮ್ರಾಜ್ಯವಿದ್ದರೂ ಮಿಥಿಲೆಯನ್ನು, ಮೈಥಿಲಿಯನ್ನು ಕಾಪಾಡಿದ ಶ್ರೇಯಸ್ಸು ಕರ್ನಾಟಕ ವಂಶದ ರಾಜರದ್ದು. ಮಿಥಿಲೆಯ ರಾಜಧಾನಿಯು ಇಂದಿಗೂ ಕನ್ನಡದ ‘ನ’ ಪ್ರತ್ಯಯವನ್ನು ಉಳಿಸಿಕೊಂಡು ‘ಸಿಂಹರಾಯನಗಢ’ ಎಂದು ಗುರುತಿಸಿಕೊಳ್ಳುತ್ತದೆ. 10ನೇ ಶತಮಾನದಲ್ಲಿ ದೇಶದಲ್ಲೆಲ್ಲಾ ಪರಕೀಯರ ದಾಳಿಯಿಂದ ಅರಾಜಕತೆ ಉಂಟಾಗಿದ್ದ ಸಮಯ ಕರ್ನಾಟಕದ ವಂಶವೊಂದು ಉತ್ತರಭಾರತದಲ್ಲಿ ಕರ್ನಾಟಕದ ಧ್ವಜವನ್ನು ಹಾರಿಸಿ 225 ವರ್ಷಕಾಲ ರಾಜ್ಯಭಾರ ಮಾಡಿದ್ದು ಕನ್ನಡಿಗರಿಗೆಲ್ಲರಿಗೂ ಅಭಿಮಾನ ಹುಟ್ಟಿಸುವ ಸಂಗತಿ.

ಮೊದಲನೆಯ ರಾಜನಾದ ನಾನ್ಯದೇವನಿಂದ ಹಿಡಿದು ಕೊನೆಯರಾಜ ಹರಿಸಿಂಹದೇವನವರೆಗೂ ಈ ವಂಶದವರಿಗೆ ಹೆಮ್ಮೆಯಿಂದ, ‘ಕರ್ನಾಟಕ ಕುಲಭೂಷಣ’, ‘ಕರ್ನಾಟಕ ಕುಲಶ್ರೇಷ್ಠ’, ‘ಕರ್ನಾಟಕ ಕುಲಚೂಡಾಮಣಿ’, ‘ಕರ್ನಾಟಕ ಕುಲಸಂಭವ’, ‘ಕರ್ನಾಟಕ ವಂಶೋದ್ಭವ’, ‘ಕರ್ನಾಟಕಾಧಿಪ’, ‘ಕರ್ನಾಟಕ ಕುಲಲಕ್ಷ್ಮೀ’ ಎಂದೇ ಇತಿಹಾಸಕಾರರು, ಸಾಹಿತಿಗಳು, ಶಾಸನಗಳು, ಸ್ಥಳೀಯ ಜನರು ಗುರುತಿಸಿದ್ದು, ಇಂದಿಗೂ ‘ಕರ್ನಾಟಕ’ಪದವು ಉತ್ತರಭಾರತದಲ್ಲಿ ಶಾಶ್ವತವಾಗಿ ಉಳಿಯುವಂತಾದದ್ದು ನಿಜಕ್ಕೂ ನಾವೆಲ್ಲರೂ ಹೆಮ್ಮೆ ಪಡಬೇಕಾದ ಸಂಗತಿ.

ದೇವಪಾರಾ ಶಾಸನ, ಬ್ಯಾರಕ್ ಪುರ್ ಹಾಗೂ ಮಾಧೈನಗರ್ ತಾಮ್ರಶಾಸನಗಳ ಪುರಾವೆಗಳ ಪ್ರಕಾರ ಬಂಗಾಲದಲ್ಲಿ ಕರ್ನಾಟಕ ರಾಜರ ರಾಜಾಡಳಿತ 150 ವರ್ಷಗಳವರೆಗಿತ್ತು ಎನ್ನುವುದು ತಿಳಿದು ಬರುತ್ತದೆ. ಮಿಥಿಲೆಯ ನಾನ್ಯದೇವನ ಸಮಕಾಲೀನನಾದ ವಿಜಯಸೇನ ಇಡಿಯ ಬಂಗಾಲವನ್ನು ಜಯಿಸಿದ ವೀರರಾಜ. ದೇವಪಾರದಲ್ಲಿ ದೊರೆತ ಶಿಲಾಶಾಸನವು ನಿಜಾರ್ಥದಲ್ಲಿ ಕವಿ ಉಮಾಪತಿಧಾರ ಬರೆದ ಸುಂದರ ಕಾವ್ಯವಾಗಿದೆ. ಬಂಗಾಳದ ಜನತೆಗೆ ಕರ್ನಾಟಕದ ಸೇನರ ಕುರಿತಾದ ಪ್ರೀತಿ ವಿಶ್ವಾಸಗಳು ಈ ಶಾಸನದಲ್ಲಿ ಅಭಿವ್ಯಕ್ತಿಗೊಂಡಿದೆ. ಬಂಗಾಳದ ನವದ್ವೀಪದ ಸಮೀಪ ಸೇನ ರಾಜರ ರಾಜಧಾನಿಯ ಅವಶೇಷಗಳಾಗಿ ಉಳಿದ ದಿಬ್ಬವನ್ನು ಇಂದಿಗೂ ‘ಬಲ್ಲಾಳ ದಿಬ್ಬ’ ಎಂಬ ಅಚ್ಚಗನ್ನಡದ ಹೆಸರಿನಲ್ಲಿ ಗುರುತಿಸಲಾಗುತ್ತದೆ. ವಿಜಯಸೇನನ ನಂತರ ಆತನ ಮಗ ಬಲ್ಲಾಳ ಸೇನ ಹಾಗೂ ಅವನ ಮಗ ಲಕ್ಷ್ಮಣಸೇನ ಇಲ್ಲಿ ರಾಜ್ಯವಾಳಿದರು. ಲಕ್ಷ್ಮಣಸೇನನ(ಕ್ರಿ.ಶ.1179–1205)ಕಾಲದ ಎಂಟು ಶಾಸನಗಳು ಲಭ್ಯವಿದೆ. ಆತನ ಆಸ್ಥಾನಕವಿಯಾಗಿದ್ದ ಕವಿ ಜಯದೇವನು ‘ಗೀತಾಗೋವಿಂದ’ ಎಂಬ ಸುಪ್ರಸಿದ್ಧ ಸಂಸ್ಕೃತ ಕಾವ್ಯವನ್ನು ರಚಿಸಿದನು. ಲಕ್ಷ್ಮಣಸೇನ ಸಂವತ್ಸರವೆಂದೇ ಕರೆಯಲ್ಪಡುವ ಸಂವತ್ಸರವು ಈತನ ಕಾಲದಲ್ಲಾಯಿತು ಎನ್ನಲಾಗುತ್ತದೆ. ಕರ್ನಾಟಕ ವಂಶದ ರಾಜನಾದ ಲಕ್ಷ್ಮಣಸೇನನ ಹೆಸರಿನಲ್ಲಿ ಕರ್ನಾಟಕದಿಂದ ದೂರ ಉತ್ತರಭಾರತದಲ್ಲಿ ಒಂದು ಸಂವತ್ಸರದ ಉಗಮವಾದುದು ಅತ್ಯಂತ ಅಭಿಮಾನದ ಸಂಗತಿ.

ಬೇಲೂರಿನ ಶಿಲಾಶಾಸನದ ಪ್ರಕಾರ ಕ್ರಿ.ಶ 1136ರಲ್ಲಿ ಬಿಟ್ಟಿದೇವನು(ವಿಷ್ಣುವರ್ಧನ) ತಮಿಳ್ನಾಡಿನ ಭೂಭಾಗವನ್ನು ಆಕ್ರಮಿಸಿದ್ದ ಎನ್ನುವುದು ತಿಳಿದು ಬರುತ್ತದೆ. ಆತನ ತರುವಾಯ ಒಂದನೆಯ ನರಸಿಂಹ, ಎರಡನೆಯ ಬಲ್ಲಾಳ, ಎರಡನೆಯ ನರಸಿಂಹ ಮುಂತಾದ ರಾಜರು ತಮಿಳ್ನಾಡಿನಲ್ಲಿ ಪಾಂಡ್ಯರ ಸಾಮರ್ಥ್ಯವನ್ನು ಕುಗ್ಗಿಸಿ ಹೊಯ್ಸಳ ರಾಜ್ಯಪತಾಕೆಯನ್ನು ಹಾರಿಸಿದ್ದರು. ಎರಡನೆಯ ನರಸಿಂಹನ ಮಗನಾದ ವೀರಸೋಮೇಶ್ವರನು(ಕ್ರಿ.ಶ.1235–54)ತಮಿಳುನಾಡಿನ ಕಣ್ಣಾನೂರನ್ನು ತನ್ನ ರಾಜಧಾನಿಯನ್ನಾಗಿಸಿ ತಮಿಳು ಪ್ರಾಂತವನ್ನಾಳುತ್ತಿದ್ದನು. ತಮಿಳುನಾಡಿನಲ್ಲಿ ದೊರೆತಿರುವ ಪ್ರತಿಯೊಂದು ಶಾಸನಗಳ ಕೊನೆಯಲ್ಲಿ ಕನ್ನಡ ಅಕ್ಷರಗಳಲ್ಲಿ ತಮ್ಮ ಆದಿ ಬಿರುದು ‘ಮಲೆ ಪರೂಲ್‌ಗಂಡ’ ಎನ್ನುವುದನ್ನು ಕೆತ್ತಿ ಹೊಯ್ಸಳರು ಕನ್ನಡ ಭಾಷಾಭಿಮಾನವನ್ನು ಶಾಶ್ವತವಾಗಿಸಿದ್ದಾರೆ.

ಕರ್ನಾಟಕದ ಇತಿಹಾಸದಲ್ಲಿ 10ರಿಂದ 13ನೆಯ ಶತಮಾನದ ಸುವರ್ಣಯುಗ ಕಾಲದಲ್ಲಿ ಕರ್ನಾಟಕದ ಹೊರಗೆ ಮಿಥಿಲೆಯಲ್ಲಿ ಕರ್ನಾಟಕ ರಾಜರು, ಬಂಗಾಳದಲ್ಲಿ ಸೇನರು ಹಾಗೂ ತಮಿಳ್ನಾಡಿನಲ್ಲಿ ಹೊಯ್ಸಳರು ಕರ್ನಾಟಕದ ಪತಾಕೆಯನ್ನು ಹಾರಾಡಿಸಿದ್ದು ಕನ್ನಡಿಗರೆಲ್ಲರಿಗೂ ಹೆಮ್ಮೆಯ ವಿಷಯ. ಪ್ರತಿಯೊಬ್ಬ ಕನ್ನಡಿಗನೂ ಓದಲೇ ಬೇಕಾದ ಈ ಅಮೂಲ್ಯ ಕೃತಿಯು ಈಗಾಗಲೇ ಐದು ಮುದ್ರಣಗಳನ್ನು ಕಂಡಿರುವುದು ಇದರ ಜನಪ್ರಿಯತೆಯ ಲಕ್ಷಣ.

ಕರ್ನಾಟಕದ ಚರಿತ್ರೆಯಲ್ಲಿ ಸಂಕ್ಷಿಪ್ತವಾಗಿ ಉಲ್ಲೇಖಿಸಲ್ಪಟ್ಟ ಹೊರನಾಡ ದಿಗ್ವಿಜಯದ ಸುಳಿವನ್ನು ಹಿಡಿದು, ಕನ್ನಡರಾಜರ ಅಲಕ್ಷಿತ ಚರಿತ್ರೆಯನ್ನು ಅವರ ವಂಶಾವಳಿ, ಆಡಳಿತ ವ್ಯವಸ್ಥೆ, ಧರ್ಮ, ಕಲೆ, ಸಾಹಿತ್ಯ ಎಲ್ಲವನ್ನೂ ಆಧಾರಸಹಿತ

ಆದಷ್ಟು ಸಂಕ್ಷಿಪ್ತವಾಗಿ ಕೇವಲ 72 ಪುಟಗಳಲ್ಲಿ ದಾಖಲಿಸಲಾಗಿದೆ. ಕರ್ನಾಟಕ ಇತಿಹಾಸದ ಗತವೈಭವದ ಮೇಲೆ ಬೆಳಕಿನ ಕಿರಣಗಳನ್ನು ಚೆಲ್ಲಿ ನಮ್ಮ ಮೈನವಿರೇಳಿಸುವ ದಿಕ್ಕಿನಲ್ಲಿ ಮಾಡಿದ ಸಾಹಸಕ್ಕಾಗಿ , ಪರಿಶ್ರಮಕ್ಕಾಗಿ, ಕನ್ನಡಾಭಿಮಾನಕ್ಕಾಗಿ ಆಗುಂಬೆ.ಎಸ್.ನಟರಾಜ್ ಅವರು ಅಭಿನಂದನಾರ್ಹರು. ಕರ್ನಾಟಕದ ಇತಿಹಾಸ ವಿಭಾಗ ಅಥವಾ ಒಂದು ವಿಶ್ವವಿದ್ಯಾಲಯವು ಮಾಡಬೇಕಾದ ಕೆಲಸವನ್ನು ಓರ್ವ ಬ್ಯಾಂಕ್ ಉದ್ಯೋಗಿ ಮಾಡಿರುವುದು ನಿಜಕ್ಕೂ ಪ್ರಶಂಸನೀಯವಾದ ಕಾರ್ಯ. ಆದರೆ ಈ ದಿಕ್ಕಿನಲ್ಲಿ ವಿಸ್ತ್ರತವಾದ ವಿಶೇಷ ಅಧ್ಯಯನ ನಡೆಸುವ ಅವಶ್ಯಕತೆಯಿದೆ. ■

## ಸದಸ್ಯರಲ್ಲಿ ಮನವಿ :

ತಮಗೆಲ್ಲಾ ತಿಳಿದಿರುವಂತೆ ಮೈಸೂರು ಅಸೋಸಿಯೇಷನ್ ಮುಂಬೈ ಸುಮಾರು ಒಂಭತ್ತು ದಶಕಗಳ ಅಸ್ತಿತ್ವವನ್ನು ಹೊಂದಿದೆ. ಈ ಸಂಸ್ಥೆಯು 1926 ರಿಂದ ಹಂತ ಹಂತವಾಗಿ ಬೆಳೆದು ಬಂದು ಮುಂಬೈ ನಗರಿಯಲ್ಲಿ ಕರ್ನಾಟಕದ ಛಾಪನ್ನು ಬಲವಾಗಿ ಮೂಡಿಸಿ ವಿವಿಧ ಸಾಮಾಜಿಕ ಹಾಗೂ ಸಾಂಸ್ಕೃತಿಕ ಸೇವೆಯಲ್ಲಿ ತನ್ನನ್ನು ತೊಡಗಿಸಿಕೊಳ್ಳುತ್ತಾ ಬಂದಿದೆ. ಮನುಷ್ಯನ ಜೀವನ ಚಕ್ರದಂತೆ, ಈ ರೀತಿಯ ಸಂಸ್ಥೆಗಳಿಗೂ ಸಹ ಜೀವನ ಚಕ್ರವಿರುತ್ತದೆ. ದೀರ್ಘಕಾಲದಲ್ಲಿ ಸಂಸ್ಥೆ ಯಶಸ್ವಿಯಾಗಿ ನಡೆಯಬೇಕಾದರೆ ಕಾಲಕ್ಕೆ ತಕ್ಕಂತೆ 'ಹೊಸ ಚಿಗುರು ಹಳೆ ಬೇರು' ಸಿದ್ಧಾಂತವನ್ನು ಅಳವಡಿಸಿಕೊಂಡು ಹೊಸ ತಲೆಮಾರಿನವರನ್ನು ನಮ್ಮ ಸಂಸ್ಕೃತಿಯೆಡೆ ಆಕರ್ಷಿಸಿ ಅದನ್ನು ಬೆಳೆಸಿಕೊಂಡು ಹೋಗುವಂತೆ ಪ್ರೇರೇಪಿಸಬೇಕು.

ಈ ನಿಟ್ಟಿನಲ್ಲಿ, ಮೈಸೂರು ಅಸೋಸಿಯೇಷನ್ ಮುಂಬರುವ ದಿನಗಳಲ್ಲಿ ಯಾವ ದೃಷ್ಟಿಕೋನವನ್ನು ತನ್ನದಾಗಿಸಿಕೊಳ್ಳಬೇಕು, ಯಾವ ರೀತಿಯ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಬೇಕು, ಯಾವ ಬೆಳವಣಿಗೆಗಳನ್ನು ಹಮ್ಮಿಕೊಳ್ಳಬೇಕು, ಮುಂಬರುವ ವರ್ಷಗಳ ಕಾರ್ಯವೈಖರಿ, ಕಾರ್ಯಕ್ರಮಗಳ ರೂಪುರೇಖೆಗಳು ಹೇಗಿರಬೇಕು? ಇದೆಲ್ಲದರ ಬಗ್ಗೆ ಪ್ರತಿಯೊಬ್ಬ ಸದಸ್ಯರೂ ಆಲೋಚಿಸಿ, ತಮ್ಮ ಆಲೋಚನೆಗಳನ್ನು ಲಿಖಿತರೂಪದಲ್ಲಿ (ಇ ಮೇಲ್ ರೂಪದಲ್ಲಿ ಅಥವಾ ಪತ್ರಮುಖೇನ) ಅಸೋಸಿಯೇಶನ್‌ಗೆ ಕಳುಹಿಸಿಕೊಡಬೇಕಾಗಿ ವಿನಂತಿ. ನಿಮ್ಮ ಸಹಕಾರವನ್ನು ಅಪೇಕ್ಷಿಸುವ

ಮೈಸೂರು ಅಸೋಸಿಯೇಷನ್ನಿನ ಕಾರ್ಯಕಾರಿ ಮಂಡಳಿ

email:kamalakantharaj@gmail.com



**ಸಮಸ್ತ ಕನ್ನಡ ಮನಸ್ಸುಗಳಿಗೆ**
**ದೀಪಗಳ ಹಬ್ಬ ದೀಪಾವಳಿಯ**
**ಹಾರ್ದಿಕ ಶುಭಾಶಯಗಳು**

**ಮೈಸೂರು ಅಸೋಸಿಯೇಶನ್**

## ನಾಟಕ ಕಮ್ಮಟ

ಆಗಸ್ಟ್ 15 ಮತ್ತು 17ನೇ ತಾರೀಕು ನಾಟಕದ ಕಮ್ಮಟವನ್ನು ಡಾ. ಮಂಜುನಾಥರವರು ಮೈಸೂರು ಅಸೋಸಿಯೇಶನ್‌ನಲ್ಲಿ ನಡೆಸಿಕೊಟ್ಟರು. ಇದರಲ್ಲಿ ದೊಡ್ಡವರು ಮತ್ತು ಮಕ್ಕಳೂ ಸಹ ಪಾಲ್ಗೊಂಡಿದ್ದರು. ಮೊಟ್ಟಮೊದಲಿಗೆ ನಾಟಕ ಎಂದರೇನು? ನಟನೆ ಅಂದರೇನು? ನಟ ಹೇಗಿರಬೇಕು? ನಾಟಕ ಯಾಕೆ ಮಾಡಬೇಕು? ಹೇಗಿರಬೇಕು? ಎಲ್ಲಿ ಮಾಡಬೇಕು? ಅಂತೆಲ್ಲ ಚರ್ಚೆಮಾಡಿದೆವು. ಇದನ್ನೆಲ್ಲ ಮಂಜುನಾಥ್‌ರವರು ಸರಿಯಾಗಿ ವಿವರಿಸಿ ಹೇಳಿದರು.

ನಾವು ನಮ್ಮ ದೇಹವನ್ನು ಹೇಗೆ ನಾಟಕದಲ್ಲಿ ಅಳವಡಿಸಿಕೊಳ್ಳಬೇಕು ಎನ್ನುವ ವಿಷಯ, ತಲೆ, ಕತ್ತು, ಬೆರಳುಗಳು, ಹಸ್ತ, ಕೈ, ಭುಜ, ತುಟಿ, ಕಾಲು, ಕಾಲುಬೆರಳು



ಇವುಗಳ ವಿಧವಿಧವಾದ ಚಲನೆಗಳನ್ನು ಮತ್ತು ಹೇಗೆ ಅವುಗಳನ್ನು ಉಪಯೋಗಿಸಿಕೊಳ್ಳಬಹುದು ಎಂದು ಹೇಳಿಕೊಟ್ಟರು.

ಉದಾ : ಒಂದೇ ಕಡೆ ಕೂತು, ಏನೂ ಆಸನವಿಲ್ಲದೆ ಹೇಗೆ Turn ಮಾಡುವುದು, ಕಾಲು ಬೆರಳ ಮೇಲೆ ನಡೆಯುವುದು, ಹಿಂದೆ ನೋಡದೆ ಹಿಂದೆ ನಡೆಯುವುದು ಹೀಗೆ ಕೆಲವು ನಡೆಗಳು ಸಂದರ್ಭಕ್ಕೆ ತಕ್ಕಂತೆ ಉಪಯೋಗಿಸುವ ಬಗೆಯನ್ನು ಕಲಿತೆವು, ಕೆಲವು ನೃತ್ಯ (Dance) Movements ಕೂಡಾ ಇತ್ತು. Individual Movements ಮತ್ತು group movements, mirror image movements ಇದರಲ್ಲಿ ನಾವು ಕಲಿಬೇಕಾದ್ದು ಇನ್ನೊಬ್ಬರನ್ನು ನೋಡಿ ಹೇಗೆ ನಾವು ನಮ್ಮ ನಡೆಯನ್ನು ಮಾಡಬೇಕು, ನೋಡುಗರಿಗೆ ಒಂದೇ ತರಹ ಕಾಣಬೇಕು ಎಂಬುದು.

ಎರಡನೇ ದಿನ ಕೆಲವು ಸಂದರ್ಭಗಳನ್ನು ಕೈಗೊಂಡು ಅದಕ್ಕೆ ಸರಿಯಾಗಿ ಮಾತು, ಗಂಡು ಹೆಣ್ಣಿನ ಪಾತ್ರ, ಹೆಣ್ಣು ಗಂಡಿನ ಪಾತ್ರ ಮಾಡಬೇಕು.

ಉದಾ : ಸಾವಿತ್ರಿ, ಸತ್ಯವಾನ, ಸೀತೆ, ಲಕ್ಷ್ಮಣ ಇದನ್ನು ನಾವು ಕ್ಲಾಸಲ್ಲೆ ಮಾಡಿ ತೋರಿಸಿದೆವು. ಬೇರೆ ಸಂದರ್ಭ ಅಂದರೆ, ದ್ರೌಪದಿ ವಸ್ತ್ರಾಪಹರಣ, ಜೂಜಿನ ದೃಶ್ಯ ಇದನ್ನು ಎಲ್ಲರಿಗೂ ಕೊಟ್ಟು, ಬೇರೆ ಬೇರೆ ತಂಡಗಳನ್ನು ಮಾಡಿಕೊಂಡು ಪ್ರದರ್ಶನ ಮಾಡಿದೆವು. ಇದರಲ್ಲಿ Voice Modulation ಹೇಗಿರಬೇಕೆಂದು ಹೇಳಿದರು.

ಇದನ್ನು ಸಹ ಅವರ ಶಕ್ತಿ ಅನುಸಾರವಾಗಿ ಮಾಡಿ ತೋರಿಸಿದರು. ಇದಕ್ಕೆ ಕಾಲಾವಕಾಶ 20 ನಿಮಿಷಗಳು. ಒಂದು ತಂಡದ ನಟನೆ ಆದಮೇಲೆ ಬೇರೆಯವರೆಲ್ಲ ಅದರ ಬಗ್ಗೆ ಚರ್ಚೆ, ವಿಮರ್ಶೆ ಮಾಡಿದೆವು. ಆಗ ಅರಿವಾಗುತ್ತದೆ ಇದನ್ನು ಇನ್ನೂ ಚೆನ್ನಾಗಿ ಪರಿಣಾಮಕಾರಿಯಾಗಿ ಮಾಡಬಹುದಿತ್ತು ಎಂದು. ನನಗೆ ಸಿಕ್ಕಿದ್ದು ಒಂದು ಗಂಡು ಪಾತ್ರ. ನಾನು ಈವರೆಗೆ ಅಸೋಸಿಯೇಶನ್‌ಗೆ Pant Shirt ಹಾಕ್ಕೊಂಡಿರಲಿಲ್ಲ. ಈಗ ಒಂದು ಅವಕಾಶ ಸಿಕ್ಕಿತು. ನಾನು Pant shirt ಹಾಕ್ಕೊಂಡು ನನ್ನ ಪಾತ್ರವನ್ನು ಮಾಡಿದೆ. ವೇಳೆಗೆ ಸರಿಯಾಗಿ ಕಾಫಿ, ತಿಂಡಿ, ಊಟದ ವ್ಯವಸ್ಥೆ ಮಾಡಿದ್ದರು. ಅಂತು 2 ದಿನದ ನಾಟಕ ಶಿಬಿರ ತುಂಬಾ Successful ಆಗಿ ನಡೆಯಿತು. ಕಾರ್ನಾಡರ 'ತಲೆದಂಡ', ಶ್ರೀರಂಗರ 'ಖರೋಖರ' 'ಲಕ್ಷ್ಮೀ ಸರಸ್ವತಿ' ಮತ್ತು ಮಕ್ಕಳ ನಾಟಕ 'ಕ್ಲಾಸ್‌ರೂಮು' – ಇದರ ಕೆಲವು ಸಂದರ್ಭಗಳನ್ನು ನಾಲ್ಕು ತಂಡಗಳಿಗೆ ಕೊಟ್ಟು ಪ್ರಯೋಗ ಮಾಡುವ ಅವಕಾಶ ಮಾಡಿಕೊಟ್ಟರು.

ನಮಗೆ ನಾಟಕವಾಡುವುದರಲ್ಲಿ ಅಭಿರುಚಿ ಇರುವವರಿಗೆ, ಅನೇಕ ವಿಷಯಗಳನ್ನು ತಿಳಿಯಲು ಇದೊಂದು ಸದಾವಕಶಾಶ ಸಿಕ್ಕಿತು. ಡಾ. ಮಂಜುನಾಥ ಅವರಿಗೆ ನಮ್ಮೆಲ್ಲರ ವಂದನೆಗಳು.

**– ಲಕ್ಷ್ಮೀ ಸೀತಾರಾಂ**

Date of Publication : 10th of every month RNI No. 040015 / 83
MH / MR / North East / 093 / 2012- 2014 Date of Posting : 10th of every month at Mumbai Patrika Channel Sorting Office G.P.O.

## FORTHCOMING PROGRAMMES

| Day | Date | Timing | Programmes |
|---|---|---|---|
| Saturday | 18th October 2014 | 7.00 p.m. | by Smita Bellur - Hindustani Classical vocalist and Sufi singer **"Anubhaava Lahari - Mystic Verses in Classical ragas"** |
| Tuesday | 04th November 2014 | 7.00 p.m. | "Fashion Show" from KSIC Bangalore |
| Tuesday to Saturday | 04th November 2014<br>08th November 2014 | 10.00 a.m. onwards daily | The Mysore Association and KSIC Bangalore jointly presenting 5 days Saree, Dress Materials Exhibition cum sale |
| Saturday | 08th November 2014 | 6.30 p.m. | A Lecture on Haribhaktasara by **Shri. Nagarahalli Acharya** followed by Karnatic vocal by **Vid. T.N.Ashok** On the occasion of **Kanakadasa Jayanti** |

## ಕನ್ನಡ–ಮರಾಠಿ ಬಾಂಧವ್ಯದ ಹೊಸ ಸುವರ್ಣ ಕೊಂಡಿ ಆಗಲಿರುವ ಸರೋಜಿನಿ ತರೆ



ಮರಾಠಿ ಮಾತೃಭಾಷೆಯ ಮಹಿಳೆ ಶ್ರೀಮತಿ ಸರೋಜಿನಿ ಭಾಸ್ಕರ ತರೆ, ಮುಂಬೈಯಲ್ಲಿಯೇ ಹುಟ್ಟಿ ಬೆಳೆದಿದ್ದಾರೆ. ಕನ್ನಡ ವಿಷಯದಲ್ಲಿ ಎಂ.ಎ. ಪದವಿಯನ್ನು ಪ್ರಥಮ ಶ್ರೇಣಿಯಲ್ಲಿ ಮುಂಬೈ ವಿಶ್ವವಿದ್ಯಾಲಯದಿಂದ ಪಾಸಾಗಿ ಒಂದು ಹೊಸ ದಾಖಲೆಯನ್ನೇ ಸ್ಥಾಪಿಸಿದ್ದಾರೆ.

ಸರೋಜಿನಿಯವರು(೧೯೫೪) ಮೂಲತಃ ಪಾಲಘರ್ ಜಿಲ್ಲೆಯ ಉಸರಣಿಗಾಂವ್‌ನವರು. (ವಿರಾರದ ನಂತರ ಬರುವ ಸಫಾಲೆ ಸ್ಟೇಶನ್‌ಗೆ ಸಮೀಪ). ಬಾಲ್ಯ ಕಳೆದದ್ದು ಪರೇಲಿನಲ್ಲಿ. ಶಿರೋಡಕರ್ ಹೈಸ್ಕೂಲಿನಲ್ಲಿ ಎಸ್.ಎಸ್.ಸಿ.ವರೆಗೆ ಓದಿ ಮುಂದೆ ರೂಯಿಯಾ ಕಾಲೇಜಿನ ವಿದ್ಯಾರ್ಥಿಯಾಗಿ ಬಿ.ಎ.(ಅರ್ಥಶಾಸ್ತ್ರ ಮತ್ತು ರಾಜ್ಯಶಾಸ್ತ್ರ) ಡಿಗ್ರಿಯನ್ನು ೧೯೭೬ರಲ್ಲಿ ಪಡೆದರು.ಅದೇ ವರ್ಷ ಬ್ಯಾಂಕ್ ಆಫ್ ಇಂಡಿಯಾ ಸೇರಿ, ಅಲ್ಲಿಯೇ ಅಧಿಕಾರಿಯಾಗಿ, ೨೦೧೧ರಲ್ಲಿ ಐಚ್ಛಿಕ ನಿವೃತ್ತಿ ಪಡೆದರು. ಅವರ ಪತಿ ಶ್ರೀ ಭಾಸ್ಕರ್ ತರೆ ಅವರು ಏರ್ ಇಂಡಿಯಾದಲ್ಲಿ ಕೆಲಸಮಾಡುತ್ತಿದ್ದಾರೆ. ಅವರ ಏಕಮಾತ್ರ ಪುತ್ರ ಇನ್ಫಾರ್ಮೇಶನ್ ಟೆಕ್ನಾಲಜಿ ಕ್ಷೇತ್ರದಲ್ಲಿ ಪಿಂಪ್ರಿಯಲ್ಲಿ ಕೆಲಸ ಮಾಡುತ್ತಿದ್ದಾನೆ. ನಿವೃತ್ತಿಯ ನಂತರ ಫ್ಯಾಶನ್ ಡಿಸೈನ್ ಮೊದಲಾದ ಹವ್ಯಾಸಗಳಲ್ಲಿ ತೊಡಗಿದರು.

೨೦೧೦ರಲ್ಲಿ ಸ್ನೇಹಿತೆಯೊಂದಿಗೆ ಮುಂಬೈ ವಿಶ್ವವಿದ್ಯಾಲಯದ ಕಲೀನಾ **ಕ್ಯಾಂಪಸ್‌ಗೆ ಬಂದಾಗ ಕನ್ನಡ ವಿಭಾಗದ ಮುಖ್ಯಸ್ಥ ಡಾ.ಜಿ.ಎನ್.ಉಪಾಧ್ಯರನ್ನು ಅಕಸ್ಮಾತ್ತಾಗಿ ಭೇಟಿಯಾದರು. ಡಾ.ಉಪಾಧ್ಯರು ಇವರಿಗೆ ಕನ್ನಡ ಕಲಿಯಲು, ಸರ್ಟಿಫಿಕೇಟ್ ಕೋರ್ಸ್ ಮಾಡಲು ಸ್ಫೂರ್ತಿ ನೀಡಿದರು. ಮುಂದೆ ಕನ್ನಡ ವಿಷಯ ಆರಿಸಿ ಡಿಪ್ಲೊಮಾ ಕೋರ್ಸ್ ಮುಗಿಸಿದರು. ಅಲ್ಲಿ ಇವರು ಬಹಳ ಪ್ರತಿಭೆ ತೋರಿದ್ದರಿಂದ ಎಂ.ಎ ತರಗತಿಗೆ ಪ್ರವೇಶ ಪಡೆಯುವಂತೆ ಡಾ. ಉಪಾಧ್ಯರು ಹೇಳಿದರು. ೨೦೧೪ರಲ್ಲಿ ಕನ್ನಡ ಎಂ.ಎ. ಪದವಿಯನ್ನು ಪ್ರಥಮ ಶ್ರೇಣಿಯಲ್ಲಿ(೬೩%)ಪಾಸಾದರು. ಇವರಿಗೆ ಕನ್ನಡದಿಂದ ಮರಾಠಿಗೆ, ಮರಾಠಿಯಿಂದ ಕನ್ನಡಕ್ಕೆ ಉತ್ತಮ ಸಾಹಿತ್ಯ ಅನುವಾದಿಸುವ ಇಚ್ಛೆ ಇದೆ. ಪುಸ್ತಕ ವಿಮರ್ಶೆ ಹಾಗೂ ಪ್ರಬಂಧಗಳನ್ನೂ ಬರೆದಿರುತ್ತಾರೆ. ಇವರು ಕನ್ನಡ–ಮರಾಠಿ ಬಾಂಧವ್ಯದ ಹೊಸ ಸುವರ್ಣದ ಕೊಂಡಿಯಾಗುಂತೆ ಕಾರ್ಯೋನ್ಮುಖರಾಗಲಿ ಎಂದು ಹಾರೈಸೋಣ.**

## Sprouted Moong Kosumbri



**Ingredients**

1. Moong - 200 gms (Sprouted)
2. Coconut grated - 1 small cup
3. Green Chilli - 5-7
4. Fresh Coriander, Leaves Chopped
5. Salt to taste.
6. Lemon Juice
7. Mustard Seeds and Hing ka Tadka.

**Method :**

Moog has to be soaked in water for 8-10 hrs. then drain all the water keep tightly closed for the moong to sprout.

Take little oil heat add mustard seeds and Hing then green Chillis. Put off the gas and add. sprouted Moong, salt, pinch of sugar, lemon juice and mix well. Finally add Chopped couriander leaves and fresh grated coconut.

***- Ms. Gauri Gopalkrishna***

## SEKETTU



**Ingredients**

1. Boiled rice - 1 Cup
2. Raw rice - 1 Cup
3. Coconut $^1/_2$ greated
4. Jaggery - $^1/_4$ kg.
5. Elaichi - 4-6
6. Salt to taste
7. Haldi powder - 1 pinch

**Method**

1. Mix both rice and soak in water 2-3 hours.
2. Drain water add salt & haldi
3. Grind together to smoth paste with adding water.
4. Mix coconut and jagger and make in to a melted syrup by heating.
5. Add elaichi powder to the syrup.
6. Make small round rolls of the dough by making it in a thin cloth put the thick syrup in the rolled dough and fold it.
7. Steam cook the rolled chapathi like pieces.

***- Vimala Sudhakar***

Edited, Printed & Published by Mrs. Girija Shastry, On behalf of the Mysore Association, Mumbai. Tel.: 2402 4647 • Fax : 2401 0574
Email : mysoreassociation.mumbai@gmail.com
Printed at Aarati Art Printers, Fort, Mumbai - 400 001. * 2266 3361 / 2266 5938